ವಚನ ಸಂಶೋಧನ ಪಿತಾಮಹ

ಡಾ. ಫ. ಗು. ಹಳಕಟ್ಟಿಯವರು

• ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

II

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ಬಿಜಾಪುರ ಲಿಂಗಾಯತ ಜಿಲ್ಲಾ ವಿದ್ಯಾಭಿವೃದ್ಧಿ ಸಂಸ್ಥೆಯ
ಸಂಸ್ಥಾಪಕರಾದ

ವಚನ ಸಂಶೋಧನ ಪಿತಾಮಹ

ಡಾ. ಫ. ಗು. ಹಳಕಟ್ಟಿಯವರು

(ಪ್ರತಿ ವರುಷ ಜುಲೈ-೨ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ)

ಲೇಖಕರು
ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)
ಎಂ.ಎ.(ತತ್ವಜ್ಞಾನ),ಎಲ್‌ಎಲ್.ಬಿ.(ಸ್ಪೇಶಲ್),
ಎಂ.ಎ.(ಹಿಂದಿ), ಎಂ.ಎ.(ಕನ್ನಡ), ಸಿ.ವಾಯ್.ಇಡಿ.(ಯೋಗ)
ಗೌ॥ ಸಂಪಾದಕರು, 'ಬಸವ ಬೆಳಗು' ಪತ್ರಿಕೆ
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

೨೦೨೨

ಜಗಜ್ಯೋತಿ ಬಸವೇಶ್ವರ ಅನುಭಾವ ಪೀಠ
ರಾಮದುರ್ಗ-೫೯೧ ೧೨೩. ಜಿ. ಬೆಳಗಾವಿ

ವಚನ ಸಂಶೋಧನ ಪಿತಾಮಹ– ಡಾ. ಫ. ಗು. ಹಳಕಟ್ಟಿಯವರು

ಲೇಖಕರು : **ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)**
ಎಂ.ಎ.(ತತ್ವಜ್ಞಾನ),ಎಲ್‌ಎಲ್.ಬಿ.(ಸ್ಪೇಶಲ್),
ಎಂ.ಎ. (ಕನ್ನಡ), ಎಂ.ಎ.(ಹಿಂದಿ),
ಸಿ.ವಾಯ್.ಇಡಿ. (ಯೋಗ ಶಿಕ್ಷಣ)
ಗೌ॥ ಸಂಪಾದಕರು, ಬಸವ ಬೆಳಗು ಪತ್ರಿಕೆ
ರಾಮದುರ್ಗ–೫೯೧ ೧೨೩. ಜಿ॥ ಬೆಳಗಾವಿ

© ಲೇಖಕರವು

ಪ್ರಕಾಶಕರು : **ಜಗಜ್ಯೋತಿ ಬಸವೇಶ್ವರ ಅನುಭಾವ ಪೀಠ**
'ಬಸವ ಬೆಳಗು', ಮಹಾಂತೇಶ ನಗರ,
ರಾಮದುರ್ಗ–೫೯೧ ೧೨೩. ಜಿ. ಬೆಳಗಾವಿ

ಪ್ರಥಮ ಮುದ್ರಣ : ಜುಲೈ–೨, ೧೯೮೦
ಐದನೆಯ ಮುದ್ರಣ : ಜುಲೈ–೨, ೨೦೨೨
(ಪರಿಷ್ಕೃತ ಆವೃತ್ತಿ)

ಪ್ರತಿಗಳು : ೧೦೦೦

ಪುಟಗಳು : ೫೨

ಪೇಪರ ಬಳಸಿದ್ದು : ಮ್ಯಾಪ್ಲಿಥೋ ಮತ್ತು ಆರ್ಟ ಕಾರ್ಡ ಕವ್ಹರ ೨೫೦ ಜಿ.ಎಸ್.ಎಂ.

ಬೆಲೆ : ₹ ೪೦/– **(ನಾಲ್ವವತ್ತು ರೂಪಾಯಿಗಳು)**

ಮುಖಪುಟ ವಿನ್ಯಾಸ : ಶ್ರೀ ರವೀಂದ್ರ ವಿಶ್ವಜ್ಞ, ಧಾರವಾಡ.

ಮುದ್ರಕರು : **ಶ್ರೀ ಹುಚ್ಚೇಶ್ವರ ಆಫ್‌ಸೆಟ್ ಪ್ರಿಂಟರ್ಸ**
ರಾಮದುರ್ಗ–೫೯೧ ೧೨೩. ಜಿ॥ ಬೆಳಗಾವಿ
ಜಂಗಮವಾಣಿ : ೯೦೩೬೬ ೬೬೬೪೨

ಲಿಂಗಾಯತ ಧರ್ಮಪಿತ
ಜಗಜ್ಯೋತಿ

ವಿಶ್ವಗುರು ಬಸವಣ್ಣನವರು
(೧೧೦೫-೧೧೬೭)

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ಲೇಖಕರ ನಿವೇದನೆ

ಕಾಲದ ಗರ್ಭದಲ್ಲಿ ಮರೆಯಾಗಿ ಹೋಗಿದ್ದ ೧೨ನೇ ಶತಮಾನದ ಬಸವಾದಿ ಶಿವಶರಣರ ವಚನಗಳನ್ನು ಸಂಶೋಧಿಸಿ, ಪರಿಷ್ಕರಿಸಿ, ಮುದ್ರಿಸಿ ೨೦ನೇ ಶತಮಾನದಲ್ಲಿ ಪ್ರಪಂಚದ ಮಾನವಕುಲಕೋಟಿಯ ಕರಸ್ಥಲಕ್ಕೆ ನೀಡಿದ ಯುಗಪುರುಷ, ನೂತನ ಶರಣ, **ವಚನ ಸಂಶೋಧನ ಪಿತಾಮಹ** ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರು.

ಬಸವಭೂಮಿಯಾದ ವಿಜಾಪುರ ಜಿಲ್ಲೆಯನ್ನು ಕಾರ್ಯಕ್ಷೇತ್ರವಾಗಿಸಿಕೊಂಡು, ಬಿ.ಎಲ್.ಡಿ.ಇ. ಸಂಸ್ಥೆ ಸ್ಥಾಪಿಸಿ, ಶ್ರೀ ಸಿದ್ಧೇಶ್ವರ ಬ್ಯಾಂಕ ಸ್ಥಾಪಿಸಿ, ಸಹಕಾರಿ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿ, ವಚನಶಾಸ್ತ್ರವನ್ನು ಸಂಶೋಧಿಸಿ, ಶಿವಾನುಭವ, ನವ ಕರ್ನಾಟಕ ಪತ್ರಿಕೆಗಳನ್ನು ನಡೆಸಿ, ಸಾಹಿತ್ಯ-ಶಿಕ್ಷಣ-ಸಹಕಾರಿ ರಂಗಗಳಲ್ಲಿ ಅಮೂಲ್ಯ ಸೇವೆಸಲ್ಲಿಸಿದ ಮಹಾನ್ ಚೇತನ, ಶರಣ ಫ. ಗು. ಹಳಕಟ್ಟಿಯವರು.

ಈ ಶರಣರ ಶತಮಾನೋತ್ಸವವನ್ನು ಧಾರವಾಡದ ನಮ್ಮ ಬಸವತತ್ತ್ವ ಪ್ರಸಾರ ಸಂಸ್ಥೆಯ ಮೂಲಕ ಪ್ರಪ್ರಥಮವಾಗಿ ೧೯೮೦-೮೧ರಲ್ಲಿ ರಾಜ್ಯಮಟ್ಟದಲ್ಲಿ ಆಚರಿಸಿದೆವು. ೧೯೬೦ರಲ್ಲಿ ನಿಂತುಹೋಗಿದ್ದ ಶಿವಾನುಭವ ಪತ್ರಿಕೆಯನ್ನು ೧೯೮೧ ರಲ್ಲಿ ಮರಳಿ ಪ್ರಾರಂಭಿಸಿ ಹಳಕಟ್ಟಿಯವರ ಕಾರ್ಯದ ನೆನಹು ಸಮಾಜದಲ್ಲಿ ನಿರಂತರ ಉಳಿಯುವಂತೆ ಮಾಡಿದೆವು.

ನಾನು ಬಾಲ್ಯದಲ್ಲಿ ಶರಣ ಹಳಕಟ್ಟಿಯವರನ್ನು (೧೯೫೦ ರಿಂದ ೧೯೬೪ರ ವರೆಗೆ) ಚಾಂದಕವಠೆಯಲ್ಲಿ, ಬಂಥನಾಳದಲ್ಲಿ, ಸಿಂದಗಿಯಲ್ಲಿ, ವಿಜಾಪುರದಲ್ಲಿ ದರ್ಶನ ಪಡೆದಿದ್ದೇನೆ. ಬಾಲ್ಯದಿಂದಲೂ ಶ್ರೀಯುತರು ಪ್ರಕಟಿಸಿದ ವಚನ ಗ್ರಂಥಗಳನ್ನು, ಶಿವಾನುಭವ ಪತ್ರಿಕೆಯನ್ನು ಓದುತ್ತ ಬೆಳೆದಿದ್ದೇನೆ. ಇಂತಹ ಪುಣ್ಯ ಪುರುಷರ ಜೀವನ-ಸಾಧನೆ ನಾಡಿನ ಯುವ ಜನಾಂಗಕ್ಕೆ ನಾಡಜನತೆಗೆ ಪರಿಚಯವಾಗಲಿ ಎಂಬ ಉದ್ದೇಶದಿಂದ ಈ ಹೊತ್ತಿಗೆಯನ್ನು ರಚಿಸಲಾಗಿದೆ. ಇಂದಿನ ಶಿವಾನುಭವ ಪತ್ರಿಕೆಯ ಸಂಪಾದಕ ಮಂಡಲಿಯ ಸದಸ್ಯನಾಗಿ ಸೇವೆ ಸಲ್ಲಿಸುವ ಭಾಗ್ಯ ನನ್ನದಾಗಿದೆ. ಹಳಕಟ್ಟಿ ಶರಣರು ಸ್ಥಾಪಿಸಿದ ಬಿ.ಎಲ್.ಡಿ.ಇ. ಸಂಸ್ಥೆಯ ಕೆ.ಸಿ.ಪಿ. ಸೈನ್ಸ್ ಕಾಲೇಜಿನಲ್ಲಿ ಓದಿ ಬಿ.ಎಸ್‌ಸಿ. ವಿಜ್ಞಾನ ಪದವಿ ಪಡೆದ ಭಾಗ್ಯವೂ ನನ್ನದು.

ಈ ಕೃತಿಯ ಬರವಣಿಗೆಗೆ ಸಹಾಯ-ಸಹಕಾರ ನೀಡಿದ ಶ್ರೀಮತಿ ಪ್ರೊ. ಕಲ್ಯಾಣಮ್ಮ ಲಂಗೋಟಿ ಅವರಿಗೂ, ಧಾರವಾಡದ ಬಸವತತ್ತ್ವ ಪ್ರಸಾರ ಸಂಸ್ಥೆಯ ಶರಣ ಬಂಧುಗಳಿಗೂ ಶರಣುಗಳು.

೨-೭-೧೯೮೦

-ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

ಶರಣ ಡಾ. ಫ. ಗು. ಹಳಕಟ್ಟಿಯವರನ್ನು ರೂಪಿಸಿದ
ಅವರ ಪೂಜ್ಯ ತಂದೆಯವರಾದ

ಶ್ರೀ ಗುರುಬಸಪ್ಪ ಹಳಕಟ್ಟಿಯವರು ಸಾ. ಧಾರವಾಡ
(೧೮೫೪–೧೯೩೬)

ದಿನಾಂಕ : ೨೩-೧೦-೧೯೧೦ ರಂದು ವಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ಸ್ಥಾಪನೆಯ ಕಾಲಕ್ಕೆ ಕೂಡಿದ್ದ ಲಿಂಗಾಯತ ಸಮಾಜದ ಹಿರಿಯರು

ಡಾ. ಫ. ಗು. ಹಳಕಟ್ಟಿಯವರು (ಕುಳಿತವರಲ್ಲಿ ಎಡಗಡೆಯಿಂದ ೪ನೆಯವರು)

ಸ್ವಂತ ಮನೆ ಮಾರಾಟ ಮಾಡಿ ಖರೀದಿಸಿದ
'ಹಿತಚಿಂತಕ ಪ್ರಿಂಟಿಂಗ್ ಪ್ರೆಸ್'

ಒಟ್ಟು ೨೫ ಸಾವಿರ ಪುಟ ವಚನಸಾಹಿತ್ಯವನ್ನು ಮುದ್ರಿಸಿ ಸಾರ್ಥಕ್ಯ ಪಡೆದ
'ಹಿತಚಿಂತಕ ಮುದ್ರಣಾಲಯ'ದ ಯಂತ್ರ

ಶರಣ ಫ. ಗು. ಹಳಕಟ್ಟಿಯವರು ಬಾಳಿದ ಬಾಡಿಗೆ ಮನೆ

ಮೇಲೆ ಗುರುತು ಹಾಕಿದ ಕೋಣೆಯಲ್ಲಿ ಕೊನೆಯುಸಿರೆಳೆದರು.
ಹಳಕಟ್ಟಿಯವರ ಸದಾವಕಾಲದ ಸಂಚಾರ ಸಾಧನವಾದ ಬೈಸಿಕಲ್

೭೫ ವರ್ಷ ಬಾಳಿದ್ದ
ಡಾ॥ ಹಳಕಟ್ಟಿಯವರ ಪತ್ರಿಕೆ


ಶಿವಾನುಭವ

'ಶಿವಾನುಭವ'ದ ಪ್ರಥಮ ಸಂಚಿಕೆ
(೧-೨-೧೯೨೬)

ಕರ್ನಾಟಕ ಏಕೀಕರಣಕ್ಕಾಗಿ
ಪ್ರಾರಂಭಿಸಿದ್ದ ನವಕರ್ನಾಟಕ ಪತ್ರಿಕೆ


ನವಕರ್ನಾಟಕ.

ನವಕರ್ನಾಟಕ ವಾರ ಪತ್ರಿಕೆ
(೬-೧೦-೧೯೨೭)

ವಿಜಾಪುರದ ಸಿದ್ಧೇಶ್ವರ ಬ್ಯಾಂಕಿನವರು ಹಳಕಟ್ಟಿ ಶರಣರಿಗೆ
ಹಮ್ಮಿಣಿ ಅರ್ಪಿಸಿದ ಸಂದರ್ಭ (೨೫-೪-೧೯೫೭)



ಪೂಜ್ಯ ಬಂಥನಾಳ ಶಿವಯೋಗಿಗಳು, ಶ್ರೀ ಬಿ.ಡಿ. ಜತ್ತಿಯವರು,
ಡಾ॥ ಫ. ಗು. ಹಳಕಟ್ಟಿಯವರು ಹಾಗೂ ಬ್ಯಾಂಕಿನ ಅಧ್ಯಕ್ಷರು, ಸದಸ್ಯರು

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ವಚನ ಸಂಶೋಧನ ಪಿತಾಮಹ

ಶರಣ ಡಾ. ಫ. ಗು. ಹಳಕಟ್ಟಿಯವರು

ಜೀವನ-ಸಾಧನೆ-ವಿಚಾರಗಳು

ಮರ್ತ್ಯಲೋಕದ ಮಹಾಮನೆ :

ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಕರ್ತನಟ್ಟಿದನಯ್ಯಾ ಒಬ್ಬ ಶರಣನ,
ಆ ಶರಣ ಬಂದು, ಕಲ್ಯಾಣವೆಂಬ ಶಿವಪುರವ
ಕೈಲಾಸವ ಮಾಡಿ,
ರುದ್ರಗಣ ಪ್ರಮಥಗಣಂಗಳೆಲ್ಲರ ಹಿಡಿತಂದು,
ಅಸಂಖ್ಯಾತರೆಂದು ಹೆಸರಿಟ್ಟು ಕರೆದು,
ಭಕ್ತಿಯ ಕುಳಸ್ಥಳವ,
ಶ್ರುತ ದೃಷ್ಟ ಪವಾಡವಂ ಮೆರೆದು ತೋರಿ,
ಜಗವರಿಯೆ ಶಿವಾಚಾರದ ಧ್ವಜವನೆತ್ತಿಸಿ,
ಮರ್ತ್ಯಲೋಕ ಶಿವಲೋಕವೆರಡಕ್ಕೆ ನಿಚ್ಚಣಿಕೆಯಾದನು.
ಆ ಶಿವಶರಣನ ಮನೆಯೊಳಗಿಪ್ಪ
ಶಿವಗಣಂಗಳ ತಿಂಥಿಣಿಯ ಕಂಡು,
ಎನ್ನ ಮನ ಉಬ್ಬಿ ಕೊಬ್ಬಿ ಓಲಾಡುತಿರ್ದೆನಯ್ಯಾ,
ನಮ್ಮ ಗುಹೇಶ್ವರನ ಶರಣ ಸಂಗನಬಸವಣ್ಣನ
ದಾಸೋಹದ ಘನವನೇನೆಂದೆನಬಹುದು
ನೋಡಾ ಸಿದ್ಧರಾಮಯ್ಯಾ.

-ಅಲ್ಲಮ ಪ್ರಭುದೇವರ ವಚನ

ಕರ್ತಾರನ ಕಮ್ಮಟವೆನಿಸಿರುವ ಈ ಮರ್ತ್ಯಲೋಕದ ಮಹಾಮನೆಯು ಅಂದರೆ ಈ ಜಗತ್ತು ಹಾಳಾಗಿ ಹೋಗಬಾರದೆಂದು ನಿರಾಕಾರ ಪರಶಿವನ ಸಂಕಲ್ಪವೆಂಬಂತೆ, **ಜಗಜ್ಯೋತಿ ಬಸವಣ್ಣನವರು** ೧೨ನೇ ಶತಮಾನದಲ್ಲಿ ವಿಜಯಪುರ ಜಿಲ್ಲೆಯ ಇಂಗಳೇಶ್ವರ-ಬಾಗೇವಾಡಿಯಲ್ಲಿ ಆಗಮಿಕ ಶೈವ ಬ್ರಾಹ್ಮಣ ಕುಲದ ಮಾದರಸ-ಮಾದಲಾಂಬಿಕೆ ದಂಪತಿಗಳ ಉದರದಲ್ಲಿ ಕ್ರಿ.ಶ. ೧೧೧೦ರಲ್ಲಿ ಜನಿಸಿದರು.

ಮಾನವಕುಲದ ಕಲ್ಯಾಣ-ಸಕಲಜೀವರಾಶಿಗಳ ಲೇಸಿಗಾಗಿ 'ಕರ್ಮಲತೆಯಂತಿರ್ದ ಕರ್ಮಠ ಸಂಪ್ರದಾಯದ ಜನ್ನಿವಾರಮಂ ಕಿತ್ತು ಬಿಸುಟು' ಬಾಗೇವಾಡಿ ತೊರೆದು ಕಪ್ಪಡಿ ಸಂಗಮದ ಗುರುಕುಲಕ್ಕೆ ಬಂದು, ಅಲ್ಲಿ ಹನ್ನೆರಡು ವರುಷ ಭಾರತೀಯ ಧರ್ಮ-ಅಧ್ಯಾತ್ಮ, ವೇದ-ಶಾಸ್ತ್ರ-ಆಗಮ-ಪುರಾಣ-ಕಾವ್ಯಗಳ ಅಧ್ಯಯನ ಮಾಡಿ, ಪುರೋಹಿತಶಾಹಿ ದೇವಾಲಯ ಸಂಸ್ಕೃತಿಯ ಶೋಷಣೆಯ ನಿವಾರಣೆಗಾಗಿ **'ಇಷ್ಟಲಿಂಗ'** ಸಂಶೋಧಿಸಿ ಹೊಸ ಪರಂಪರೆಯ ವಿನೂತನ ಲಿಂಗಾಯತ ಧರ್ಮ-ಸಮಾಜ-ಸಂಸ್ಕೃತಿಯನ್ನು ಸ್ಥಾಪಿಸಿದರು.

ಕಪ್ಪಡಿ ಸಂಗಮದಿಂದ ಮಂಗಳವಾಡಿ, ಅನಂತರ ಚಾಲುಕ್ಯ ಸಾಮ್ರಾಜ್ಯದ ರಾಜಧಾನಿ ಕಲ್ಯಾಣಕ್ಕೆ ಆಗಮಿಸಿ ಕಲಚೂರ್ಯ ಬಿಜ್ಜಳ ಚಕ್ರವರ್ತಿಯ ಆಸ್ಥಾನದಲ್ಲಿ ತಮ್ಮ ಪ್ರತಿಭೆ ಬುದ್ಧಿಮತ್ತೆ, ಕ್ರಿಯಾಶಕ್ತಿ, ಜನಕಲ್ಯಾಣದ ಕಾರ್ಯ ಯೋಜನೆಗಳಿಂದ ರಾಜಮನ್ನಣೆ-ಜನಮನ್ನಣೆ ಗಳಿಸುತ್ತಾ ಕರಣಿಕರಾಗಿ, ಲೆಕ್ಕ ತಪಾಸಣಾಧಿಕಾರಿಯಾಗಿ, ಭಂಡಾರಿಯಾಗಿ, ಹಿರಿಯ ದಣ್ಣಾಯಕರಾಗಿ, **ಪ್ರಧಾನಿ**ಯಾಗಿ ಕಾರ್ಯನಿರ್ವಹಿಸಿದರು.

ಕ್ರಿ.ಶ. ೧೧೪೦ರಲ್ಲಿ ವಿಶ್ವವಿನೂತನವಾದ ಪ್ರಪಂಚದ ಪ್ರಪ್ರಥಮ 'ಸಮಾಜೋ-ಧಾರ್ಮಿಕ ಪಾರ್ಲಿಮೆಂಟ್' ಎಂದೆನಿಸಿದ **'ಅನುಭವ ಮಂಟಪ'**ವನ್ನು ಸ್ಥಾಪಿಸಿ, ತನ್ಮೂಲಕ ಅರಿವು-ಆಚಾರ-ಅನುಭಾವಗಳಿಂದೊಡಗೂಡಿದ ಅಷ್ಟಾವರಣ-ಪಂಚಾಚಾರ-ಷಟ್‌ಸ್ಥಲ-ಲಿಂಗಾಂಗ ಸಾಮರಸ್ಯ (ಶಿವಯೋಗ)ದ **ಲಿಂಗಾಯತ ಧರ್ಮ**-ಸಮಾಜ-ಸಂಸ್ಕೃತಿಯನ್ನು ರೂಪಿಸಿ **'ಧರ್ಮಪಿತ'**ರೆಂದೆನಿಸಿದರು.

ಶಿವಯೋಗಿ ಸಿದ್ಧರಾಮೇಶ್ವರರು ಹೇಳಿರುವಂತೆ-

ಕರುಣಿ ಬಸವಾ, ಕಾಲಹರ ಬಸವಾ, ಕರ್ಮಹರ ಬಸವಾ
ನಿರ್ಮಳ ಬಸವಾ, ಶಿವಜ್ಞಾನಿ ಬಸವಾ,
ನಿಮ್ಮ ಧರ್ಮವಯ್ಯಾ ಈ ಭಕ್ತಿಯ ಪಥವು,
ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯಾ
ನಿಮಗೂ, ಎನಗೂ, ನಿಮ್ಮ ಶರಣರಿಗೂ
ಬಸವಣ್ಣನ ಧರ್ಮವಯ್ಯಾ

ಇಂತಪ್ಪ ಬಸವಪ್ರಣೀತ ಲಿಂಗವಂತ ಧರ್ಮ-ಪರಂಪರೆಯ ಅನುಭಾವ ಮಂಟಪಕ್ಕೆ ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ **೭೭೦ ಅಮರಗಣಂಗಳೆಂದೆನಿಸಿದ** ಅಲ್ಲಮಾದಿ ಶಿವಶರಣ ಶರಣೆಯರು ಆಗಮಿಸಿದರು. ವಿಪ್ರಮೊದಲು ಅಂತ್ಯಜಕಡೆಯಾಗಿ ಶಿವಭಕ್ತರೆಲ್ಲ ಸಮತೆ-ಸ್ವಾತಂತ್ರ್ಯ-ಬಂಧುತ್ವ-ಮಾನವೀಯತೆಯ ನೆಲಗಟ್ಟಿನ ಮೇಲೆ ಒಗ್ಗೂಡಿದರು.

ಬಸವಾದಿ ಶರಣರ ಈ ವಿನೂತನ ಲಿಂಗಾಯತ ಧರ್ಮ-ಸಿದ್ಧಾಂತವು ವರ್ಗಭೇದ

ರಹಿತ, ವರ್ಣಭೇದ ರಹಿತ, ಆಶ್ರಮ ಭೇದರಹಿತ, ಸ್ತ್ರೀ-ಪುರುಷರೆಂಬ ಲಿಂಗಭೇದ ರಹಿತ, ಜಾತಿಭೇದ ರಹಿತ, ವಿಶ್ವ ಧರ್ಮದ ಮೌಲ್ಯಗಳನ್ನೊಳಗೊಂಡಿತು. ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಹೊಲೆಯರ ಶಿವನಾಗಮಯ್ಯ, ಸಮಗಾರ ಹರಳಯ್ಯ-ಕಲ್ಯಾಣಮ್ಮ, ಜೇಡರ ದಾಸಿಮಯ್ಯ-ದುಗ್ಗಳೆ, ಅಲ್ಲಮಪ್ರಭು, ಚೆನ್ನಬಸವಣ್ಣ, ಅಕ್ಕಮಹಾದೇವಿ, ಅಕ್ಕನಾಗಮ್ಮ, ನೀಲಾಂಬಿಕೆ, ಗಂಗಾಂಬಿಕೆ, ಬೊಂತಾದೇವಿ, ಹಡಪದ ಅಪ್ಪಣ್ಣ-ಲಿಂಗಮ್ಮ ಆಯ್ದಕ್ಕಿ ಲಕ್ಕಮ್ಮ-ಮಾರಯ್ಯ, ನುಲಿಯ ಚಂದಯ್ಯ, ಕುರುಬಗೊಲ್ಲಾಳ, ಕುಂಬಾರ ಗುಂಡಯ್ಯ-ಕೇತಲದೇವಿ, ಹೂಗಾರ ಮಾದಣ್ಣ, ಮೇದಾರ ಕೇತಯ್ಯ, ಕಿನ್ನರಿ ಬೊಮ್ಮಯ್ಯ, ಅಂಬಿಗ ಚೌಡಯ್ಯ, ಅಮುಗೆದೇವಯ್ಯ-ರಾಯಮ್ಮ, ಬಾಚಿಕಾಯಕದ ಬಸವಪ್ಪ-ಕಾಳವ್ವೆ, ಒಕ್ಕಲಿಗ ಮುದ್ದಣ್ಣ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವ, ಚಂದಿಮರಸ, ಅಜಗಣ್ಣ, ಮುಕ್ತಾಯಕ್ಕ, ಸತ್ಯಕ್ಕ, ಅಕ್ಕಮ್ಮ, ದಾನಮ್ಮ, ಮೋಳಿಗೆಯ ಮಾರಯ್ಯ-ಮಹಾದೇವಮ್ಮ, ಸೊಡ್ಡಳ ಬಾಚರಸ, ಘಟ್ಟಿವಾಳಯ್ಯ, ಮುಗ್ಧ ಸಂಗಯ್ಯ, ಮರುಳ ಶಂಕರದೇವ, ಉರಿಲಿಂಗದೇವ, ಉರಿಲಿಂಗಪೆದ್ದಿ-ಕಾಳವ್ವೆ, ವಚನ ಭಂಡಾರಿ ಶಾಂತರಸ ಮುಂತಾದ ಅನುಭಾವಿಗಳು ವಿನೂತನವಾದ **'ವಚನ'** ಸಾಹಿತ್ಯ-ದರ್ಶನವನ್ನು ಸ್ವಾನುಭಾವದಿಂದ ರಚಿಸಿದರು.

ಧರ್ಮಗುರು ಬಸವಣ್ಣನವರೇ ಹೇಳಿರುವಂತೆ-

ಅಯ್ಯಾ ಭಕ್ತಿಗೆ ಬೀಡಾದುದು ಕಲ್ಯಾಣ ಮೂವತ್ತಾರು ವರುಷ,
ಅಯ್ಯಾ, ಅನುಭವಕ್ಕೆ ಶಿವಸದನವಾದುದು ಇಪ್ಪತ್ತೆಳು ವರುಷ
.......ಕೂಡಲಸಂಗಮದೇವಯ್ಯ

ಈ ೩೬ ವರುಷಗಳ ಕಲ್ಯಾಣದ ಅವಧಿಯಲ್ಲಿ, ೨೭ ವರುಷಗಳ ಕಾಲ ಅನುಭವ ಮಂಟಪದಲ್ಲಿ ಶರಣ-ಶರಣೆಯರು ಅನಂತ-ಅಸಂಖ್ಯ ವಚನಗಳನ್ನು ಬರೆದರು. ಈ ವಚನ ತಾಡೋಲೆಗಳನ್ನು ಚರಜಂಗಮ ಶರಣರು ನಾಡಿನ ಮೂಲೆ ಮೂಲೆಗಳವರೆಗೆ ಸಂಚರಿಸಿ ಭಕ್ತ ಸಮುದಾಯಕ್ಕೆ ತಲುಪಿಸಿ, ಶರಣರ ಸಂದೇಶ ಪ್ರಸಾರಗೈದರು.

ಜಾತಿ ರಹಿತ ಧರ್ಮ-ಸಮಾಜ ನಿರ್ಮಾಣದ ಕಾರ್ಯರೂಪುಗೊಳ್ಳುತ್ತಿರುವಾಗ ಶರಣ ಹರಳಯ್ಯ ಕಲ್ಯಾಣಮ್ಮರ ಚಮ್ಮಾವುಗೆ ಪ್ರಸಂಗ ಘಟಿಸಿ, ಬ್ರಾಹ್ಮಣ ಮಧುವರಸ ಮಂತ್ರಿ ಪರಿವರ್ತನೆಗೊಂಡನು. ಶರಣ ಸಮಗಾರ ಹರಳಯ್ಯನವರ ಮಗ ಶೀಲವಂತನಿಗೆ ಶರಣ ಮಧುವರಸರ ಮಗಳು ಲಾವಣ್ಯಳನ್ನು ತಂದುಕೊಂಡು ಕಲ್ಯಾಣದಲ್ಲಿ ಕಲ್ಯಾಣ ಮಹೋತ್ಸವ (ವಿವಾಹ) ನೆರವೇರಿಸಿದರು. ಜಾತಿ ಭೇದ ಅಳಿದು ಲಿಂಗಾಯತರಾದ ಶರಣರು ಮಾಡಿದ ಈ ವಿವಾಹವನ್ನೇ ನೆಪವಾಗಿಸಿಕೊಂಡ ಜಾತಿವಾದಿಗಳು, ಪಟ್ಟಭದ್ರರು **'ವರ್ಣಸಂಕರ ವಿವಾಹ'**ವೆಂದು ಗದ್ದಲವೆಬ್ಬಿಸಿ, ಬಿಜ್ಜಳನ ಕಿವಿಯೂದಿದರು. ಕೆಲವೇ ದಿನಗಳಲ್ಲಿ ರಾಜಕೀಯ ವಿಪ್ಲವ ಉಂಟಾಗಿ, ಬಸವಣ್ಣನವರು ಕಲ್ಯಾಣ ತೊರೆದು

ಕಪ್ಪಡಿ ಸಂಗಮಕ್ಕೆ ಬಂದರು. ಹರಳಯ್ಯ-ಮಧುವರಸ ಶರಣರಿಗೆ ಎಳೆಹೂಟೆ ಶಿಕ್ಷೆಯಾಗಿ ಬಲಿದಾನವಾದರು. ರಾಜ ಬಿಜ್ಜಳನ ಹತ್ಯೆಯು ರಾಜಕೀಯ ಒಳಸಂಚಿನ ಕುತಂತ್ರಿಗಳಿಂದ ಘಟಿಸಿ, ಶರಣರ ಮೇಲೆ ಆರೋಪ ಹೊರಿಸಲಾಯಿತು. ಕಲ್ಯಾಣದಲ್ಲಿ ಕ್ರಾಂತಿ ಸಿಡಿಯಿತು. ಕಲ್ಯಾಣ ಕಟುಕರ ಕೇರಿಯಾಯಿತು. ಶರಣರು ಅಪಾರವಾದ ವಚನ ರಾಶಿಯನ್ನು ಉಳಿಸಲೋಸುಗ ಸೈನ್ಯದೊಂದಿಗೆ ಹೋರಾಡುತ್ತಾ ಅಕ್ಕನಾಗಮ್ಮ, ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ, ಸಿದ್ಧರಾಮೇಶ್ವರರು, ಕಿನ್ನರಿ ಬೊಮ್ಮಯ್ಯ,, ಗಂಗಾಂಬಿಕೆ ಮುಂತಾದ ಶರಣರ ನೇತೃತ್ವದಲ್ಲಿ **ಉಳವಿಯ** ಘನಘೋರಾರಣ್ಯಕ್ಕೆ ಆಗಮಿಸಿ, ವಚನವಾಙ್ಮಯ ಉಳಿಸಿದರು. ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ಶರಣರು ಶ್ರೀಶೈಲದ ಕದಳಿಯತ್ತ ಪಯಣಬೆಳಸಿ, ಕದಳಿವನದಲ್ಲಿ ಬಯಲಾದರು.

ಪಟ್ಟಭದ್ರರ ಕುಯುಕ್ತಿ, ಸೈನ್ಯದ ದೌರ್ಜನ್ಯದಿಂದ ಅಸಂಖ್ಯಾತ ಶರಣರು ಬಲಿಯಾದರು. ಲಕ್ಷಾಂತರ ವಚನ ತಾಡೋಲೆಗಳು ನಾಶಗೊಂಡವು. ಇನ್ನುಳಿದವು ಕಾಲದ ಗರ್ಭದಲ್ಲಿ ಮರೆಯಾಗಿ ಉಳಿದವು.

ಬಸವಾದಿ ಶರಣರ ಧರ್ಮ-ಸಿದ್ಧಾಂತಗಳು ಕಾಲಾನಂತರದಲ್ಲಿ ಶೈವ ವೈದಿಕ ಕರ್ಮಠತನಗಳಿಗೆ, ಲಿಂಗವಂತರ ಔದಾಸೀನ್ಯ, ಅವಜ್ಞೆಗಳಿಗೆ ಒಳಗಾಗಿ ಸ್ವತಂತ್ರ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತ ಸಪ್ತಶೈವಗಳ **'ಮಿಶ್ರಶೈವ'**ಕ್ಕೆ ರೂಪಾಂತರ ಹೊಂದತೊಡಗಿದವು.

ಅನಂತರ ವಿಜಯನಗರ ಅರಸ ೧ನೆಯ ದೇವರಾಯನ ಕಾಲದಲ್ಲಿ ಹಾಗೂ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಕಾಲದಲ್ಲಿ ವಚನಗಳ ರಚನೆ, ಪರಿಷ್ಕರಣೆ, ಶೂನ್ಯಸಂಪಾದನೆ ಕಾರ್ಯ ಜರುಗಿತಾದರೂ, ಮತ್ತೆ ವಚನಗಳು ಮರೆಯಾದವು.

ಅಂದಿನಿಂದ ಇಂದಿನವರೆಗೆ ಕಾಲನಗರ್ಭದಲ್ಲಿ ಅಡಗಿರ್ದ ವಚನ ಭಂಡಾರವನ್ನು (ಓಲೆಯ ಭಂಡಾರ ಒಡೆದು) ಗುಹೆ-ಗಂಹ್ವರಗಳಿಂದ, ಮಠ-ಮಾನ್ಯಗಳ ಕತ್ತಲ ಕೋಣೆಗಳಿಂದ, ಭಕ್ತರ ಮನೆಯ ಜಗುಲಿ-ಸಂದೂಕುಗಳಿಂದ ಹೊರತೆಗೆದು ಸಂಗ್ರಹಿಸಿ ಸಂಶೋಧಿಸಿ, ಪರಿಷ್ಕರಿಸಿ, ಮುದ್ರಿಸಿ ನಾಡ ಜನರ ಕರಸ್ಥಲಕ್ಕೆ ಕರುಣಿಸಲು ಭುವಿಯಲುದಿಸಿದನೊಬ್ಬ **ನೂತನ ಶರಣ,** ಅವರೇ ವಚನ ಸಂಶೋಧನ ಪಿತಾಮಹ ಫ. ಗು. ಹಳಕಟ್ಟಿಯವರು.

ಶರಣ ಫ. ಗು. ಹಳಕಟ್ಟಿಯವರ ಮನೆತನ :

ಶರಣರಾದ ಫ. ಗು. ಹಳಕಟ್ಟಿಯವರ ಪೂರ್ವಜರು ಹಳಕಟ್ಟಿ ಎಂಬ ಊರಿನಿಂದ ಬಂದವರು. ಹರಳಕಟ್ಟಿ ಎಂಬ ಊರು ಬೆಳಗಾವಿ ಜಿಲ್ಲೆಯ ಪರಸಗಡ ತಾಲೂಕಿನಲ್ಲಿಯದು ಎಂದು ಕೆಲವರು, ವಿಜಾಪುರ ಜಿಲ್ಲೆಯ ಊರು ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಫ. ಗು. ಹಳಕಟ್ಟಿಯವರ ತಂದೆ ಗುರುಬಸಪ್ಪನವರು ಸುಸಂಸ್ಕೃತರು, ವಿದ್ಯಾವಂತರಾಗಿದ್ದವರು ಧಾರವಾಡದಲ್ಲಿ ನೆಲೆಸಿದ್ದರು.

ಧಾರವಾಡದ ಹೊಸಯಲ್ಲಾಪುರದೊಳಗಿರುವ ಮುಖ್ಯ ರಸ್ತೆಯಲ್ಲಿ ಮನೆ ಇದೆ. ಧಾರವಾಡದಲ್ಲಿ ಪ್ರಮುಖ ರಸ್ತೆಯ ಮೇಲಿರುವದರಿಂದ ಈ ಮನೆತನವನ್ನು ಹಾದಿಮನಿಯವರ ಮನೆತನ ಎಂದೇ ಕರೆಯುತ್ತಿದ್ದರಂತೆ ! ಗುರುಬಸಪ್ಪ ಹಾಗೂ ದಾನಾದೇವಿ (ದಾನಮ್ಮ) ದಂಪತಿಗಳದು ಶರಣ ಸಂಸ್ಕೃತಿಯ ದಾಂಪತ್ಯ ಜೀವನವಾಗಿತ್ತು.

ಗುರುಬಸಪ್ಪನವರು ೨೪-೧೧-೧೮೫೪ ರಲ್ಲಿ ಜನಿಸಿದ ಮೂರನೇ ವಯಸ್ಸಿನಲ್ಲಿ ಲಿಂಗೈಕ್ಯರಾಗಲು, ಅವರ ತಾಯಿ ಸಿದ್ದವ್ವ ಕಷ್ಟಪಟ್ಟು ದುಡಿದು ಮಗನನ್ನು ಓದಿಸಿದಳು. ಧಾರವಾಡದ ಬಾಸೆಲ್ ಮಿಶನ್-ಆಂಗ್ಲೋವ್ಹರ್ನಾಕ್ಯುಲರ ಸ್ಕೂಲ ಮತ್ತು ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜುಗಳಲ್ಲಿ ಓದಿದರು. ಅನಂತರ ೯ ವರ್ಷ ೬ ತಿಂಗಳುಗಳು ೨೭ ದಿವಸ ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ೨೫ ವರ್ಷ ೧ ತಿಂಗಳ ೧೨ ದಿವಸ ವಿದ್ಯಾಖಾತೆಯಲ್ಲಿ ಬೇರೆ ಬೇರೆ ಕಛೇರಿಗಳಲ್ಲಿ ಕಾರಕೂನರಾಗಿ ಒಟ್ಟು ೩೬ ವರುಷ ೮ ತಿಂಗಳು, ೮ ದಿವಸಗಳ ಸೇವೆ ಸಲ್ಲಿಸಿ ೧೯೧೨ನೆಯ ಇಸ್ವಿ ಮಾರ್ಚ ೩೧ ರಂದು ನಿವೃತ್ತರಾದರು.

ಶ್ರೀಯುತರು ಅಂದಿನ ಕಾಲದಲ್ಲಿ ಶ್ರೇಷ್ಠ ಕನ್ನಡ ಕೇಖಕರು, ಅನುವಾದಕರೂ ಆಗಿದ್ದರು. ಗುರುಬಸಪ್ಪ ಹಳಕಟ್ಟಿಯವರು ಬರೆದ ಗ್ರಂಥಗಳು ಕೆಳಗಿನಂತಿವೆ.

೧. ಸಿಕಂದರ ಬಾದಶಹನ ಚರಿತ್ರೆ
೨. ಏಕನಾಥ ಸಾಧುಗಳ ಚರಿತ್ರೆ.
೩. ಭೂಮಿತಿ ಶಾಸ್ತ್ರದ ಸಿದ್ಧಾಂತ (ಯುಕ್ಲಿಡ್‌ನ ೨, ೩, ೪, ೫ ೬ನೇ ಪುಸ್ತಕಗಳು)
೪. ಇಂಗ್ಲೆಂಡ ದೇಶದ ಇತಿಹಾಸ.
೫. ಡ್ಯೂಕ್ ಆಫ್ ವೆಲ್ಲಿಂಗಟನ್ ಚರಿತ್ರೆ
೬ ಗ್ಲ್ಯಾಡಸ್ಟನ್ ಚರಿತ್ರೆ.
೭ ನಿಜವಾದವೀರ ಅಥವಾ ಜಗಮಲ್ಲ
೮. ಚಿಂತಾಮಣಿ ಅಥವಾ ಟ್ಯಾಲಿಸ್‌ಮನ್
೯. ಫ್ರಾನ್ಸ್‌ದ ರಾಜ್ಯಕ್ರಾಂತಿ
೧೦. ನೆಪೋಲಿಯನ್ ಬೋನಾಪಾರ್ಟ ಚರಿತ್ರೆ
೧೧. ವಿಧವಾ ಪರ್ ಅನಾಚಾರ್ (ಕಟ್ಟಿ ವೆಂಕಟರಾಯರ ಮರಾಠಿ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದರು.)
೧೨. ಜೇಡರದಾಸಿಮಯ್ಯ ಚರಿತ್ರೆ (ಇದು ಅಪ್ರಕಟಿತ)

ಈ ರೀತಿ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಹಾಗೂ ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಕನ್ನಡಸಾಹಿತ್ಯಕ್ಕೆ ಕೊಡುಗೆಯನ್ನಿತ್ತ ಹಿರಿಯ ಲೇಖಕರು ಇವರಾಗಿದ್ದರು.

ಇದಲ್ಲದೇ ಧಾರವಾಡದ ಕರ್ನಾಟಕ ವೃತ್ತ, ವಾಗ್ಭೂಷಣ ಪತ್ರಿಕೆಗಳಲ್ಲಿ ಮೈಸೂರಿನ ಸ್ಟಾರ್ ಪತ್ರಿಕೆಯಲ್ಲಿ ಲೇಖನಗಳನ್ನು ಬರೆದು ಪ್ರಸಿದ್ಧಿಸುತ್ತಿದ್ದರು.

ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಕರ್ನಾಟಕ ಸಂಘಗಳ ಸಕ್ರಿಯ ಸದಸ್ಯರಾಗಿ, ಕಾರ್ಯದರ್ಶಿಯಾಗಿ ಅಪಾರ ಸೇವೆ ಸಲ್ಲಿಸಿದವರು. ಶ್ರೀಯುತರು ೨೭-೮-೧೯೩೬ ರಲ್ಲಿ ಲಿಂಗೈಕ್ಯರಾದಾಗ-ಧಾರವಾಡದ ಪತ್ರಿಕೆಯೊಂದರಲ್ಲಿ ಕೆಳಗಿನಂತೆ ಗೌರವ ಲೇಖವು ಪ್ರಕಟವಾಗಿದೆ- "ಕನ್ನಡ ತಾಯಿಯ ಸತ್ಪುತ್ರರಾಗಿ ಜನಿಸಿ, ಕನ್ನಡಿಗರಿಗೆ ಚಿರಪರಿಚಿತರಾಗಿ ಬೆಳೆದು, ಕರ್ನಾಟಕಕ್ಕೆ ಅಲಂಕಾರ ಸ್ವರೂಪರಾಗಿ ಚಿರಕಾಲ ಬಾಳಿದ ಹಳಕಟ್ಟಿ ಗುರುಬಸಪ್ಪನವರು ೮೨ ವರ್ಷ ವಯಸ್ಸಿನವರಾಗಿ ಇದೇ ಆಗಸ್ಟ್ ೨೭ನೆಯ ತಾರೀಕಿನ ದಿವಸ ಬೆಳಗಾವಿಯಲ್ಲಿ ಪರಂಧಾಮಕ್ಕೆ ತೆರಳಿದರೆಂದು ಬರೆಯಲು ಬಹುವಿಷಾದವೆನಿಸುತ್ತದೆ. ಇವರು ಹುಟ್ಟು ಕನ್ನಡಿಗರು. ಧಾರವಾಡ ಪುರವಾಸಿಗಳು, ವೀರಶೈವ ಪಂಗಡಕ್ಕೆ ಸೇರಿದವರು..... ಅನೇಕ ಗ್ರಂಥಗಳನ್ನು ಬರೆದು ಪ್ರಕಟಿಸಿ ಕನ್ನಡಿಗರ ಮೇಲೆ ಮಹೋಪಕಾರ ಮಾಡಿದ ಈ ಮಹನೀಯರನ್ನು ಕನ್ನಡಿಗರು ಎಂದೂ ಮರೆಯಲಾರರು. ಕನ್ನಡಕ್ಕೆ ಪ್ರಾಶಸ್ತ್ಯವಿಲ್ಲದ ಕಾಲದಲ್ಲಿ ಗ್ರಂಥಗಳನ್ನು ಮುದ್ರಿಸಿ ಪ್ರಕಟಿಸುವ ಮಾತು ಹಾಗಿರಲಿ, ಕನ್ನಡದಲ್ಲಿ ಬರೆಯುವುದೇ ಸಾಹಸದ ಮಾತೆಂದು ತಿಳಿಯಲ್ಪಡುತ್ತಿತ್ತು. ತಮ್ಮ ಮಾತೃಭಾಷೆಯ ಹಾಗೂ ತಾವು ಹಟ್ಟಿದ ಕನ್ನಡನಾಡಿನ ಅಭಿಮಾನವು ಗುರುಬಸಪ್ಪನವರ ಹುಟ್ಟುಗುಣವಾಗಿದ್ದಂತೆಯೇ ತಮ್ಮ ಸಮಾಜದ ಪ್ರೀತಿಯೂ ಅವರ ಮೈಯೊಡನೆಯೇ ಮೈಗೊಂಡ ಭಾವನೆಯಾಗಿದ್ದಿತು. **ವೀರಶೈವ ಮಹಾಸಭೆ, ಶ್ರೀ ಶಿವಯೋಗಮಂದಿರ** ಎಂಬ ಎರಡು ಅತೀ ಮಹತ್ವದ ಸಂಸ್ಥೆಗಳ ಉತ್ಪತ್ತಿಗೆ ಅವರೂ ಮೂಲಕಾರಣರೆಂದು ಹೇಳಿದರೆ ಗುರುಬಸಪ್ಪನವರು ವೀರಶೈವ ಸಮಾಜಕ್ಕೆ ಮಾಡಿದ ಉಪಕಾರ ಎಷ್ಟೆಂಬ ಕಲ್ಪನೆಯಾಗಬಹುದು (ಪ್ರಾ. ಶಿ. ಸಂಪುಟ ೭೫ ಸಂ. ೬ ಸೆಪ್ಟೆಂಬರ ೧೯೩೬).

ಇಂತಹ ಸುಸಂಸ್ಕೃತ, ಧರ್ಮಾಭಿಮಾನಿ, ಸಮಾಜಾಭಿಮಾನಿ ತಂದೆ ಗುರುಬಸಪ್ಪನವರ ಕರುಣೆಯ ಕಂದರಾಗಿ, ಅಧ್ಯಯನ ಶೀಲರಾಗಿ ಬೆಳೆದವರು **ಶ್ರೀ ಫ. ಗು. ಹಳಕಟ್ಟಿಯವರು.**

ಜನನ-ಬಾಲ್ಯ-ಶಿಕ್ಷಣ :

ಶರಣ ದಂಪತಿಗಳಾದ ಶ್ರೀ ಗುರುಬಸಪ್ಪ ಹಳಕಟ್ಟಿ ಹಾಗೂ ಶ್ರೀಮತಿ ದಾನಮ್ಮ ಇವರ ಚಿದ್‌ಗರ್ಭದಲ್ಲಿ **೧೮೮೦ನೆಯ ಇಸ್ವಿ ಜುಲೈ ೨ರಂದು** ಧಾರವಾಡದಲ್ಲಿ ಫ. ಗು. ಹಳಕಟ್ಟಿಯವರು ಜನಿಸಿದರು. ಮೂರು ವರ್ಷದ ಕೂಸಿದ್ದಾಗಲೇ ತಾಯಿ ದಾನಮ್ಮ ಲಿಂಗೈಕ್ಯಳಾದಳು. ಅಜ್ಜಿ ಬಸಮ್ಮಳ ಲಾಲನೆ ಪಾಲನೆಯಲ್ಲಿ ಬೆಳೆದರು. ತಂದೆ ಗುರುಬಸಪ್ಪನವರು ೨೨-೩-೧೮೮೪ರಂದು ನೀಲಾದೇವಿ ಎಂಬ ಕನ್ಯೆಯನ್ನು ಮರು

ಮದುವೆಯಾದರು. ಶ್ರೀಮತಿ ನೀಲಾದೇವಿಯು ಮಗು ಫಕೀರಪ್ಪನನ್ನು ತನ್ನ ಸ್ವಂತ ಮಗನಂತೆಯೇ ಜೋಪಾನ ಮಾಡಿ ಬೆಳೆಸಿದಳು. ಹಳಕಟ್ಟಿಯವರ ಮನೆ ದೇವರು **ಬಸವಣ್ಣ.** ಹೀಗಾಗಿ 'ಬಸವಣ್ಣ' ಎಂಬ ಹೆಸರು ಬಾಲ್ಯದಿಂದಲೇ ಅವರಿಗೆ ಮಂತ್ರವಾಗಿತ್ತು. ಮುಂದೆ ಬಸವಣ್ಣ ಅವರ ಮನದೇವರಾಗಿ, ಪ್ರಾಣ ಸ್ವರೂಪನಾದ. ಮಗು ಫಕೀರಪ್ಪನು ವಿದ್ಯಾವಂತ-ಸುಸಂಸ್ಕೃತ ತಂದೆಯ ಒಡನಾಟ, ತಾಯಿ ನೀಲಾದೇವಿಯ ಪ್ರೀತಿ-ವಾತ್ಸಲ್ಯ, ಅಜ್ಜಿ ಬಸಮ್ಮಳ ಮಮತೆಯಲ್ಲಿ ಬೆಳೆಯತೊಡಗಿದ. ಧಾರವಾಡದಲ್ಲಿಯೇ ೧೮೯೬ರಲ್ಲಿ ಮ್ಯಾಟ್ರಿಕ್ಯುಲೇಶನ್ ಪಾಸಾದನು. ಸ್ಕೂಲಿನಲ್ಲಿ ಒಬ್ಬ ಅನ್ಯಮತೀಯ ಶಿಕ್ಷಕನು-ಲಿಂಗಾಯತ ಸಮಾಜವನ್ನು ಹೀಯಾಳಿಸಿ, ಟೀಕಿಸಿ ಮಾತನಾಡುತ್ತಿದ್ದನು. ಲಿಂಗಾಯತ ಸಮಾಜಕ್ಕೆ ವಾಙ್ಮಯವಿಲ್ಲ. ಲಿಂಗಾಯತರು ಶೂರರಲ್ಲ, ರಾಜರಾಗಿಲ್ಲ" ಎಂದು ಕ್ಲಾಸಿನಲ್ಲಿ ಮೇಲಿಂದ ಮೇಲೆ ಅನ್ನುತ್ತಿದ್ದ ಆತನ ಮಾತುಗಳು ಫಕೀರಪ್ಪನ ಎಳೆಮನಸ್ಸಿಗೆ ಕಸಿವಿಸಿ ಮಾಡುತ್ತಿದ್ದವು. ಆಗಲೇ ಮನಸ್ಸಿನ ಅಂತರಾಳದಲ್ಲಿ ಒಂದು ಧ್ಯೇಯ ಅಸ್ಪಷ್ಟವಾಗಿ ರೂಪುಗೊಳ್ಳುತ್ತಿತ್ತು.

ಫಕೀರಪ್ಪ ಮ್ಯಾಟ್ರಿಕ್ಯುಲೇಶನ್ (೧೮೯೬) ಪಾಸಾದ ನಂತರ ತಂದೆ ಗುರುಬಸಪ್ಪವರು ಆತನನ್ನು ಮುಂಬೈಗೆ ಉನ್ನತ ಶಿಕ್ಷಣಕ್ಕೆ ಕಳಿಸಿದರು. ಮುಂಬೈಯ ಸೇಂಟ್ ಝೇವಿಯರ್ ಕಾಲೇಜಿನಿಂದ ರಸಾಯನಶಾಸ್ತ್ರ ಮಾಗೂ ಭೌತಶಾಸ್ತ್ರ ತೆಗೆದುಕೊಂಡು ವಿಜ್ಞಾನದಲ್ಲಿ **ಬಿ.ಎ. ಪದವಿ** (೧೯೦೨) ಪಡೆದರು. ಇಲ್ಲಿಯೇ ಶ್ರೀ ಆಲೂರ ವೆಂಕಟರಾಯರು ಫಕೀರಪ್ಪನವರಿಗೆ ಸಹಪಾಠಿಗಳಾಗಿದ್ದರು. ಕನ್ನಡ ಭಾಷೆ, ಸಂಸ್ಕೃತಿ, ಪ್ರಾಚೀನತೆಯ ಬಗ್ಗೆ ಚರ್ಚಿಸುತ್ತಿದ್ದರು.

ಬಿ.ಎ. ನಂತರ ಎಂ.ಎ. ಓದಲು ಪ್ರಾರಂಭಿಸಿದರು. ಅನಿವಾರ್ಯ ಕಾರಣಗಳಿಂದ ನಿಲ್ಲಿಸಿದರು. ಮುಂದೆ ೧೯೦೪ರಲ್ಲಿ ಪ್ರಥಮ ದರ್ಜೆಯಲ್ಲಿ **ಎಲ್.ಎಲ್.ಬಿ.** ಪಾಸಾದರು. ಇದೇ ವರ್ಷ ಅಖಿಲ ಭಾರತ ವೀರಶೈವ ಮಹಾಸಭೆಯ ೧ನೆಯ ಅಧಿವೇಶನವು ಜರುಗಿತು. ಈ ಅಧಿವೇಶನದ ನಿರ್ಣಯಗಳು ಕೇವಲ ವೀರಶೈವರ ಸಾಮಾಜಿಕ-ಶೈಕ್ಷಣಿಕ ಪ್ರಗತಿಗಾಗಿ ಪ್ರಯತ್ನಿಸುವ ಬಗ್ಗೆ ಮಾತ್ರ ಇದ್ದವು. 'ಧಾರ್ಮಿಕ-ಸಾಂಸ್ಕೃತಿಕ ವಿಷಯಕ್ಕೆ ಸಂಬಂಧಿಸಿದ ಯಾವ ಉಪನ್ಯಾಸಗಳೂ ಜರುಗಲಿಲ್ಲ' ಎಂಬುದನ್ನು ಫ. ಗು. ಹಳಕಟ್ಟಿಯವರು ಗಮನಿಸಿದರು.

ಫ. ಗು. ಹಳಕಟ್ಟಿಯವರ ಜೀವನ ಸಾಧನೆ :

ಶರಣ ಫ. ಗು. ಹಳಕಟ್ಟಿಯವರು ಬಿ.ಎ., ಎಲ್.ಎಲ್.ಬಿ. ಪಾಸಾದ ನಂತರ ೧೯೦೪ರಲ್ಲಿ ವಿಜಾಪುರ ಪಟ್ಟಣದಲ್ಲಿ ವಕೀಲಿ ವ್ಯವಸಾಯ ಪ್ರಾರಂಭಿಸಿದರು. ಈ ವೃತ್ತಿಯೊಂದಿಗೆ ವಚನ ತಾಡೋಲೆಗಳ ಸಂಗ್ರಹ, ಸಂಶೋಧನೆಗೆ ತೊಡಗಿದರು.

ಈ ಅಭಿರುಚಿ-ಆಸಕ್ತಿ ಪ್ರಾರಂಭವಾದುದರ ಹಿಂದೆ ಕೆಲವು ಪ್ರಸಂಗಗಳು

ಜರುಗಿದ್ದವು. ೧೯೦೧ ಮತ್ತು ೧೯೦೨ ರಲ್ಲಿ ಧಾರವಾಡದಲ್ಲಿ ಪ್ಲೇಗ್ ರೋಗವು ಉಗ್ರವಾಗಿ ಹಬ್ಬಿದ್ದುದರಿಂದ ಅವರು ಕೆಲವು ತಿಂಗಳ ಕಾಲ ತಮ್ಮ ಮಾವಂದಿರಾದ **ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ** ಅವರ ಹತ್ತಿರ ಬನಹಟ್ಟಿ ಗ್ರಾಮಕ್ಕೆ ಬಂದಿದ್ದರು. ಆಗ ೧೯೦೧ ರಲ್ಲಿ ಶ್ರೀ ವೀರಭದ್ರಪ್ಪ ಹಾಲಭಾವಿ ಅವರು ತಮ್ಮ ಬಂಧುಗಳ ಮನೆಯಲ್ಲಿದ್ದ ಪ್ರಾಚೀನ ಗ್ರಂಥಗಳನ್ನು (ಪ್ರಭುಲಿಂಗಲೀಲೆ ಮತ್ತು ಗಣಭಾಷ್ಯರತ್ನ ಮಾಲೆ) ತಂದು ಹಳಕಟ್ಟಿಯವರಿಗೆ ತೋರಿಸಿದ್ದರು. ಅದರಲ್ಲಿ **ಶರಣರ ವಚನಗಳು** ಗಮನಕ್ಕೆ ಬಂದವು. ಮುಂದೆ ೧೯೦೨ ನೆಯ ಇಸ್ವಿಯಲ್ಲಿ ಮತ್ತೊಮ್ಮೆ ಬನಹಟ್ಟಿಗೆ ಹೋದಾಗ್ಗೆ ಅಲ್ಲಿ ಶಿವಲಿಂಗಪ್ಪ ಗಲಗಲಿ ಅವರಲ್ಲಿ ೩೭ ಗ್ರಂಥಗಳನ್ನು, ಗುರುಬಸಯ್ಯ ಕಂತಿ ಅವರಲ್ಲಿ ೧೬ ಗ್ರಂಥಗಳನ್ನು ನೋಡಿದರು. ಬೆಳಗಾವಿಗೆ ಹೋದಾಗ ಶ್ರೀ ಗುರುಸಿದ್ದಪ್ಪ ಗಿಲಗಂಚಿ ಅವರಲ್ಲಿ ೧೭ ಗ್ರಂಥಗಳನ್ನು ಮತ್ತು ಭೋಜ ಅವರ ಮನೆಯಲ್ಲಿ ೧೦ ಗ್ರಂಥಗಳನ್ನು ನೋಡಿದರು. ಇವೆಲ್ಲವುಗಳ ಹೆಸರು ಬರೆದಿಟ್ಟುಕೊಂಡರು. ಆಗಲೇ ಅವರಿಗೆ– **ಲಿಂಗಾಯತರಲ್ಲಿ ಒಂದು ಧರ್ಮ, ಸಿದ್ಧಾಂತ, ಸಾಹಿತ್ಯ ಇದೆ** ಎಂಬ ಕಲ್ಪನೆ ಮೂಡತೊಡಗಿತ್ತು. ೧೯೦೩ರಲ್ಲಿ ಧಾರವಾಡದ ಶಿವಲಿಂಗಪ್ಪ ಮಂಚಾಲಿ ಎಂಬುವರ ಮನೆಯಲ್ಲಿ ಪ್ರಾಚೀನ–ಹಳೆಯ ಗ್ರಂಥಗಳ ಕೋರಿಕಾಗದ ಪ್ರತಿಗಳು, ತಾಡೋಲೆಗಳ ಅಪಾರ ರಾಶಿ ಇರುವುದನ್ನು ನೋಡಿದರು. ಪ್ರಭುದೇವರ ವಚನಗಳು, ಷಟ್‌ಸ್ಥಲ, ತಿಲಕ, ಶಿವಾಧಿಕ್ಯ ಪುರಾಣ ಮುಂತಾದವನ್ನು ಓದಲಿಕ್ಕೆ ಪ್ರಾರಂಭಿಸಿದರು.

ಕಾನೂನು ಪರೀಕ್ಷೆ ಪಾಸಾಗಿ, ವಿಜಾಪುರಕ್ಕೆ ಬಂದು ನೆಲೆಸಿದಾಗ್ಗೆ ವಕೀಲಿ ವೃತ್ತಿಯೊಂದಿಗೆ ಸಾವಾಕಾಶವಾಗಿ **ವಚನಗಳ ತಾಡೋಲೆ ಸಂಗ್ರಹ ಪ್ರವೃತ್ತಿ** ಪ್ರಾರಂಭವಾಯಿತು. ಕೆಲವೇ ವರ್ಷಗಳಲ್ಲಿ ಸಾವಿರ ಮೇಲ್ಪಟ್ಟು ಗ್ರಂಥಗಳ ಹಸ್ತಪ್ರತಿಗಳು ಸಂಗ್ರಹವಾದವು.

ವಚನವಾಙ್ಮಯ ಗುಪ್ತನಿಧಿ–ಭಿಕ್ಷುಕ ಸ್ಥಿಯಲ್ಲಿದ್ದ ಲಿಂಗಾಯತರು :

೧೯೦೪ ರಿಂದ ೧೯೨೦ ರವರೆಗಿನ ೧೬ ವರುಷಗಳ ಕಾಲದ ಅವಧಿಯಲ್ಲಿ ಹಲವಾರು ರಂಗಗಳಲ್ಲಿ ಕಾರ್ಯಮಾಡುತ್ತಲೇ ಸಹಸ್ರ–ಸಹಸ್ರ ಸಂಖ್ಯೆಯಲ್ಲಿ ಪ್ರಾಚೀನ–ಹಳೆಯ ಗ್ರಂಥಗಳನ್ನು, ತಾಡೋಲೆಗಳನ್ನು ಸಂಗ್ರಹಿಸಿದರು. ಹಣನೀಡಿ ಪಡೆದರು. ಮಠ ಮಾನ್ಯಗಳ ಕತ್ತಲು ಕೋಣೆಗಳಲ್ಲಿ ಭಕ್ತರ ಮನೆಯ ಜಗುಲಿ–ಮಾಡು–ಸಂದೂಕುಗಳಲ್ಲಿ ನಶಿಸಿ ಹೋಗುತ್ತಿದ್ದ ಅಮೂಲ್ಯ ವಚನ ನಿಧಿಯನ್ನು ಕಂಡು ಯಾತನೆ ಅನುಭವಿಸಿದರು.

"**ಈ ವಚನ ವಾಙ್ಮಯವು** ಭೂಮಿಯೊಳಗೆ ಹುಗಿದಿಟ್ಟ ಗುಪ್ತನಿಧಿಯಂತಿದೆ. ಆ ನಿಧಿಯ ದಿನ್ನೆಯ ಮೇಲೊಬ್ಬ ಭಿಕ್ಷುಕ ನಿಂತಿದ್ದಾನೆ. ಬಡಕಲು ಶರೀರ, ಮೈಯಲ್ಲಿ ರಕ್ತ ಮಾಂಸಗಳಿಲ್ಲ, ಎಲವು–ಮೂಳೆಗಳ ಹಂದರದಂತಿದ್ದಾನೆ. ಹರಿದು ಚಿಂದಿಯಾದ

ಬಟ್ಟೆ ತೊಟ್ಟಿದ್ದಾನೆ. ಮುಖ ಬಾಡಿದೆ. ಗಂಟಲು ಆರಿದೆ, ಕಣ್ಣು ಇಂಗಿ ಹೋಗಿವೆ. ರಸ್ತೆಯಲ್ಲಿ ಹೋಗುವವರ ಮುಂದೆ ಕೈ ಚಾಚಿ ತುತ್ತು ಅನ್ನಕ್ಕೆ, ಬಿಡಿಕಾಸಿಗೆ ಕೈ ಚಾಚುತ್ತಿದ್ದಾನೆ. ತನ್ನ ಕಾಲಕೆಳಗೆ ಮುತ್ತು ರತ್ನ-ಚಿನ್ನದ ಗುಪ್ತನಿಧಿಯ ರಂಜುಣಗಿ (ಹರಿವಾಣ) ಗಳಿವೆ ಎಂಬ ಪರಿಜ್ಞಾನವೇ ಇಲ್ಲ"

ಆ ಗುಪ್ತನಿಧಿಯೇ ವಚನಸಾಹಿತ್ಯ, ಆ ಭಿಕ್ಷುಕನೇ ಲಿಂಗಾಯತ. ಇಂತಹ ಸಮಾಜ ಶ್ರೀಮಂತವಾಗುವದೆಂತು ? ಶರಣ ಹಳಕಟ್ಟಿಯವರು **ಅಂಜನಸಿದ್ಧರಾಗಿ** ಈ ನಿಧಿಯನ್ನು ಕಂಡರು. ಹೊರತೆಗೆದರು, ಬಳಸಿದರು, ಲಿಂಗಾಯತ ಸಮಾಜ ಪುರುಷನನ್ನು ವಿಶ್ವದಲ್ಲಿಯೇ ಶ್ರೇಷ್ಠ ಅನುಭಾವ ಸಂಪತ್ತಿನ ಒಡೆಯನನ್ನಾಗಿಸಿ ತೋರಿದರು.

ಸಮಾಜದ ವಿವಿಧ ರಂಗಗಳಲ್ಲಿ ಸಲ್ಲಿಸಿದ ಸೇವೆ :

ಶ್ರೀ ಫ. ಗು. ಹಳಕಟ್ಟಿಯವರು ೧೯೦೪ರಲ್ಲಿ ವಿಜಾಪುರಕ್ಕೆ ಬಂದು ವಕೀಲ ವೃತ್ತಿ ಪ್ರಾರಂಭಿಸಿದರು. ಪತ್ನಿ ಭಾಗೀರಥಿಬಾಯಿಯು ಕುಟುಂಬವನ್ನು ಅಚ್ಚುಕಟ್ಟಾಗಿ ನೋಡಿಕೊಳ್ಳುತ್ತಿದ್ದರು. ೧೯೦೪ ರಿಂದ ೧೯೦೯ ರವರೆಗೆ ಅನೇಕ ಕೊರತೆಗಳನ್ನು ಸಮಾಜದಲ್ಲಿ ಕಂಡರು. ಕನ್ನಡನಾಡಿನಲ್ಲಿ ೧೨ನೆಯ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಅರಿವಿನ ಶಿಕ್ಷಣ ನೀಡಿದ **ಬಸವ ಜನ್ಮಭೂಮಿಯಲ್ಲಿ** ನೂರಕ್ಕೆ ೯೦ ರಷ್ಟು ಜನ ನಿರಕ್ಷರಕುಕ್ಷಿಗಳು. ಜನರಿಗೆ ಶಿಕ್ಷಣ ನೀಡಲ್ಪಡಬೇಕು. ಅದಾಗಲೇ ೧೯೦೬ ರಲ್ಲಿ ಪೂಜ್ಯ ಶ್ರೀ ಮ. ನಿ. ಪ್ರ. ಗುರುಬಸವ ಮಹಾಸ್ವಾಮಿಗಳು (ಬೀಳೂರ ಅಜ್ಜನವರು) ಬಾಗಲಕೋಟೆಯಲ್ಲಿ ಸಮಾಜ ಮುಖಂಡರನ್ನು ಸಂಘಟಿಸಿ **ಬಸವೇಶ್ವರ ವಿದ್ಯಾವರ್ಧಕ ಸಂಘ** ಸ್ಥಾಪಿಸಿದ್ದರು. ಇದನ್ನು ಗಮನಿಸಿದ ಹಳಕಟ್ಟಿಯವರು ತಮ್ಮ ಕಾಯಕದ ಭೂಮಿ ಬಿಜಾಪುರದಲ್ಲಿ ಶಿಕ್ಷಣ ಸಂಸ್ಥೆಯೊಂದನ್ನು ಹುಟ್ಟು ಹಾಕಲು ಸಂಕಲ್ಪಿಸಿದರು. ಇದರ ಪರಿಣಾಮವೇ ಒಂದು ಬೃಹತ್ ಶಿಕ್ಷಣ ಸಂಸ್ಥೆ ರೂಪು ತಳೆಯಿತು.

ಬಿಜಾಪುರ ಲಿಂಗಾಯತ ಜಿಲ್ಲಾ ವಿದ್ಯಾಭಿವೃದ್ಧಿ ಸಂಸ್ಥೆಯ ಸ್ಥಾಪನೆ :
(Bijapur Lingayat District Educational Association)

೧೯೧೦ರಲ್ಲಿ ಫ. ಗು. ಹಳಕಟ್ಟಿಯವರು ವಿಜಾಪುರ ಭಾಗದ ಶಿಕ್ಷಣ ಸಲುವಾಗಿ ಬಿ.ಎಲ್.ಡಿ.ಇ ಸಂಸ್ಥೆಯನ್ನು ಸ್ಥಾಪಿಸಿದರು. ಜರ್ಮನಿ ಮೂಲದ ಬಾಶೆಲ್ ಮಿಶನ್ ಕಂಪನಿ ನಡೆಸುತ್ತಿದ್ದಂತಹ 'ನ್ಯೂ ಇಂಗ್ಲೀಷ್ ಸ್ಕೂಲ'ನ್ನು ತೆಗೆದುಕೊಳ್ಳುವ ಮೂಲಕ ತನ್ನ ಶೈಕ್ಷಣಿಕ ಸೇವಾ ಕಾರ್ಯವನ್ನು ಬಿ.ಎಲ್.ಡಿ.ಇ ಸಂಸ್ಥೆ ಪ್ರಾರಂಭಿಸಿತು. ೧೯೧೪ರಲ್ಲಿ ಶ್ರೀ ಸಿದ್ಧೇಶ್ವರ ಹೈಸ್ಕೂಲ ಪ್ರಾರಂಭಿಸಿದರು. ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯಾ' ಎಂಬ ಬಸವ ಗುರುವಿನ ವಾಣಿಯಂತೆ ಶ್ರದ್ಧೆಯಿಂದ ಶಿಕ್ಷಣ ಸಂಸ್ಥೆ ಕಟ್ಟಿ ಬೆಳೆಸಿದರು. ಶರಣ ಫ.ಗು.ಹಳಕಟ್ಟಿಯವರು ನೆಟ್ಟ ಬಿ.ಎಲ್.ಡಿ.ಇ ಸಂಸ್ಥೆಯೆಂಬ ಸಸಿಯನ್ನು ಮುಂದೆ ಪೂಜ್ಯ **ಶ್ರೀ ಮ. ನಿ. ಪ್ರ, ಬಂಥನಾಳ ಶಿವಯೋಗಿಗಳು, ಶ್ರೀ ಎ. ಸಿ. ಅಂಗಡಿ**

ವಕೀಲರು, ಶ್ರೀ ಬಿ. ಎಂ. **ಪಾಟೀಲರು** ಇನ್ನೂ ಮುಂತಾದ ಅನೇಕ ಪೂಜ್ಯರು, ಶರಣರು, ಸಮಾಜ ಧುರೀಣರ ಪರಿಶ್ರಮದ ಫಲವಾಗಿ ಇಂದು ಬೃಹತ್ ವೃಕ್ಷವಾಗಿ ಹಲವಾರು ಪ್ರಕಾರದ ಶಾಲೆ-ಕಾಲೇಜುಗಳಾಗಿ ಜ್ಞಾನದ ಅಮೃತಫಲಗಳನ್ನು ನೀಡುತ್ತಿದೆ. ವಿಜಾಪುರ ಜಿಲ್ಲೆಯಲ್ಲಿ ವಿಜಾಪುರನಗರ, ಜಮಖಂಡಿ, ಲಚ್ಯಾಣ, ಅಥರ್ಗಾ, ಶಿವಣಗಿ, ದೇವರ ಹಿಪ್ಪರಗಿ, ಉಕ್ಕಲಿ, ಸಾವಳಗಿ. ತಿಕೋಟಾ, ತೇರದಾಳ, ಬಸವನಬಾಗೇವಾಡಿ ಮುಂತಾದ ಊರುಗಳಲ್ಲಿ ಪ್ರೌಢಶಾಲೆಗಳು-೧೩, ಪದವಿಪೂರ್ವ ಮಹಾವಿದ್ಯಾಲಯ-ಗಳು-೧೧, ಪದವಿ ಮಹಾವಿದ್ಯಾಲಯಗಳು-೬, ವೃತ್ತಿ ಶಿಕ್ಷಣ ವಿದ್ಯಾಲಯಗಳು ಹಾಗೂ ಮಹಾವಿದ್ಯಾಲಯಗಳು-೨೫, ಸ್ನಾತಕೋತ್ತರ ಅಧ್ಯಯನ ಸಂಸ್ಥೆಗಳು-೧೬, ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆಗಳು-೧೦, ಆಂಗ್ಲಮಾಧ್ಯಮ ಶಾಲೆಗಳು-೩, ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯ-೧, ಬಿ.ಎಲ್.ಡಿ.ಇ. ಸಂಸ್ಥೆಯ ಆಫ್‌ಸೆಟ್ ಪ್ರಿಂಟಿಂಗ್ ಪ್ರೆಸ್-೧ ಹೀಗೆ ಒಟ್ಟು ೮೬ ವಿವಿಧ ವಿದ್ಯಾ ಸಂಸ್ಥೆಗಳು ಗ್ರಾಮ, ಪಟ್ಟಣ, ನಗರಗಳಲ್ಲಿ ಶಿಕ್ಷಣ ಸೇವೆ ಸಲ್ಲಿಸುತ್ತಿವೆ. ಇವುಗಳ ವಿವರ ಹೀಗಿದೆ –

I. ಪ್ರೌಢ ಶಾಲೆಗಳು

೧.	ಎಸ್. ಎಸ್. ಹೈಸ್ಕೂಲ-ಎ, ವಿಜಯಪುರ	೧೯೧೭
೨.	ಎಸ್. ಎಸ್. ಅಗ್ರಿ ಹೈಸ್ಕೂಲ, ಲಚ್ಯಾಣ	೧೯೫೫
೩.	ಎಸ್. ಡಿ. ಎಸ್. ಜಿ. ಹೈಸ್ಕೂಲ, ಸಾವಳಗಿ	೧೯೬೨
೪.	ಶ್ರೀ ಎ. ಬಿ. ಜತ್ತಿ ಹೈಸ್ಕೂಲ, ತಿಕೋಟಾ	೧೯೬೩
೫.	ಎ. ಬಿ. ಸಾಲಕ್ಕಿ ಹೈಸ್ಕೂಲ, ದೇವರಹಿಪ್ಪರಗಿ	೧೯೬೩
೬.	ಎಸ್.ಪಿ.ಹೈಸ್ಕೂಲ, ತೇರದಾಳ	೧೯೬೫
೭	ಆರ್. ಎಂ. ಬಿ. ಹೈಸ್ಕೂಲ, ಅಥರ್ಗಾ	೧೯೬೬
೮.	ಎಸ್. ಆರ್. ಎಂ. ಹೈಸ್ಕೂಲ, ಶಿವಣಗಿ	೧೯೬೭
೯.	ಎಸ್. ಎಸ್. ಹೈಸ್ಕೂಲ-ಬಿ, ವಿಜಯಪುರ	೧೯೬೭
೧೦.	ನ್ಯೂ ಇಂಗ್ಲೀಷ್ ಸ್ಕೂಲ, ಉಕ್ಕಲಿ	೧೯೬೮
೧೧.	ಬಿ.ಎಲ್.ಡಿ.ಇ. ಸಂಸ್ಥೆಯ ಬಾಲಕಿಯರ ಪ್ರೌಢಶಾಲೆ, ವಿಜಯಪುರ	೧೯೯೬
೧೨.	ಪಬ್ಲಿಕ್ (ಸಿ.ಬಿ.ಎಸ್.ಇ) ಸ್ಕೂಲ್, ಜಮಖಂಡಿ	೨೦೦೯
೧೩.	ಶ್ರೀ ಬಿ. ಎಂ. ಪಾಟೀಲ ಪಬ್ಲಿಕ್ (ಸಿ.ಬಿ.ಎಸ್.ಇ.) ಸ್ಕೂಲ್, ವಿಜಯಪುರ	೨೦೧೧

II. ಪದವಿಪೂರ್ವ ಮಹಾವಿದ್ಯಾಲಯಗಳು

೧.	ಎಸ್. ಎಸ್. ಪದವಿಪೂರ್ವ ಮಹಾವಿದ್ಯಾಲಯ, ವಿಜಯಪುರ	೧೯೭೨
೨.	ಎಸ್. ಪಿ. ಪದವಿಪೂರ್ವ ಮಹಾವಿದ್ಯಾಲಯ, ತೇರದಾಳ	೧೯೭೨
೩.	ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ. ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯ, ವಿಜಯಪುರ	೧೯೭೨

೪. ಎ. ಎಸ್. ಪಿ. ವಾಣಿಜ್ಯ ಪದವಿಪೂರ್ವ ಮಹಾವಿದ್ಯಾಲಯ, ವಿಜಯಪುರ ೧೯೭೨
೫. ವಾಣಿಜ್ಯ ಬಿ. ಎಚ್. ಎಸ್. ಕಲಾ ಮತ್ತು ಟಿ.ಜಿ.ಪಿ. ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯ, ಜಮಖಂಡಿ ೧೯೭೨
೬. ನೂತನ ಕಲಾ ಪದವಿಪೂರ್ವ ಮಹಾವಿದ್ಯಾಲಯ, ಉಕ್ಕಲಿ ೧೯೭೨
೭. ಎಸ್.ಡಿ.ಎಸ್.ಜಿ. ಪದವಿಪೂರ್ವ ಮಹಾವಿದ್ಯಾಲಯ, ಸಾವಳಗಿ ೧೯೮೦
೮. ಎ. ಬಿ. ಜತ್ತಿ ಪದವಿಪೂರ್ವ ಮಹಾವಿದ್ಯಾಲಯ, ತಿಕೋಟಾ ೧೯೮೧
೯. ಎ.ಬಿ.ಸಾಲಕ್ಕಿ ಪದವಿಪೂರ್ವ ಮಹಾವಿದ್ಯಾಲಯ, ದೇವರಹಿಪ್ಪರಗಿ ೧೯೮೧
೧೦. ಆರ್. ಎಂ. ಬಿ. ಪದವಿಪೂರ್ವ ಮಹಾವಿದ್ಯಾಲಯ, ಅಥರ್ಗಾ ೧೯೮೩
೧೧. ಶ್ರೀ ಬಿ.ಎಂ.ಪಾಟೀಲ ಪದವಿಪೂರ್ವ ಮಹಾವಿದ್ಯಾಲಯ, ವಿಜಯಪುರ ೨೦೧೪

III. ಪದವಿ ಮಹಾವಿದ್ಯಾಲಯಗಳು

೧. ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ. ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ ೧೯೪೫
೨. ಎ. ಎಸ್. ಪಿ. ವಾಣಿಜ್ಯ ಮಹಾವಿದ್ಯಾಲಯ, ವಿಜಯಪುರ ೧೯೬೧
೩. ವಾಣಿಜ್ಯ ಬಿ. ಎಚ್. ಎಸ್. ಕಲೆ ಮತ್ತು ಟಿ. ಜಿ. ಪಿ. ವಿಜ್ಞಾನ ಮಹಾವಿದ್ಯಾಲಯ, ಜಮಖಂಡಿ ೧೯೬೩
೪. ನೂತನ ಕಲಾ ಮಹಾವಿದ್ಯಾಲಯ ತಿಕೋಟಾ ೧೯೬೯
೫. ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಸವನ ಬಾಗೇವಾಡಿ ೧೯೮೨
೬. ಶ್ರೀಮತಿ ಬಂಗಾರಮ್ಮ ಸಜ್ಜನ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ವಿಜಯಪುರ ೧೯೮೩

IV. ವೃತ್ತಿ ಶಿಕ್ಷಣ ವಿದ್ಯಾಲಯಗಳು ಹಾಗೂ ಮಹಾವಿದ್ಯಾಲಯಗಳು

೧. ಎಸ್.ಎಸ್.ಶಿಕ್ಷಕರ ತರಬೇತಿ ಕೇಂದ್ರ, ಲಚ್ಯಾಣ ೧೯೫೦
೨. ಸ್ಕೂಲ್ ಆಫ್ ಬಿಜಿನೆಸ್ ಮ್ಯಾನೇಜಮೆಂಟ್, ಎ.ಎಸ್.ಪಿ. ವಾಣಿಜ್ಯ ಮಹಾವಿದ್ಯಾಲಯ, ವಿಜಯಪುರ ೧೯೭೭
೩. ಶ್ರೀ ಸಿದ್ಧೇಶ್ವರ ಕಲಾಮಂದಿರ, ವಿಜಯಪುರ ೧೯೭೯
೪. ಜೆ.ಎಸ್.ಎಸ್.ಶಿಕ್ಷಣ ಮಹಾವಿದ್ಯಾಲಯ ವಿಜಯಪುರ ೧೯೮೦
೫. ಡಾ. ಫ. ಗು. ಹಳಕಟ್ಟಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ, ವಿಜಯಪುರ ೧೯೮೦
೬. ಶ್ರೀ ಸಿದ್ಧೇಶ್ವರ ದೈಹಿಕ ಶಿಕ್ಷಣ ವಿದ್ಯಾಲಯ, ವಿಜಯಪುರ ೧೯೮೦

೭. ಶ್ರೀ ಸಂಗನಬಸವ ಮಹಾಸ್ವಾಮೀಜಿ ಔಷಧೀಯ ಮಹಾವಿದ್ಯಾಲಯ ಹಾಗೂ ಸಂಶೋಧನ ಕೇಂದ್ರ ವಿಜಯಪುರ ೧೯೮೨
೮. ಬಿ.ಎಲ್.ಡಿ.ಇ. ಸಂಸ್ಥೆಯ, ಶ್ರೀ ಸಂಗನಬಸವ ಮಹಾಸ್ವಾಮೀಜಿ ಪಾಲಿಟೆಕ್ನಿಕ್ ಕಾಲೇಜು, ವಿಜಯಪುರ ೧೯೮೬
೯. ಶ್ರೀ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ವಿಜಯಪುರ ೧೯೮೬
೧೦. ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ, ವಿಜಯಪುರ ೧೯೮೭
೧೧. ಸ್ಕೂಲ್ ಆಫ್ ನರ್ಸಿಂಗ್, ವಿಜಯಪುರ ೧೯೯೦
೧೨. ಎ.ಎಸ್.ಪಿ ವಾಣಿಜ್ಯ ಮಹಾವಿದ್ಯಾಲಯ ಬಿ. ಬಿ. ಎ. ಪ್ರೊಗ್ರಾಮ್, ವಿಜಯಪುರ ೧೯೯೬
೧೩. ಶ್ರೀ ಬಿ.ಎಂ. ಪಾಟೀಲ ನರ್ಸಿಂಗ್ ಮಹಾವಿದ್ಯಾಲಯ, ವಿಜಯಪುರ ೧೯೯೮
೧೪. ಎ. ಎಸ್. ಪಿ. ವಾಣಿಜ್ಯ ಮಹಾವಿದ್ಯಾಲಯ, ಬಿ. ಸಿ. ಎ. ಪ್ರೊಗ್ರಾಮ್, ವಿಜಯಪುರ ೧೯೯೯
೧೫. ಎಸ್. ಬಿ. ಕಲಾ ಮಹಾವಿದ್ಯಾಲಯ ಮತ್ತು ಕೆ. ಸಿ. ಪಿ. ವಿಜ್ಞಾನ ಮಹಾವಿದ್ಯಾಲಯ ಬಿ.ಸಿ.ಎ. ಪ್ರೊಗ್ರಾಮ್, ವಿಜಯಪುರ ೧೯೯೯
೧೬. ಕಾನೂನು ಮಹಾವಿದ್ಯಾಲಯ, ಜಮಖಂಡಿ ೨೦೦೩
೧೭. ವಾಣಿಜ್ಯ ಬಿ. ಎಚ್. ಎಸ್. ಕಲಾ ಮತ್ತು ಟಿ. ಜಿ. ಪಿ. ವಿಜ್ಞಾನ ಮಹಾವಿದ್ಯಾಲಯ, ಬಿ.ಬಿ.ಎ. ವಿಭಾಗ, ಜಮಖಂಡಿ ೨೦೦೬
೧೮. ಬಿ.ಎಲ್.ಡಿ.ಇ ವಿಶ್ವವಿದ್ಯಾಲಯ, ವಿಜಯಪುರ ೨೦೦೮
೧೯. ಐ.ಟಿ.ಐ. ಕಾಲೇಜು, ವಿಜಯಪುರ ೨೦೧೦
೨೦. ಎ. ವ್ಹಿ. ಸಮಿತಿಯ ಆಯುರ್ವೇದ ಮಹಾವಿದ್ಯಾಲಯ, ವಿಜಯಪುರ ೨೦೧೧
೨೧. ವಾಣಿಜ್ಯ ಬಿ. ಎಚ್. ಎಸ್. ಕಲಾ ಮತ್ತು ಟಿ. ಜಿ. ಪಿ. ವಿಜ್ಞಾನ ಮಹಾವಿದ್ಯಾಲಯ, ಬಿ.ಸಿ.ಎ ವಿಭಾಗ ಜಮಖಂಡಿ ೨೦೧೨
೨೨. ಶಿಕ್ಷಣ ಮಹಾವಿದ್ಯಾಲಯ, ಜಮಖಂಡಿ ೨೦೧೭
೨೩. ಶ್ರೀಮತಿ ಬಂಗಾರಮ್ಮ ಸಜ್ಜನ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ ಬಿ.ಸಿ.ಎ. ವಿಭಾಗ, ವಿಜಯಪುರ ೨೦೧೮
೨೪. ಕಾಲೇಜ ಆಫ್ ನರ್ಸಿಂಗ್, ತಿಕೋಟಾ ೨೦೧೯
೨೫. ಕಾಲೇಜು ಆಫ್ ಫಾರ್ಮಸಿ, ಬಸವನ ಬಾಗೇವಾಡಿ ೨೦೧೯

V. ಸ್ನಾತಕೋತ್ತರ ಅಧ್ಯಯನ ಸಂಸ್ಥೆಗಳು

೧. ಡಾ. ಫ. ಗು. ಹಳಕಟ್ಟಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ ಎಂ.ಟೆಕ್ ಕೋರ್ಸ್ ಸಿವಿಲ್ ವಿಭಾಗ, ವಿಜಯಪುರ ೧೯೮೯

೨. ಎ. ಎಸ್. ಪಿ. ವಾಣಿಜ್ಯ ಮಹಾವಿದ್ಯಾಲಯ, ಎಂ. ಬಿ. ಎ. ಕೋರ್ಸ್, ವಿಜಯಪುರ ೧೯೯೮

೩. ಎ. ಎಸ್. ಪಿ. ವಾಣಿಜ್ಯ ಮಹಾವಿದ್ಯಾಲಯ, ಎಂ. ಕಾಂ. ಕೋರ್ಸ್, ವಿಜಯಪುರ ೧೯೯೯

೪. ಡಾ. ಫ. ಗು. ಹಳಕಟ್ಟಿ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜು, ಎಂ.ಸಿ.ಎ. ಕೋರ್ಸ್ ವಿಜಯಪುರ ೨೦೦೦

೫. ಡಾ. ಫ. ಗು. ಹಳಕಟ್ಟಿ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜು, ಎಂ.ಟೆಕ್ ಸ್ಟ್ರಕ್ಚರಲ್ ಇಂಜಿನಿಯರಿಂಗ್ ಕೋರ್ಸ್ ವಿಜಯಪುರ ೨೦೦೦

೬. ಜೆ. ಎಸ್. ಎಸ್. ಶಿಕ್ಷಣ ಮಹಾವಿದ್ಯಾಲಯ, ಎಂ.ಎಡ್. ಕೋರ್ಸ್, ವಿಜಯಪುರ ೨೦೦೦

೭. ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ ಸಂಶೋಧನ ಕೇಂದ್ರ ವಿಜಯಪುರ ೨೦೦೫

೮. ಎಸ್. ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ, ಎಂ.ಎ., ಎಂ.ಎಸ್ಸಿ., ಸ್ನಾತಕೋತ್ತರ ವಿಭಾಗ, ವಿಜಯಪುರ ೨೦೦೭

೯. ಎ. ವ್ಹಿ. ಸಮಿತಿಯ ಆಯುರ್ವೇದ ಮಹಾವಿದ್ಯಾಲಯ ಸ್ನಾತಕೋತ್ತರ ವಿಭಾಗ, ವಿಜಯಪುರ. ೨೦೧೧

೧೦. ಶ್ರೀ ಬಿ.ಎಂ.ಪಾಟೀಲ ನರ್ಸಿಂಗ ಕಾಲೇಜು, ಎಂ.ಎಸ್ಸಿ., ನರ್ಸಿಂಗ ವಿಭಾಗ, ವಿಜಯಪುರ. ೨೦೧೧.

೧೧. ಡಾ. ಫ. ಗು. ಹಳಕಟ್ಟಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಎಂ.ಬಿ.ಎ. ಪ್ರೋಗ್ರಾಮ್, ವಿಜಯಪುರ. ೨೦೧೧

೧೨. ಡಾ. ಫ. ಗು. ಹಳಕಟ್ಟಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಥರ್ಮಲ್ ಇಂಜಿನಿಯರಿಂಗ ಎಂ.ಟೆಕ್., ವಿಜಯಪುರ. ೨೦೧೧

೧೩. ವಾಣಿಜ್ಯ ಬಿ.ಎಚ್.ಎಸ್. ಕಲಾ ಮತ್ತು ಟಿ.ಜಿ.ಪಿ. ವಿಜ್ಞಾನ ಮಹಾವಿದ್ಯಾಲಯ ಇತಿಹಾಸ ಮತ್ತು ರಾಜ್ಯಶಾಸ್ತ್ರ ಸ್ನಾತಕೋತ್ತರ ವಿಭಾಗ, ಜಮಖಂಡಿ. ೨೦೧೧

೧೪. ವಾಣಿಜ್ಯ ಬಿ.ಎಚ್.ಎಸ್. ಕಲೆ ಮತ್ತು ಟಿ.ಜಿ.ಪಿ. ವಿಜ್ಞಾನ ಮಹಾವಿದ್ಯಾಲಯ, ಎಂ.ಕಾಂ. ವಿಭಾಗ ಜಮಖಂಡಿ. ೨೦೧೨

೧೫. ಜೆ. ಎಸ್. ಎಸ್. ಶಿಕ್ಷಣ ಮಹಾವಿದ್ಯಾಲಯದ ಸಂಶೋಧನ ಕೇಂದ್ರ, ವಿಜಯಪುರ ೨೦೧೨

೧೬. ಶ್ರೀಮತಿ ಬಂಗಾರಮ್ಮ ಸಜ್ಜನ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ಎಂ.ಕಾಂ. ವಿಭಾಗ, ವಿಜಯಪುರ. ೨೦೧೮

VI. ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆಗಳು

೧. ಶ್ರೀ ಗಜಾನನ ಪೂರ್ವಪ್ರಾಥಮಿಕ ಶಾಲೆ, ತಿಕೋಟಾ. ೧೯೯೫
೨. ಶ್ರೀ ಗಜಾನನ ಪ್ರಾಥಮಿಕ ಶಾಲೆ, ತಿಕೋಟಾ. ೧೯೯೬
೩. ನ್ಯೂ ಇಂಗ್ಲೀಷ್ ಪೂರ್ವ ಪ್ರಾಥಮಿಕ ಶಾಲೆ, ಉಕ್ಕಲಿ. ೨೦೦೬
೪. ಎಸ್.ಎಸ್.ಪೂರ್ವ ಪ್ರಾಥಮಿಕ ಶಾಲೆ, 'ಬ' ವಿಜಯಪುರ. ೨೦೦೬
೫. ಬಿ. ಎಲ್. ಡಿ. ಇ. ಎ. ಪ್ರಾಥಮಿಕ ಶಾಲೆ, ಜಮಖಂಡಿ. ೨೦೦೯
೬. ಪೂರ್ವ ಪ್ರಾಥಮಿಕ ಶಾಲೆ, ದೇವರಹಿಪ್ಪರಗಿ. ೨೦೧೩
೭. ಪ್ರಾಥಮಿಕ ಶಾಲೆ, ದೇವರಹಿಪ್ಪರಗಿ (ಸಿ.ಬಿ.ಎಸ್.ಸಿ.) ೨೦೧೩
೮. ಶ್ರೀ ಬಿ. ಎಂ. ಪಾಟೀಲ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆ ಜಲನಗರ, ವಿಜಯಪುರ. ೨೦೧೫
೯. ಎಸ್.ಎಸ್.ಮಾಧ್ಯಮಿಕ 'ಬ' ಸಮನ್ವಯ ಶಾಲೆ, ವಿಜಯಪುರ. ೨೦೧೭
೧೦. ಪ್ರಾಥಮಿಕ ಶಾಲೆ, ಸಾವಳಗಿ. ೨೦೧೮

VII. ಆಂಗ್ಲ ಮಾಧ್ಯಮಿಕ ಶಾಲೆಗಳು.

೧. ಇಂಗ್ಲೀಷ್ ಮಾಧ್ಯಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆ, ಜಮಖಂಡಿ. ೨೦೧೩
೨. ಇಂಗ್ಲೀಷ್ ಮಾಧ್ಯಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆ, ತಿಕೋಟಾ. ೨೦೧೩
೩. ಇಂಗ್ಲೀಷ್ ಮಾಧ್ಯಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆ, ಉಕ್ಕಲಿ. ೨೦೧೩

VIII. ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯ, ವಿಜಯಪುರ. ೨೦೦೮

IX. ಬಿ.ಎಲ್.ಡಿ.ಇ. ಸಂಸ್ಥೆಯ ಆಪ್‌ಸೆಟ್ ಪ್ರಿಂಟಿಂಗ್ ಪ್ರೆಸ್, ವಿಜಯಪುರ. ೧೯೯೭

ಬಿ. ಎಲ್. ಡಿ. ಇ. ಸಂಸ್ಥೆಯ ಆಡಳಿತ ಮಂಡಳಿ :

ಶ್ರೀ ಮಲ್ಲನಗೌಡ ಬಸನಗೌಡ ಪಾಟೀಲ (ವಿಜಯಪುರ)	**ಅಧ್ಯಕ್ಷರು**
ಶ್ರೀ ಗುರುಗೌಡ ಕಲ್ಲಪ್ಪಗೌಡ ಪಾಟೀಲ (ತಿಕೋಟಾ)	**ಪ್ರಧಾನ ಕಾರ್ಯದರ್ಶಿ**
ಶ್ರೀ ನಿಜಲಿಂಗಪ್ಪ ಸಿದ್ದಪ್ಪ ಅಳ್ಳೊಳ್ಳಿ (ವಿಜಯಪುರ)	ಸದಸ್ಯರು
ಶ್ರೀ ಅಶೋಕ ಜಿ. ವಾರದ (ಸಿಂದಗಿ)	ಸದಸ್ಯರು
ಶ್ರೀ ಕುಮಾರ ಚಂದ್ರಕಾಂತ ದೇಸಾಯಿ (ಜೈನಾಪುರ)	ಸದಸ್ಯರು
ಶ್ರೀ ಅಮಗೊಂಡ ಮಧುಗೌಡ ಪಾಟೀಲ (ಬಿಜ್ಜರಗಿ)	ಸದಸ್ಯರು
ಶ್ರೀ ಕಲ್ಲನಗೌಡ ಕಾಶಿರಾಯಗೌಡ ಪಾಟೀಲ (ತೊರವಿ)	ಸದಸ್ಯರು
ಶ್ರೀ ಸುನೀಲಗೌಡ ಬಸನಗೌಡ ಪಾಟೀಲ (ವಿಜಯಪುರ)	ಸದಸ್ಯರು
ಶ್ರೀ ಬಸನಗೌಡ ಮಲ್ಲನಗೌಡ ಪಾಟೀಲ (ವಿಜಯಪುರ)	ಸದಸ್ಯರು

ಶ್ರೀ ಸಂಗನಬಸಪ್ಪ ಗುರಪ್ಪ ಸಜ್ಜನ (ವಿಜಯಪುರ) ಸದಸ್ಯರು
ಶ್ರೀ ಮಲ್ಲಯ್ಯ ಸಿದ್ಧಲಿಂಗಯ್ಯ ಹಿರೇಮಠ (ವಿಜಯಪುರ) ಸದಸ್ಯರು
ಶ್ರೀ ಸೋಮನಗೌಡ ಬಿ. ಪಾಟೀಲ (ಸಾಸನೂರು) ಸದಸ್ಯರು
ಡಾ. ಅನಿಲಕುಮಾರ ಬಾಪುಗೌಡ ಪಾಟೀಲ (ಲಿಂಗದಳ್ಳಿ) ಸದಸ್ಯರು
ಶ್ರೀ ವೀರನಗೌಡ ಶಿವನಗೌಡ ಪಾಟೀಲ (ಬಬಲೇಶ್ವರ) ಸದಸ್ಯರು

ಅಂದು ಡಾ. ಫ. ಗು. ಹಳಕಟ್ಟಿಯವರು ಸ್ಥಾಪಿಸಿದ ಬಿ.ಎಲ್.ಡಿ.ಇ. ಸಂಸ್ಥೆಯು ಇಂದು ಬಸವ ನಾಡಿನಲ್ಲಿ ಹೆಮ್ಮರವಾಗಿ ಬೆಳೆದು ರಾಜ್ಯ-ರಾಷ್ಟ್ರಕ್ಕೆ ಅತ್ಯುತ್ತಮವಾದ ಶೈಕ್ಷಣಿಕ ಸೇವೆ ಸಲ್ಲಿಸುತ್ತಿದೆ.

ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯ ಕನಸು ಕಂಡವರು :

ಶರಣರಾದ ಫ. ಗು. ಹಳಕಟ್ಟಿಯವರು ೧೯೨೬ ರಲ್ಲಿ ಬಳ್ಳಾರಿಯಲ್ಲಿ ಜರುಗಿದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ "ಉತ್ತರ ಕರ್ನಾಟಕದ ಈ ಭಾಗಕ್ಕೆ ವಿಶ್ವವಿದ್ಯಾಲಯವೊಂದು ಸ್ಥಾಪನೆಯಾಗಬೇಕು. ಆದರೆ ಅದು ಉಳಿದ ವಿಶ್ವವಿದ್ಯಾಲಯಗಳಂತೆ ಹೆಸರಿಗೆ ವಿಶ್ವವಿದ್ಯಾಲಯವಾಗಕೂಡದು. ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಂತೆ ಔದ್ಯೋಗಿಕ ಮತ್ತು ವೈಜ್ಞಾನಿಕ ಹಿನ್ನೆಲೆ-ಗಳನ್ನೊಳಗೊಂಡು ಮುನ್ನಡೆವ ವಿಶ್ವವಿದ್ಯಾಲಯವಾಗಬೇಕು' ಎಂದು ನುಡಿದರು. ಶ್ರೀಯುತರು ಕಂಡ ಕನಸು ೨೪ ವರುಷಗಳ ತರುವಾಯ (೧೯೫೦) ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಗೊಂಡು ನನಸಾಯಿತೆಂಬುದನ್ನು ನಾವಿಂದು ಕಾಣುತ್ತಿದ್ದೇವೆ. ಮುಂದೆ ಇದೇ ವಿಶ್ವವಿದ್ಯಾಲಯವು ೧೯೫೬ರಲ್ಲಿ ಗೌರವ ಡಾಕ್ಟರೇಟ್ ಡಿ.ಲಿಟ್ ಪದವಿ ನೀಡಿ ಈ ಶರಣ ಚೇತನವನ್ನು ಗೌರವಿಸಿ, ತನ್ನ ಘನತೆಯನ್ನು ಹೆಚ್ಚಿಸಿಕೊಂಡಿತೆಂಬುದು ವಿಸ್ಮಯವೆನಿಸಿದರೂ, ಸತ್ಯವಾಗಿದೆ.

ಶ್ರೀ ಸಿದ್ಧೇಶ್ವರ ಅರ್ಬನ್ ಕೋ-ಆಪರೇಟಿವ್ಹ ಬ್ಯಾಂಕ್ ಸ್ಥಾಪನೆ (೧೯೧೨) :

ಶರಣ ಹಳಕಟ್ಟಿಯವರು ಸಹಕಾರ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ. ಮೇಟಿ ಮತ್ತು ರಾಟಿ (ಕೃಷಿ ಮತ್ತು ನೇಕಾರಿಕೆ) ಎರಡೂ ದೇಶದ, ಸಮಾಜದ ಅಭಿವೃದ್ಧಿಯ ಪ್ರಮುಖ ಅಂಗಗಳೆಂಬುದನ್ನು ಅರಿತು ರೈತರ ಮತ್ತು ನೇಕಾರರ, ಬಡವರ ಉದ್ಧಾರಕ್ಕಾಗಿ, ಏಳ್ಗೆಗಾಗಿ ಅನೇಕ ಸಹಕಾರಿ ಸಂಘಗಳನ್ನು ಸ್ಥಾಪಿಸಿದರು.

ಅ) ಹತ್ತಿ ಮಾರಾಟಗಾರರ ಸಂಘ. ಬ) ಒಕ್ಕಲುತನ ಸಹಕಾರಿ ಸಂಘ.
ಕ) ನೇಕಾರರ ಸಹಕಾರಿ ಸಂಘ. ಡ) ಗ್ರಾಮೀಣಾಭಿವೃದ್ಧಿ ಸಂಘ.

ಈ ಸಂಘಗಳನ್ನು ಸ್ಥಾಪಿಸಿದ್ದಲ್ಲದೇ ಇವುಗಳ ಅಧ್ಯಕ್ಷರಾಗಿ ಹತ್ತಾರು ವರುಷ ನಿಷ್ಠೆಯಿಂದ ದುಡಿದರು. ಕೃಷಿಕರ, ನೇಕಾರರ, ಬಡಜನರ ಉದ್ಯೋಗಕ್ಕೆ, ವ್ಯಾಪಾರಿಗಳ ವ್ಯಾಪಾರೋದ್ಯೋಗಕ್ಕೆ ಬಂಡವಲು ಅವಶ್ಯಬೇಕೆಂಬುದನ್ನು ಅರಿತು ೧೯೧೨ರಲ್ಲಿ

'ಶ್ರೀ ಸಿದ್ಧೇಶ್ವರ ಅರ್ಬನ್ ಕೋ-ಅಪರೇಟಿವ್ಹ ಬ್ಯಾಂಕ'ನ್ನು ಸ್ಥಾಪಿಸಿದರು. ಎಂಟು ವರ್ಷಗಳ ಕಾಲ ಈ ಬ್ಯಾಂಕಿನ ಅಧ್ಯಕ್ಷರಾಗಿ ಅಹರ್ನಿಶ ಅಭಿವೃದ್ಧಿಗೊಳಿಸಿದರು. ಅಂದು ಕೇವಲ ೨೫೦೦ರೂಪಾಯಿಗಳ ಬಂಡವಾಳದಿಂದ ಪ್ರಾರಂಭವಾದ ಈ ಬ್ಯಾಂಕು ಇಂದು ನೂರಾರು ಕೋಟಿ ಬಂಡವಾಳವನ್ನು ಹೊಂದಿದೆ. ಕರ್ನಾಟಕದ ಶ್ರೇಷ್ಠ ಬ್ಯಾಂಕುಗಳಲ್ಲಿ ಒಂದೆಂದು ಹೆಸರುಗಳಿಸಿದೆ.

ಸಿದ್ಧೇಶ್ವರ ಸಂಸ್ಥೆ – ಸಿದ್ಧೇಶ್ವರ ಜಾತ್ರೆ – ದನಗಳ ಪ್ರದರ್ಶನ :

ವಿಜಾಪುರ ನಗರದ ಸದ್ಭಕ್ತರು ೧೯೧೨ನೆಯ ಇಸ್ವಿಯಲ್ಲಿ ಶಿವಯೋಗ ಸಾಮ್ರಾಟ ಶೂನ್ಯ ಸಿಂಹಾಸನ ಪೀಠ ಪರಂಪರೆಯ ಮೂರನೆಯ ಅಧ್ಯಕ್ಷ (ಮೊದಲನೆಯವರು ಅಲ್ಲಮಪ್ರಭು, ಎರಡನೆಯವರು ಚೆನ್ನಬಸವಣ್ಣ) ಶ್ರೀ ಸಿದ್ಧರಾಮೇಶ್ವರ ಶಾಶ್ವತ ಸ್ಮಾರಕ-ನೆನಹಿನಲ್ಲಿ ಭವ್ಯವಾದ ಅಲಯ ನಿರ್ಮಿಸಿ, ಅದರಲ್ಲಿ ಶಿವಯೋಗಿ ಸಿದ್ಧರಾಮೇಶ್ವರ (ಸಿದ್ಧೇಶ್ವರ ಎಂದು ವಿಜಾಪುರದಲ್ಲಿ ಕರೆಯುವರು) ಮೂರ್ತಿಯನ್ನು ಪೂಜ್ಯ ಶ್ರೀ ಗುರುಬಸವಸ್ವಾಮಿಗಳು ಬೀಳೂರ ಅವರ ಲಿಂಗಹಸ್ತದಿಂದ ಅನಾವರಣ ಮಾಡಿಸಿದ್ದರು.

ಶರಣ ಹಳಕಟ್ಟಿಯವರು ಸದ್ಭಕ್ತರ ಅಪೇಕ್ಷೆಯಮತೆ **ಸಿದ್ಧೇಶ್ವರ ಸಂಸ್ಥೆಯ ಅಧ್ಯಕ್ಷರಾಗಿ** ಲಿಂಗಾಯತ ಸಮಾಜದ ಧಾರ್ಮಿಕ-ಸಾಂಸ್ಕೃತಿಕ ಜೀವನದಲ್ಲಿ ಶರಣ ಸಂಸ್ಕೃತಿ ಮಹೋತ್ಸವನ್ನು ಅಳವಡಿಸಿದರು. ಪ್ರತಿ ವರುಷ ಮಕರ ಸಂಕ್ರಾಂತಿಯ ದಿನದಂದು ಜರಗುವ ಸಿದ್ಧೇಶ್ವರ ಜಾತ್ರೆಯ ಕಾಲಕ್ಕೆ ರೈತರ ಅನುಕೂಲಕ್ಕಾಗಿ ದನಗಳ ಜಾತ್ರೆ, ದನಗಳ ಪ್ರದರ್ಶನ, ವ್ಯಾಪಾರ ನಡೆಯುವಂತೆ ಮಾಡಿದರು.

ಶೇಫರ್ಡ ಹಾಲ್ನ್ನು ದೇವಸ್ಥಾನದ ಪಕ್ಕದಲ್ಲಿಯೇ ಕಟ್ಟಿಸಿ, ಅಲ್ಲಿ ವಾರಕ್ಕೊಮ್ಮೆ ವಿಚಾರವಿನಿಮಯ, ವಿದ್ವಾಂಸರಿಂದ ಉಪನ್ಯಾಸಗಳು, ಸ್ತ್ರೀಯರ ಶಿವಾನುಭವ ಗೋಷ್ಠಿಗಳು ಇತ್ಯಾದಿ ನಡೆಯಲು ವ್ಯವಸ್ಥೆ ಕಲ್ಪಿಸಿಕೊಟ್ಟರು. ವಿದ್ಯಾರ್ಥಿಗಳಿಗಾಗಿ 'ಸಿದ್ಧೇಶ್ವರ ಉಚಿತ ಪ್ರಸಾದ ನಿಲಯ' ವನ್ನು ಸ್ಥಾಪಿಸಿದರು. (ಇದೇ ಪ್ರಸಾದ ನಿಲಯದಲ್ಲಿ ಪ್ರಸಾದ ಸ್ವೀಕರಿಸಿದ ಭಾಗ್ಯ ನನ್ನದು.)

ವಿಜಾಪುರದಲ್ಲಿ ಕನ್ನಡ ಶಾಲೆಗಳನ್ನು ಪ್ರಾರಂಭಿಸಿದ್ದು :

ಹಳಕಟ್ಟಿಯವರು ವಿಜಾಪುರಕ್ಕೆ ಬಂದಾಗ್ಗೆ, ಅಲ್ಲಿ ಮರಾಠಿ ಶಾಲೆಗಳ ಸಂಖ್ಯೆ ಹೆಚ್ಚಿಗಿದ್ದಿತ್ತು. ವಿಜಾಪುರವು ಆಗ ಮುಂಬೈ ರಾಜ್ಯದಲ್ಲಿತ್ತು. ಕನ್ನಡಿಗರು ಬಹುತೇಕ ರೈತರು, ನೇಕಾರರು, ಕೂಲಿ ಕಾರ್ಮಿಕರಾಗಿದ್ದರು. ಓದು-ಬರಹದ ಕಡೆಗೆ ಆಸಕ್ತಿ ಇರಲಿಲ್ಲ. ಕನ್ನಡ ಶಾಲೆಗಳು ಒಂದೋ, ಎರಡೋ ಇದ್ದವು. ಅದರಲ್ಲಿಯೂ ವಿದ್ಯಾರ್ಥಿಗಳು ಹೆಸರಿಗೆ ಮಾತ್ರ ! ಶ್ರೀ ಫ. ಗು. ಹಳಕಟ್ಟಿಯವರು ೧೯೧೭ರಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿ, ವಿಜಾಪುರ ನಗರಸಭೆ ಉಪಾಧ್ಯಕ್ಷರಾಗಿ (೧೯೧೯), ನಗರಸಭೆಯ

ಶಾಲಾ ಮಂಡಳಿ ಅಧ್ಯಕ್ಷರಾಗಿ ಕನ್ನಡ ಅಭಿವೃದ್ಧಿಗಾಗಿ ಶ್ರಮಿಸಿದರು. ಅಂದು ಮರಾಠಿ ಗಂಡು ಮಕ್ಕಳ ಶಾಲೆಗಳು ೬, ಮರಾಠಿ ಹೆಣ್ಣುಮಕ್ಕಳ ಶಾಲೆ ೧ ಇದ್ದರೆ ಕನ್ನಡ ಗಂಡು ಮಕ್ಕಳ ಶಾಲೆ ೩ ಇದ್ದವು, ಕನ್ನಡ ಹೆಣ್ಣುಮಕ್ಕಳ ಶಾಲೆ ಇರಲೇ ಇಲ್ಲ, ಶ್ರೀ ಹಳಕಟ್ಟಿಯವರು ಅಧ್ಯಕ್ಷರಾದ ಮೇಲೆ ೭ ಕನ್ನಡ ಗಂಡುಮಕ್ಕಳ ಶಾಲೆಗಳೂ, ೩ ಕನ್ನಡ ಹೆಣ್ಣುಮಕ್ಕಳ ಶಾಲೆಗಳೂ ಪ್ರಾರಂಭಗೊಂಡವು. 'ಶಾಲಾ ಮಂಡಳಿಯ ಅಧ್ಯಕ್ಷನಾದ ನನ್ನ ಈ ಅವಧಿಯು ನನ್ನ ಜೀವನದ ಅತ್ಯುತ್ತಮ ಭಾಗ್ಯವೆಂದು ನಾನು ತಿಳಿದುಕೊಂಡಿದ್ದೇನೆ.' ಎಂದು ಶ್ರೀ ಹಳಕಟ್ಟಿಯವರು ಹೇಳಿಕೊಂಡಿದ್ದಾರೆ.

ಮುಂಬೈ ವಿಧಾನಪರಿಷತ್ ಸದಸ್ಯರಾಗಿ ಸೇವೆ :

೧೯೨೦ ರಲ್ಲಿ ಮುಂಬೈ ವಿಧಾನಪರಿಷತ್ ಸದಸ್ಯರಾಗಿಯೂ ವಿಜಾಪುರದ ರಾಜಕೀಯ ಜೀವನಕ್ಕೆ ಹೊಸ ಆಯಾಮ ನೀಡಿದರು. ವಿಜಾಪುರ ನಗರದ ಕುಡಿವ ನೀರು, ರಸ್ತೆ ಅವಶ್ಯಕತೆಗಳ ಬಗ್ಗೆ ಮುಂಬೈ ಸರ್ಕಾರದಲ್ಲಿ ವಿಜಾಪುರದ ಧ್ವನಿಯಾಗಿ ಕಾರ್ಯಮಾಡಿ, ಅನುಕೂಲತೆಗಳನ್ನು ದೊರಕಿಸಿಕೊಂಡರು. **ಭೂತನಾಳ ಕೆರೆಯು** ಫ. ಗು. ಹಳಕಟ್ಟಿಯವರ ಅಪಾರ ಪರಿಶ್ರಮದ ಯೋಜನೆಯಾಗಿದೆ.

ಅನಂತರ **ಮುಂಬೈ ವಿಶ್ವವಿದ್ಯಾಲಯದ** ಅಭ್ಯಾಸಮಂಡಳಿಯ ಸದಸ್ಯರಾಗಿ, ಎಕ್ಸಾಮಿನರ್ ಆಗಿ, ಸಿನೇಟ್ ಮೆಂಬರಾಗಿ, ಪಠ್ಯಪುಸ್ತಕಗಳ ಸಂಪಾದಕರಾಗಿ, ಪರೀಕ್ಷೆಗಳ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸಿ, ತಮ್ಮ ಕ್ರಿಯಾಶಕ್ತಿಯನ್ನು ಮೆರೆದರು.

ಈ ರೀತಿಯಾಗಿ ಶಿಕ್ಷಣ, ಸಹಕಾರ, ರಾಜಕೀಯ, ಆರ್ಥಿಕ, ಸಾಮಾಜಿಕ ರಂಗಗಳ ಸೇವೆಯನ್ನು ಪ್ರಾಮಾಣಿಕವಾಗಿ ಮಾಡಿದ ಹಳಕಟ್ಟಿಯವರು ಈ ಕಾರ್ಯಗಳ ನಡು-ನಡುವೆ ಬಿಡುವು ಮಾಡಿಕೊಂಡು ವಚನವಾಙ್ಮಯದ ಸಂಗ್ರಹ-ಅಧ್ಯಯನವನ್ನು ನಡೆಸುತ್ತ ಬಂದರು.

ವಕೀಲವೃತ್ತಿಯು ವಚನವೃತ್ತಿಯಾಗಿ ಪರಿವರ್ತನೆ :

೧೯೨೩ ರಲ್ಲಿ ವಿಜಾಪುರದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಆ್ಯಂಡ್ ಗವರ್ನಮೆಂಟ್ ಪ್ಲೀಡರ್ ಆಗಿ ನೇಮಣೂಕಿ ಹೊಂದಿ ನ್ಯಾಯವಾದಿಯಾಗಿ ಕಾರ್ಯನಿರ್ವಹಿಸ ತೊಡಗಿದರು. ಆದರೆ ಇದು ವಚನ ಸಂಶೋಧನೆ ಕಾರ್ಯಕ್ಕೆ ಅಡ್ಡಿಯೆನಿಸತೊಡಗಿದಾಗ, ಈ ಅವಧಿ ಮುಗಿದಕೂಡಲೇ ವಕೀಲಿ ವೃತ್ತಿಯನ್ನು ತ್ಯಾಗ ಮಾಡಿ ವಚನ ವೃತ್ತಿಯನ್ನು ಸ್ವೀಕರಿಸಿದರು.

ದುಃಖ-ಆನಂದದ ಅದ್ಭುತ ಘಟನೆ :

೧೯೦೧ ರಿಂದ ೧೯೨೨ ವರೆಗೆ ನಡೆದ ವಚನ ವಾಙ್ಮಯದ ಸಂಶೋಧನೆ, ಸಂಗ್ರಹ, ಪರಿಷ್ಕರಣೆಯ ಮೊದಲ ಫಲ **'ವಚನಶಾಸ್ತ್ರಸಾರ'** ದ ಒಂದನೇ ಭಾಗವನ್ನು ಮುದ್ರಣಕ್ಕಾಗಿ ಸಿದ್ಧಪಡಿಸಿದರು. ಅದರ ಅಂದಾಜು ೪೦೦ ಪುಟಗಳ ಲಿಖಿತ ಕೈಬರಹದ

ಹಾಳೆಗಳನ್ನು ಹೊಂದಿಸಿ, ಕಟ್ಟಿ ಮುದ್ರಣಕ್ಕಾಗಿ **ಮಂಗಳೂರಿನ ಬಾಸೆಲ್ ಮಿಷನ್** ಪ್ರೆಸ್ಸಿಗೆ ೫೦೦ರೂಪಾಯಿಗಳ ಮುಂಗಡ ಹಣದೊಂದಿಗೆ ಓಲೆ ಬರೆದು ಕಳಿಸಿದರು. ಆ ಓಲೆಯಲ್ಲಿ ಹಳಕಟ್ಟಿ ಶರಣರು ವಿನಂತಿಸಿದ್ದರು – 'ಮಾನ್ಯರೆ, ದಯವಿಟ್ಟು ನಾನು ಕಳಿಸಿರುವ ಈ 'ವಚನಸಾರ' ದ ಒಂದನೇ ಭಾಗವನ್ನು ತಮ್ಮ ಪ್ರೆಸ್ಸಿನಲ್ಲಿ ಮುದ್ರಣ ಮಾಡಿ ಕಳಿಸಿರಿ. ಇದರ ವೆಚ್ಚಕ್ಕಾಗಿ ೫೦೦ರೂಪಾಯಿಗಳ ಮುಂಗಡ ಕಳಿಸುತ್ತಿದ್ದೇನೆ, ಸ್ವೀಕರಿಸಿರಿ'.

ಈ ಹಸ್ತಪ್ರತಿಯನ್ನು ಅಂದಿನ ಕಾಲದ ಕ್ರೈಶ್ಚಯನ್ ವಿದ್ವಾಂಸರು, ಧಾರ್ಮಿಕ ಮುಖಂಡರು ಓದಿದರು. ತಿಂಗಳಾನುಗಟ್ಟಲೆ ಚರ್ಚಿಸಿದರು. ಕೊನೆಗೆ ಅನಿವಾರ್ಯವಾಗಿ ಒಂದು ನಿಲುವಿಗೆ ಬಂದು, ಆ ಹಸ್ತಪ್ರತಿಯನ್ನು ಒಂದು ಓಲೆಯೊಂದಿಗೆ ಮರಳಿ ಹಳಕಟ್ಟಿ ಶರಣರಿಗೆ ಕಳಿಸಿದರು. **ಆ ಓಲೆಯಲ್ಲಿ ಹೀಗೆ ಬರೆದಿತ್ತಂತೆ**– ಮಿ॥ ಫ. ಗು. ಹಳಕಟ್ಟಿ ಅವರೆ, 'ನಿಮ್ಮ ಗ್ರಂಥದ ಧಾರ್ಮಿಕ ವಿಚಾರವನ್ನು ನಾವು ಪ್ರಕಟಪಡಿಸಲು ಇಷ್ಟಪಡುವದಿಲ್ಲ. ನಿಮ್ಮ ಧರ್ಮದ ತತ್ವ ವಿವರಣೆಗೂ ನಮ್ಮ ಧಾರ್ಮಿಕ ಗ್ರಂಥಗಳಿಗೂ ಹೋಲಿಕೆ ಇರುವದರಿಂದ ನಮ್ಮ ಮಿಶನರಿ ಉದ್ದೇಶಕ್ಕೆ ಭಂಗ ಬರುತ್ತದೆ. ಆದ್ದರಿಂದ ಕ್ಷಮಿಸಿರಿ. ಮುಂಗಡವಾಗಿ ಕಳುಹಿಸಿದ ಹಣ ತಿರುಗಿ ಕಳಿಸಿದ್ದೇವೆ.' [ವಚನ ಪಿತಾಮಹ– ಪು. ೫೩)

ಈ ಓಲೆಯನ್ನು ಓದಿದಾಗ ಹಳಕಟ್ಟಿಯವರ ಒಂದು ಕಣ್ಣಲ್ಲಿ ದುಃಖದ ಕಣ್ಣೀರು ಇನ್ನೊಂದು ಕಣ್ಣಲ್ಲಿ ಆನಂದದ ಅಶ್ರು ಹೊರಹೊಮ್ಮಿದವು. **ಇಂತಹ ಅಮೂಲ್ಯವಾದ ವಚನವಾಙ್ಮಯನ್ನು** ಲಿಂಗಾಯತರು. ಕನ್ನಡಿಗರು ಅರಿಯದೇ ಅಜ್ಞಾನದಲ್ಲಿರುವರಲ್ಲಾ ! ಇದನ್ನು ಮುದ್ರಿಸಲು ಸಾಧ್ಯವಾಗುತ್ತಿಲ್ಲವಲ್ಲಾ ! ಎಂದು ದುಃಖ ಒಂದು ಕಡೆಗಾದರೆ, ಇಡೀ ವಿಶ್ವವನ್ನು ವ್ಯಾಪಿಸಿರುವ ಕ್ರಿಶ್ಚಿಯನ್‌ಧರ್ಮದ ಧರ್ಮ ಪ್ರಸಾರಕರು–ಈ ವಚನ ಗ್ರಂಥ ಪ್ರಕಟವಾಗಿ ನಾಡಿನಲ್ಲಿ ಪ್ರಸಾರವಾದರೆ ತಮ್ಮ ಧರ್ಮ ಪ್ರಸಾರ ಕಾರ್ಯಕ್ಕೆ ಅಡ್ಡಿಯುಂಟಾಗುತ್ತದೆ ಎಂದು ಭಯಭೀತರಾದುದು, ವಚನಗಳ ವಿಶ್ವಮಾನ್ಯ ಸಂದೇಶದ ವಿಶ್ವಮೌಲ್ಯದ ಅರಿವು, ಆನಂದವುಂಟುಮಾಡಿ ಹಳಕಟ್ಟಿಯವರಿಗೆ ಸಂತೋಷ ತಡೆಯದೇ ಆನಂದಾಶ್ರು ಉದಿರಿಸಿದರು.

ಈ ಘಟನೆಯಿಂದ ಹಳಕಟ್ಟಿಯವರ ವಚನ ಕಾರ್ಯ ಗಟ್ಟಿಗೊಂಡಿತು. ಮುಂದೆ ಅದನ್ನು **ವಚನಶಾಸ್ತ್ರ ಭಾಗ**–೧ ಎಂದು ೧೯೨೩ ರಲ್ಲಿ ಪರಿಶ್ರಮವಹಿಸಿ ಬೆಳಗಾವಿಯ ಚೌಗಲೆ ಅವರ ಮಹಾವೀರ ಮುದ್ರಣಾಲಯದಲ್ಲಿ ಪ್ರಿಂಟ್ ಮಾಡಿಸಿದರು. ಈ ಗ್ರಂಥ ಹೊರಬಂದುದೆ ತಡ, ನಾಡಿನ ವಿದ್ವಾಂಸರು ಬೆಕ್ಕಸ ಬೆರಗಾದರು.

ಹಿತಚಿಂತಕ ಪ್ರಿಂಟಿಂಗ್ ಪ್ರೆಸ್ :

ವಚನ–ತಾಡೋಲೆಗಳ, ಹಳೆಯ ಹಸ್ತ ಪ್ರತಿಗಳ ಅಪಾರ ಸಂಗ್ರಹ, ಅದರ ಮಧ್ಯದಲ್ಲಿ ಹಳಕಟ್ಟಿ ಶರಣ ವಚನವಾಙ್ಮಯ ತಪಸ್ವಿ ! ಹಸ್ತಪ್ರತಿ ಬರೆಯಲು ಬಬಲೇಶ್ವರದ

ಶ್ರೀ ಸಂಗಪ್ಪ ಮಿರ್ಜಿ, ಚೊಳಚಗುಡ್ಡದ ಶ್ರೀ ಚಂದ್ರಶೇಖರಯ್ಯ ಮಠ ಇವರನ್ನು ನೇಮಿಸಿಕೊಂಡರು. (ಕೊನೆಯ ಕಾಲಕ್ಕೆ ೧೯೫೧-೬೪ ವರೆಗೆ ಶ್ರೀ ಲಿಂಗಣ್ಣ ಬಾಣದ ಹಾಗೂ ಹಳಕಟ್ಟಿಯವರ ಮಗ ಗುರುಪುತ್ರಪ್ಪ ಕಾರ್ಯನಿರ್ವಹಿಸಿದರು.)

ಗ್ರಂಥದ ಹಸ್ತಪ್ರತಿಗಳು ಸಿದ್ಧವಾದಂತೆಲ್ಲ, ಮುದ್ರಣಕ್ಕೆ ಬೇರೆಯವರ ಮುದ್ರಣಾಲಯ ಅವಲಂಬಿಸಬೇಕಾಗುತ್ತಿತ್ತು. ವಕೀಲ ವೃತ್ತಿನಿಲ್ಲಿಸಿದ್ದರಿಂದ ಆರ್ಥಿಕ ತೊಂದರೆಯಾಗತೊಡಗಿತು. ಸ್ವತಂತ್ರ ಮುದ್ರಣಾಲಯವನ್ನೇ ಹಾಕಬೇಕೆಂದು ಸಂಕಲ್ಪಿಸಿದರು. ಅಂದಿನ ಕಾಲದಲ್ಲಿ ಸಮಾಜ ಸಂಪೂರ್ಣ ಅಜ್ಞಾನದಲ್ಲಿತ್ತು. ಈ ವಚನ ಸಾಹಿತ್ಯ ಪ್ರಕಟನೆಗೆ, ಈ ಜ್ಞಾನಜಂಗಮಕ್ಕೆ ಧನ ದಾಸೋಹ ಮಾಡುವ ತಿಳುವಳಿಕೆ ಭಕ್ತ ಸಮುದಾಯಕ್ಕೆ ಇದ್ದಿರಲಿಲ್ಲ. ಶರಣ ಹಳಕಟ್ಟಿಯವರು ಒಂದು ಕಠಿಣವಾದ ನಿರ್ಧಾರ ಕೈಕೊಂಡರು. **ತಮ್ಮ ವಕೀಲ ವೃತ್ತಿಯಿಂದ ಗಳಿಸಿದ್ದ ಸ್ವಂತ ಮನೆಯನ್ನೇ ಮಾರಿ** 'ಪ್ರಿಂಟಿಂಗ್ ಪ್ರೆಸ್' ಒಂದನ್ನು ಖರೀಸಿದರು. (೨೨-೧೧-೧೯೨೫) ಅದಕ್ಕೆ **'ಹಿತಚಿಂತಕ ಪ್ರಿಂಟಿಂಗ್ ಪ್ರೆಸ್'** ಎಂದು ಹೆಸರಿಟ್ಟರು. **ಸ್ವಂತ ಮನೆ ಮಾರಿ, ಲಿಂಗಾಯತ ಸಮಾಜವೆಂಬ ಮಹಾಮನೆ ಕಟ್ಟಿದರು.** ತನ್ಮೂಲಕ ಸಮಾಜದ-ಧರ್ಮದ ಹಿತಚಿಂತನೆಯನ್ನೇ ಬಾಳಿನುದ್ದಕ್ಕೂ ಮಾಡಿದರು.

ಇಂಗ್ಲೀಷ ಭಾಷೆಯಲ್ಲಿ ಬಸವೇಶ್ವರ ವಚನಗಳ ಪ್ರಕಟಣೆ :

ಶ್ರೀ ಹಳಕಟ್ಟಿ ಶರಣರು ಸ್ವತಃ ಆಂಗ್ಲಭಾಷೆಯಲ್ಲಿಯೂ ಪಂಡಿತರಿದ್ದುದರಿಂದ ವಚನಗಳ ಮೌಲಿಕತೆಯು ಪ್ರಪಂಚದ ಜನತೆಗೆ ತಿಳಿಯಬೇಕೆಂಬ ಉತ್ಕಟ ಇಚ್ಛೆಯಿಂದ ಈ ಹಿಂದೆಯೇ ೧೯೧೫-೧೬ರಲ್ಲಿ ಬಸವೇಶ್ವರ ನೂರಾರು ವಚನಗಳನ್ನು ಇಂಗ್ಲೀಷಿಗೆ ಅನುವಾದಿಸಿದ್ದರು. ಇದನ್ನು ಓದಿ ತಿಳಿದಿದ್ದ. ರೆ॥ ಜೆ.ಎನ್.ಫಾರಕ್ವಾರ್ ಎಂಬ ಸಂಶೋಧಕರ ಸಲಹೆಯಂತೆ Indian Antiquary (ಇಂಡಿಯನ್ ಆ್ಯಂಟಿಕ್ವರಿ)ಯಲ್ಲಿ ಪ್ರಕಟನೆಗೆ ಕಳಿಸಿದರು. ಅದು ಸರ್ ರಿಚರ್ಡ ಕಾರ್ನಾಕ್ ಟೆಂಪಲ್ ಬಾರ್ಟ್ ಇವರ ಸಂಪಾದಕತ್ವದ Indian Antiquary-A Journal of Oriental Research ದಲ್ಲಿ ಲಂಡನ್‌ದಿಂದ Vol. LL.1922 ಇಸ್ವಿಯಲ್ಲಿ ಪ್ರಕಟವಾಯಿತು. ಅದರ ಪ್ರಾರಂಭ ಕೆಳಗಿನಂತಿದೆ-

VACHANAS ATTRIBUTED TO BASAVA

Translated by Raosahib P. G. Halakatti

Basava was leader of the veerashaiva or Lingayat sect in the middle of the twelth century, and probably was its **founder.** The sect has produced a large and varied literature.

ಶರಣ ಹಳಕಟ್ಟಿಯವರು ಮಾಡಿರುವ ಕನ್ನಡ ವಚನಗಳ ಇಂಗ್ಲೀಷ ಅನುವಾದ ಕೆಲವನ್ನು ನೋಡಬಹುದು.

ದಯವಿಲ್ಲದ ಧರ್ಮವದೇವುದಯ್ಯಾ ?
ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯು,
ದಯವೇ ಧರ್ಮದ ಮೂಲವಯ್ಯ
ಇಂತಲ್ಲದುದನು ಒಲ್ಲನಯ್ಯಾ ಕೂಡಲಸಂಗಮದೇವ.

What is that religion, wherein there is no mercy?
It is mercy that is wanted for all creatures.
It is mercy that is the root of religion
Kudalasangam Deva wants not that
which is unmerciful.

ಕಳಬೇಡ ಕೊಲಬೇಡ ಹುಸಿಯನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವರ ನೊಲಿಸುವ ಪರಿ.

Do not steal, Do not kill, Do not lie,
Be not angry, Have no contempt for others
....
This is internal purity. This is external purity
This is the way to please our kudalasangama Deva.

ಇಂತಹ ಸುಂದರ ಅನುವಾದವನ್ನು ತಮ್ಮ ವಚನಸಂಪಾದನೆಯ ಕಾರ್ಯದೊಂದಿಗೆ ಡಾ. ಫ. ಗು. ಹಳಕಟ್ಟಿಯವರು ಮುಂದುವರೆಸಿದ್ದರೆ, ಇಡೀ ಪ್ರಪಂಚದಾದ್ಯಂತ ವಚನ ಸಂದೇಶ ಅಂದೇ ಪಸರಿಸುತ್ತಿತ್ತೇನೋ !

(ಅನಂತರ ವಚನಗಳ ಅನುವಾದ ಕಾರ್ಯವನ್ನು ಶರಣ ಫ. ಗು. ಹಳಕಟ್ಟಿಯವರ ಆಶೀರ್ವಾದ ಪಡೆದು **ಶ್ರೀ ಎಸ್. ಎಂ. ಅಂಗಡಿಯವರು** ಸ್ವತಂತ್ರವಾಗಿ ಹಾಗೂ ಪ್ರೊ.ಮೆನೆಜಿಸ್ ಅವರೊಡಗೂಡಿ ಶ್ರೀ ಬಸವೇಶ್ವರ ವಚನಗಳು, ಶ್ರೀ ಚೆನ್ನಬಸವೇಶ್ವರ ವಚನಗಳು, ಶ್ರೀ ಸಿದ್ಧರಾಮೇಶ್ವರ ವಚನಗಳು, ಶ್ರೀ ಸಿದ್ಧಲಿಂಗೇಶ್ವರ ವಚನಗಳು, ಶ್ರೀ ಪ್ರಭುದೇವರ ವಚನಗಳು, ಶ್ರೀ ಅಕ್ಕಮಹಾದೇವಿ ವಚನಗಳನ್ನು ಅನುವಾದಿಸಿದರು. ಶೂನ್ಯ ಸಂಪಾದನೆ ಅನುವಾದ ಕಾರ್ಯದಲ್ಲಿ ಸಹಕರಿಸಿ, ಸಹಾಯ ಮಾಡಿದರು. 'Basava Darshan' ಎಂಬ ಬೃಹತ್ ಇಂಗ್ಲೀಷ ಮಹಾಕಾವ್ಯವನ್ನೇ

ಶ್ರೀ ಅಂಗಡಿಯವರು ಸ್ವತಂತ್ರವಾಗಿ ರಚಿಸಿದರು. ಶರಣ ಎಸ್. ಎಂ. ಅಂಗಡಿ ಅವರ ಒಡನಾಟದಲ್ಲಿದ್ದು ಇದನ್ನು ಸ್ವತಃ ನಾನು ಕಂಡಿದ್ದೇನೆ.)

ಚಿಕ್ಕಮಗಳೂರ ಸಾಹಿತ್ಯ ಪರಿಷತ್ತಿನಲ್ಲಿ ವಚನಗಳ ಬಗ್ಗೆ ವ್ಯಾಖ್ಯಾನ :

೧೯೨೧ ರಲ್ಲಿ ಚಿಕ್ಕಮಗಳೂರಿನಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ ಸಭೆಯಲ್ಲಿ ಶರಣ ಹಳಕಟ್ಟಿಯವರು ಬಸವಾದಿ ಶರಣರ ವಚನಗಳ ಬಗ್ಗೆ ಅದ್ಭುತವಾಗಿ ಉಪನ್ಯಾಸ ನೀಡಿದರು. ಕನ್ನಡಿಗರು ವಚನ ವಾಙ್ಮಯದ ದರ್ಶನ ಪಡೆದರು. ಅಭಿರುಚಿ ತಾಳಿದರು.

ವಚನಶಾಸ್ತ್ರಸಾರ ಭಾಗ-೧ ಇದರ ಪ್ರಸ್ತಾವನೆಯಲ್ಲಿ (೧೯೨೩ ರಲ್ಲಿ) ಶರಣ ಹಳಕಟ್ಟಿಯವರು '**ವಚನ ಗ್ರಂಥಗಳು** ಕನ್ನಡ ಭಾಷೆಯಲ್ಲಿ ಬಹು ಮಹತ್ವದ ಗ್ರಂಥಗಳಾಗಿವೆ. ಅವು ಒಂದು ಬಗೆಯ ವಾಙ್ಮಯವನ್ನೇ ಹುಟ್ಟಿಸಿರುತ್ತವೆಂದು ನಾವು ಹೇಳಬಹುದು. **ಈ ವಾಙ್ಮಯವು ಮೊದಲಿಗೆ ಬಸವೇಶ್ವರನ ಕಾಲದಲ್ಲಿ ಉಗಮವಾಯಿತು** ಎಂದು ತೋರುತ್ತದೆ. ಅಂದಿನಿಂದ ಈ ವರೆಗೆ ಅನೇಕ ವಚನಕಾರರು ಉದ್ಭವಿಸಿ, **ಲಿಂಗಾಯತ** ಮತ ತತ್ವಗಳನ್ನೂ, ಆಚಾರ ಪದ್ಧತಿಯನ್ನೂ ಇಂಥ ವಚನಗಳ ರೂಪವಾಗಿ ಅವರು ನಿರೂಪಿಸುತ್ತಾ ಬಂದಿರುವರು. ಈ ವಚನಕಾರರು ಕನ್ನಡ ವಾಙ್ಮಯವನ್ನು ಬೆಳೆಸಿರುವರಷ್ಟೇ ಅಲ್ಲ, ಅವರು ಕಾಲಕಾಲಕ್ಕೆ ಉತ್ಪನ್ನರಾಗಿ ಕರ್ನಾಟಕದ ಧಾರ್ಮಿಕ ಮತ್ತು ನೈತಿಕ ಉನ್ನತಿಗೋಸ್ಕರ ಬಹಳ ಪ್ರಯತ್ನಿಸಿದ್ದಾರೆ' ಎಂದು ವಿವರಿಸಿದ್ದಾರೆ.

ಶಿವಾನುಭವ ಪತ್ರಿಕೆ ಪ್ರಾರಂಭಿಸಿದ್ದು :

ನಾಡಿನ ಜನಮನಕ್ಕೆ ಬಸವಾದಿ ಶರಣರ ವಚನಗಳು ತಲುಪಬೇಕು, ಜನರು ಶರಣರ ವಿಶ್ವಮಾನ್ಯ ಸಂದೇಶ ಅರಿಯಬೇಕು ಎಂಬ ಘನೋದ್ದೇಶದಿಂದ ಶರಣ ಫ.ಗು.ಹಳಕಟ್ಟಿಯವರು ದಿನಾಂಕ: ೦೧-೦೨-೧೯೨೬ ರಂದು **'ಶಿವಾನುಭವ'** ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಗೆ ಶಿವಾನುಭವ ಎಂದು ಹೆಸರಿಟ್ಟ ಬಗ್ಗೆ ಸ್ವತಃ ಹಳಕಟ್ಟಿಯವರೇ ಹೇಳಿದ್ದಾರೆ – 'ಶಿವಶರಣರ ತತ್ವಗಳ ಉದ್ದೇಶವು ಶಿವನ ಅನುಭವ ಎಂದರೆ ಶಿವನನ್ನು ಕಾಣುವುದು ಅಥವಾ ಅರಿಯುವದು. ಇದೇ ಮುಖ್ಯವಾಗಿದ್ದರಿಂದಲೂ ಬಸವಾದಿ ಪ್ರಮಥರು ಕಲ್ಯಾಣ ಪಟ್ಟಣದಲ್ಲಿದ್ದಾಗ ತಮ್ಮ ಶರಣರ ಕೂಟಕ್ಕೆ 'ಶಿವಾನುಭವ ಮಂಟಪ' ಎಂಬ ಹೆಸರನ್ನು ಇಟ್ಟಿದ್ದರಿಂದಲೂ ನಾನು ಈ ಪತ್ರಿಕೆಗೆ 'ಶಿವಾನುಭವ' ಎಂಬ ಹೆಸರನ್ನಿಟ್ಟೆನು'.

ಈ ಶಿವಾನುಭವ ಪತ್ರಿಕೆಯು ಅಖಂಡ ೩೫ ವರುಷಗಳವರೆಗೆ ಸಾಗಿ ಬಂದಿತು. ಮೊದಲ ೩ ವರ್ಷ ತ್ರೈಮಾಸಿಕವಾಗಿ, ಬಳಿಕ ೨ ವರ್ಷ ಮಾಸಿಕವಾಗಿ, ಅನಂತರ ೫ ವರ್ಷ ದ್ವೈಮಾಸಿಕವಾಗಿ, ಕೊನೆಗೆ ೨೫ ವರ್ಷ ಮಾಸಿಕವಾಗಿ ಪ್ರಕಟವಾಯಿತು. ತನ್ನ ಸುದೀರ್ಘ ೩೫ ವರುಷಗಳ ಅವಧಿಯಲ್ಲಿ ಅಂದಜು ೧೫,೦೦೦ ಪುಟಗಳಷ್ಟು

ವಚನ ಸಾಹಿತ್ಯವನ್ನು, ಶರಣರ ಚರಿತ್ರೆ, ಕಾವ್ಯಗ್ರಂಥಗಳನ್ನು ನಾಡಿನ ಜನತೆಯ ಕೈಗಿತ್ತಿತು. ಶರಣ ಹಳಕಟ್ಟಿಯವರು ತಮ್ಮ ೮೧ನೆಯ ವಯಸ್ಸಿನ ವರೆಗೆ (೧೯೬೧) ಪತ್ರಿಕೆ ನಡೆಸಿದರು. ಮುಪ್ಪಿನಕಾಲದಲ್ಲಿ ವಿಪರೀತ ಆರ್ಥಿಕ ಅಡಚಣಿ ಉಂಟಾಗಿ ಪತ್ರಿಕೆಯು ೩೫ನೆಯ ಸಂಪುಟ, ಸಂಚಿಕೆ ೧-೨ ರೊಂದಿಗೆ ನಿಂತುಹೋಯಿತು.

ತಮ್ಮ ಬಾಳಿನ ೮೧ನೆಯ ವಯಸ್ಸಿನಲ್ಲಿ ಪತ್ರಿಕೆ ನಿಂತುಹೋದುದನ್ನು ಕಂಡು ಶರಣ ಹಳಕಟ್ಟಿಯವರು ಮೌನವಾಗಿ ನೊಂದುಕೊಂಡಿರಬೇಕು. ನಾಡಿನಾದ್ಯಂತ ಹೆಸರು, ಕೀರ್ತಿಗಳಿಸಿದರೂ ಕೂಡ, ನಾಡಿನಾದ್ಯಂತ ಲಕ್ಷಾಧೀಶ, ಕೋಟ್ಯಾಧೀಶ ಮಠಾಧೀಶರು, ಶ್ರೀಮಂತ ಭಕ್ತರಿದ್ದೂ ಕೂಡ ಈ ಶರಣರ ಪತ್ರಿಕೆ ಉಳಿಸಲು ಅಂದು ಮುಂದು ಬರಲಿಲ್ಲವಲ್ಲ ಎಂಬುದನ್ನು ನೆನಸಿಕೊಂಡಾಗ ಇದೆಂತಹ ಸಮಾಜ? ಲಿಂಗಾಯತರು ಹೀಗೇಕಾದರು? ಎಂದು ಆಶ್ಚರ್ಯವೆನಿಸುತ್ತದೆ, ಸಂಕಟವೆನಿಸುತ್ತದೆ.

೩೫ ವರುಷಗಳ ಸುದೀರ್ಘ ಕಾಲದಲ್ಲಿ ಶಿವಾನುಭವ ಪತ್ರಿಕೆಯು ನೂರಾರು ಜನ ಶರಣ ಸಾಹಿತಿಗಳನ್ನು, ಬರಹಗಾರರನ್ನು, ನೂತನ ವಚನಕಾರರನ್ನು ಬೆಳಕಿಗೆ ತಂದಿದೆ. ಬೆನಗಲ್ ರಾಮರಾವ್, ಜೀರಗೆ ಕಟ್ಟಿ ಬಸವಪ್ಪ, ಬಿ.ಶಿವಮೂರ್ತಿ ಶಾಸ್ತ್ರಿಗಳು, ಮಧುರಚೆನ್ನರು, ಹರ್ಡೇಕರ ಮಂಜಪ್ಪನವರು, ಹಾಲಭಾವಿಯವರು, ವೈ. ನಾಗೇಶ ಶಾಸ್ತ್ರಿಗಳು, ಪಾಂಡುರಂಗ ದೇಸಾಯಿ, ಶಿ. ಚೆ. ನಂದಿಮಠ, ಎಂ. ಆರ್. ಸಾಖರೆ, ಸ. ಸ. ಮಾಳವಾಡ, ನವಕಲ್ಯಾಣಮಠದ ಕುಮಾರ ಸ್ವಾಮಿಗಳು, ಶ್ರೀ ಜ.ಚ.ನಿ., ಮಹಾಂತದೇವರು, ಕಲ್ಯಾಣಪ್ಪನವರು ಬ್ಯಾಳಿ, ಸಿದ್ಧಯ್ಯಪುರಾಣಿಕ, ಬುದ್ಧಯ್ಯ ಪುರಾಣಿಕ, ಮಹಾಂತಣ್ಣವರ, ಪುಣಬಗಟ್ಟಿ ಬಸವಯ್ಯ, ಬಸವಲಿಂಗಯ್ಯ, ಸಿಂಪಿ ಲಿಂಗಣ್ಣ, ಬಂಥನಾಳ ಶಿವಯೋಗಿಗಳು, ಬಿಳೇ ಅಂಗಡಿ ಮುಂತಾದ ಅನೇಕರು ಬೆಳಕಿಗೆ ಬಂದರು.

ಶಿವಾನುಭವ ಕುರಿತು ಶ್ರೀ ಮಹಾಂತಣ್ಣವರ ೧೫-೧೨-೧೯೨೭ರಲ್ಲಿ ಒಂದು ಪದ್ಯ ರಚಿಸಿದ್ದು-ಪ್ರಕಟವಾಗಿದೆ :

ಶಿವಶರಣರ ನಿಜಶೀಲಂ
ಶಿವಯೋಗ ಸ್ಥಲ ಕುಲಗಳ ಸಕೀಲ ಜ್ಞಾನಂ
ಶಿವಸಿದ್ಧಾಂತೋತ್ಕರ್ಷಂ
ಶಿವಸೂತ್ರಸಾರ ವಚನಮಿದು ಶಿವಾನುಭವಂ॥

ಶಿವಾನುಭವ ಪತ್ರಿಕೆಯ ವಿಷಯವೈವಿಧ್ಯತೆ ಆಶ್ಚರ್ಯಚಕಿತರನ್ನಾಗಿಸುತ್ತದೆ. ಶಿವಶರಣರ ಚರಿತ್ರೆಗಳು, ಹರಿಹರನ ರಗಳೆಗಳು, ಶಾಸನಗಳು, ವಚನಂಗಳು, ಸಂಘಟನೆ, ಅನುಭಾವ, ವಚನಗಳಿಗೆ ಅರ್ಥ, ಶಿವಾನುಭವ ಶಬ್ದಕೋಶ, ವೀರಶೈವ ರಾಜರ ಚರಿತ್ರೆ ಮುಂತಾದವೆಲ್ಲ ಹೊರಹೊಮ್ಮಿವೆ.

'೩೫ ವರ್ಷ ನಡೆದ ಪತ್ರಿಕೆಗೆ ಚಂದಾದಾರರು ಮಾತ್ರ ೩೦೦ ಸಂಖ್ಯೆಗಿಂತ ಎಂದೂ ಹೆಚ್ಚಾಗಲಿಲ್ಲ' ಎಂಬುದೇ ತುಂಬ ದುಃಖದ ಸಂಗತಿಯಾಗಿದೆ.

ಧರ್ಮಗ್ರಂಥಗಳ ಸಂಶೋಧನೆ ಹಾಗೂ ಪ್ರಸಾರ ಸಂಸ್ಥೆ :

೨೩-೧೧-೧೯೨೬ ರಂದು ಅಂದರೆ ಶಿವಾನುಭವ ಪತ್ರಿಕೆ ಪ್ರಾರಂಭವಾದ ಕೆಲವೇ ತಿಂಗಳಲ್ಲಿ ವಿಜಾಪುರದ ಧರ್ಮಾಭಿಮಾನಿಗಳನ್ನು ಒಂದೆಡೆ ಕೂಡಿಸಿ, ವೀರಶೈವ ಧರ್ಮಗ್ರಂಥಗಳ ಸಂಶೋಧನೆ ಹಾಗೂ ಪ್ರಸಾರ ಸಂಸ್ಥೆಯನ್ನು ಪ್ರಾರಂಭಿಸಿದರು. ಶ್ರೀ ಹಳಕಟ್ಟಿ ಶರಣರೇ ಈ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಬಸವಾದಿ ಶರಣರ ವಚನ ಗ್ರಂಥಗಳನ್ನು ಊರೂರಿಗೆ ಮುಟ್ಟಿಸುವ ಒಂದು ಕಾರ್ಯಯೋಜನೆ ರೂಪಿಸಿದರು.

ಬಳ್ಳಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದದ್ದು :

೧೯೨೬ ರಲ್ಲಿ ಬಳ್ಳಾರಿಯಲ್ಲಿ ಜರುಗಿದ ೧೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ವಿದ್ವತ್ಪೂರ್ಣ ಭಾಷಣವನ್ನು ನೀಡಿದರು. ಈ ಭಾಷಣದಲ್ಲಿ ಕರ್ನಾಟಕತ್ವದ ಅವಶ್ಯಕತೆ, ಕರ್ನಾಟಕತ್ವವೆಂದರೇನು? ಸಮ್ಮೇಳನದ ಉದ್ದೇಶ, ಕರ್ನಾಟಕದ ಗತವೈಭವ, ಕರ್ನಾಟಕದ ಅವನತಿ ಕಾಲವು, ಕರ್ನಾಟಕದ ಎಚ್ಚರಿಕೆ, ಯೋಗ್ಯ ಶಿಕ್ಷಣ ಕ್ರಮ, ಪ್ರಾಥಮಿಕ ಶಿಕ್ಷಣ, ಹೈಸ್ಕೂಲು ಮತ್ತು ಉಚ್ಚ ಶಿಕ್ಷಣ, ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆ ಅವಶ್ಯಕತೆ, ಕರ್ನಾಟಕದ ಅನೇಕ ಭಾಗಗಳಲ್ಲಿ ಪ್ರಾಥಮಿಕ ಕನ್ನಡ ಶಾಲೆಗಳಿಲ್ಲದ್ದು, ಕೋರ್ಟು ಕಛೇರಿಗಳಲ್ಲಿಯ ಭಾಷೆ ಕನ್ನಡವಿಲ್ಲದ್ದು, ಜಿಲ್ಲೆಗಳ ಪುನರ್ಘಟನೆ, ಕರ್ನಾಟಕ ಏಕೀಕರಣ, ಕರ್ನಾಟಕದ ಪ್ರಾಚೀನ ಸಂಸ್ಕೃತಿಯನ್ನು ಶೋಧಿಸುವದು, ಗ್ರಂಥ ರಚನಾಕಾರ್ಯಗಳು, ಭಾಷಾ ಭೇದಗಳು, ವೈಜ್ಞಾನಿಕ ವಿಷಯಗಳಲ್ಲಿಯ ಶಬ್ದಗಳು, **ಅಕ್ಷರ ಯೋಜನೆ** ಯೋಗ್ಯ ಸಂಘಟನೆ ಮತ್ತು ಪ್ರಚಾರಣೆಯ ಕಾರ್ಯಗಳು, ಮುಂತಾದ ವಿಷಯಗಳ ಬಗ್ಗೆ ಉದ್ಬೋಧಕ ಭಾಷಣ ಮಾಡಿದ್ದನ್ನು ನೋಡಿದರೆ ಶ್ರೀ ಹಳಕಟ್ಟಿಯವರ ಆಳವಾದ ಅಧ್ಯಯನ, ಚಿಂತನ ನಾಡು ನುಡಿಯ ಬಗೆಗಿನ ಅಭಿಮಾನ, ಕಳಕಳಿಯು ತಿಳಿದುಬರುತ್ತದೆ. ತಮ್ಮ ಭಾಷಣದ ಉಪಸಂಹಾಋದಲ್ಲಿ '.....ನಾವು ಹಿಂದುಳಿದಿದ್ದೇವೆ. ಆದ್ದರಿಂದ ನಮ್ಮ ದುರವಸ್ಥೆಗೆ ನಾವೇ ಕಾರಣರೇ ಹೊರತು ಬೇರೊಬ್ಬರಲ್ಲ. ನಮ್ಮಲ್ಲಿ ಈ ಕರ್ತವ್ಯತಾಪರಾಙ್ಮುಖತೆಯು ಬಹಳ ದಿವಸ ದಿಂದ ನೆಲೆಗೊಂಡಿದೆ. ಈ ಸ್ಥಿತಿಯುನ್ನು ತೊಲಗಿಸಿ, ಕರ್ನಾಟಕವನ್ನು ಪುನರುಜ್ಜೀವನಗೊಳಿಸುವ ಕಾರ್ಯಗಳನ್ನು ನಮ್ಮಲ್ಲಿಯ ಮಹನೀಯರು ತೀವ್ರ ಕೈಕೊಳ್ಳಬೇಕೆಂದು.....ಹಾರೈಸುತ್ತೇನೆ' ಎಂದು ವಿನಂತಿಸಿದ್ದಾರೆ.

ವೀರಶೈವ ಧರ್ಮ ಗ್ರಂಥ ಪ್ರಸಾರಕ ಸಂಘ-ಸ್ಥಾಪನೆ :

ವಚನಶಾಸ್ತ್ರಸಾರ, ಬಸವೇಶ್ವರ ವಚನಗಳು ಮುಂತಾದ ಶರಣರ ಧರ್ಮ ಗ್ರಂಥಗಳು ನಾಡಿನ ಮೂಲೆ ಮೂಲೆಗಳಿಗೆ ತಲುಪಿಸಬೇಕೆಂದು ವೀರಶೈವ ಧರ್ಮ ಗ್ರಂಥ ಪ್ರಸಾರಕ ಸಂಘವನ್ನು ಸ್ಥಾಪನೆ ಮಾಡಿದರು.

ಒಕ್ಕಲುತನ ಸುಧಾರಣಾ ಸಮಿತಿಯ ಅಧ್ಯಕ್ಷರಾದದ್ದು :

ಒಕ್ಕಲುತನವು ತುಂಬಾ ಹಿಂದುಳಿದಿತ್ತು. ಅದರಲ್ಲಿ ಸರಿಯಾದ ಕ್ರಮಗಳು ಇಲ್ಲದ್ದರಿಂದ ಮಳೆಯ ನೀರು ವ್ಯಯವಾಗಿ ಹೋಗುತ್ತಿತ್ತು. ಭೂಮಿ ಸವಕಳಿಯಾಗಿ ಮೇಲ್ಮಣ್ಣು ಹರಿದುಹೋಗಿ ಹೊಳೆ-ಹಳ್ಳ ಸೇರುತ್ತಿತ್ತು. ಈ ಕುರಿತು ಸಹ ಹಳಕಟ್ಟಿಯವರು ಒಕ್ಕಲುತನ ಸುಧಾರಣಾ ಸಮಿತಿಯನ್ನು ಪ್ರಾರಂಭಿಸಿ, ಅದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಮುಂದೆ 'ಶ್ರೀ ನಾಗಭೂಷಣ ಘನಮಠದಾರ್ಯರ **ಕೃಷಿಜ್ಞಾನ ಪ್ರದೀಪಿಕೆ'** ಎಂಬ ಗ್ರಂಥವನ್ನು ಸಂಶೋಧಿಸಿ ಪ್ರಕಟಿಸಿದರು (೧೯೩೮). ಒಕ್ಕಲಿಗರು ತಮ್ಮ ಸೋಮಾರಿತನದಿಂದ ಈ ಉದ್ಯೋಗದಲ್ಲಿ ಹೇಗೆ ಹಾನಿಯನ್ನು ಹೊಂದುತ್ತಿರುವರು ಎಂಬುದನ್ನು ತಿಳಿಯಪಡಿಸಿದ್ದಾರೆ. ಅವರು ಆರ್ಥಿಕವಾಗಿ ಸಬಲರಾಗಲು ಹೇಗೆ ಕೃಷಿಕೈಕೊಳ್ಳಬೇಕು. ಕೃಷಿ ಉಪಕರಣಗಳ ಬಗ್ಗೆ, ಎತ್ತುಗಳ ಬಗ್ಗೆ, ಒಣಬೇಸಾಯ, ನೀರಾವರಿ ಇತ್ಯಾದಿ ಅರಿತು ಹೇಗೆ ದುಡಿಯಬೇಕು ಎಂದು ಅನುಭವಾತ್ಮಕವಾಗಿ ವಿವರಣೆ ಇದೆ. ಘನಮಠ ಶಿವಯೋಗಿಗಳು ಬಸವಭಕ್ತರು, ಬಸವತತ್ತ್ವದ ಕೃಷಿ-ಕಾಯಕದ ಸಂದೇಶವನ್ನು ಇದರಲ್ಲಿ ಅಳವಡಿಸಿದ್ದಾರೆ. ಶ್ರೀ ಸಿದ್ರಾಮಪ್ಪ ಕುನ್ನಾಳ ಸಾ॥ ಬೆಕ್ಕಿನಾಳ ತಾ. ಸಿಂದಗಿ ಇವರು ಘನಮಠ ಶಿವಯೋಗಿಗಳ ಆದೇಶದಂತೆ ಬರೆದು ಸಿದ್ಧಪಡಿಸಿದ ಈ ಕೃಷಿಜ್ಞಾನ ಪ್ರದೀಪಿಕೆ ಗ್ರಂಥವು ಆದರ್ಶಮಯವಾಗಿದೆ.

ಡಾ ॥ ಡಿ. ಸಿ. ಪಾವಟೆ ಅವರನ್ನು ಸತ್ಕರಿಸಿದ್ದು :

ಇಂದಿನ ಕರ್ನಾಟಕ ವಿಶ್ವವಿದ್ಯಾಲಯುದ ಶಿಲ್ಪಿ, ರ್‍ಯಾಂಗ್ಲರ್ ಡಾ॥ ಡಿ.ಸಿ.ಪಾವಟೆಯವರು ಆಂಗ್ಲನಾಡಿನಲ್ಲಿ ಅಧ್ಯಯನ ಮಾಡಿ, ಉನ್ನತ ಪದವಿ ಪಡೆದು ಬಂದಾಗ, ಲಿಂಗಾಯತ ಸಮಾಜದ ಒಬ್ಬ ಯುವಕ ಸಾಧಿಸಿದ ಸಾಧನೆಯನ್ನು ಗೌರವಿಸಲೋಸಗ ಡಾ॥ ಪಾವಟೆಯವರನ್ನು ವಿಜಾಪುರಕ್ಕೆ ಕರೆಯಿಸಿಕೊಂಡು ದಿನಾಂಕ ೨೫-೦೯-೧೯೨೮ ರಂದು ಶೇಫರ್ಡ್‌ಹಾಲ್‌ನಲ್ಲಿ ಸತ್ಕರಿಸಿದರು. ಇಲ್ಲಿ ಶರಣ ಹಳಕಟ್ಟಿಯವರಲಿದ್ದ ಗುಣಗ್ರಾಹಿತ್ವ, ಸಮಾಜಕಳಕಳಿ, ವಿದ್ಯಾವಂತ ಯುವಕರಿಗೆ ಪ್ರೋತ್ಸಾಹಿಸುವಿಕೆ ಕಂಡುಬರುತ್ತದೆ.

ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರಾದ್ದು :

ಶರಣ ಫ. ಗು. ಹಳಕಟ್ಟಿಯವರು ಮುಂಬೈಯಲ್ಲಿ ಬಿ.ಎ. ಓದುತ್ತಿರುವಾಗಲೇ ೧೯೦೧-೧೯೦೨ರಲ್ಲಿ ಆಲೂರ ವೆಂಕಟರಾಯರು ಮತ್ತು ಹಳಕಟ್ಟಿಯವರು ಸಹಪಾಠಿಗಳಾಗಿದ್ದರು. ಕನ್ನಡದ ಬಗ್ಗೆ ಗೆಳೆಯರಿಬ್ಬರು ಚರ್ಚಿಸುತ್ತಿದ್ದರು. ಸ್ವತಃ ಹಳಕಟ್ಟಿಯವರು ಬಿ.ಎ., ಎಲ್.ಎಲ್.ಬಿ. ವಿಜ್ಞಾನ ಕಾನೂನು ಪದವೀಧರರಾಗಿದ್ದರೂ ಕನ್ನಡದ ಹೃದಯ-ಜೀವಾಳವಾಗಿರುವ ವಚನವಾಙ್ಮಯ ಸಂಶೋಧನೆ ಪ್ರಕಟನೆಗಳ ಮೂಲಕ ಕನ್ನಡಾಭಿಮಾನ, ನಾಡು-ನುಡಿ ಅಭಿಮಾನವನ್ನು ಜನತೆಯಲ್ಲಿ ಬಿಂಬಿಸುತ್ತಾ

ಬಂದಿದ್ದರು. ಶ್ರೀಯುತರ ಈ ಕನ್ನಡ ಸೇವೆಯನ್ನು ಮನಗಂಡು ಅಂದಿನ ಕನ್ನಡ ಏಕೀಕರಣದ ಸಂಘಟಕರು ೧೯೨೮ ಜೂನ್‌ದಲ್ಲಿ ಧಾರವಾಡದಲ್ಲಿ ಜರುಗಿದ ೩ನೆಯ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಸಮಾವೇಶ ನಡೆಸಿದರು. ಶ್ರೀ ಹಳಕಟ್ಟಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕರ್ನಾಟಕದ ಗತ ವೈಭವ, ಇಂದಿನ ದುಸ್ಥಿತಿ ವಿವರಿಸಿ ಸಂಘಟನೆ-ಕಾರ್ಯಯೋಜನೆಗಳನ್ನು ರೂಪಿಸಿ ಕೊಟ್ಟರು.

ನವಕರ್ನಾಟಕ ವಾರಪತ್ರಿಕೆ ಪ್ರಾರಂಭ :

ಕರ್ನಾಟಕ ಏಕೀಕರಣದ ಗುರಿಸಾಧನೆಗಾಗಿ ಅಕ್ಟೋಬರ ೬, ೧೯೨೭ರಂದು 'ನವಕರ್ನಾಟಕ'ವೆಂಬ ವಾರ ಪತ್ರಿಕೆಯನ್ನು ಪ್ರಾರಂಭಿಸಿದರು. ಇದು ಪ್ರತಿ ಗುರುವಾರ ವಿಜಾಪುರದಿಂದ ಹೊರಡುತ್ತಿತ್ತು. ಇದರ ಬೆಲೆ ಬಿಡಿ ಸಂಚಿಕೆಗೆ ೧ ಆಣೆ ಇತ್ತು. ಈ ಪತ್ರಿಕೆಯ ಬಗ್ಗೆ ರಾಮಲಿಂಗ ಕವಿಗಳು ೨೪-೧೧-೧೯೨೭ರ ನವಕರ್ನಾಟಕ ಪತ್ರಿಕೆಯಲ್ಲಿ ಕವನ ಬರೆದು ಉದ್ದೇಶ ಪ್ರಕಟಿಸಿದ್ದಾರೆ.

ಬುವಿಯೊಳ್ ವೈಭವದಿಂದೆ ಮುನ್ನ ಮೆರೆದೀ ತಾಯ್ನಾಡು ನವಕರ್ನಾಟಕಂ
ತವೆ ಹೀನ ಸ್ಥಿತಿಯನ್ನು ತಾಳ್ದುದು ತದುದ್ಧಾರಾರ್ಥ ಕಾಲೋಚಿತಂ
ವಿವಿಧ ಜ್ಞಾನವಿಕಾಸ ಸಂಸ್ಕೃತಿ ಕಲಾ ಸಂವರ್ಧನೆಗೈಯಲೀ
ನವ ಕರ್ನಾಟಕ ಜನ್ಮವೆತ್ತಿಹುದು ತಾಯ್ನಾಡೇಳ್ಗೆಯುದ್ದೇಶದಿಂ.

ವಿಲ್ಸನ್ ಬರಗಾಲ ನಿವಾರಣಾ ಸಂಸ್ಥೆ (Wilson Anti Femine Institute)

ಡಾ॥ ಫ. ಗು. ಹಳಕಟ್ಟಿಯವರು ವಿಜಾಪುರ ಜಿಲ್ಲೆಯ ಬರಗಾಲ ಪರಿಸ್ಥಿಯನ್ನು ಮನಗಂಡು, ವಿಲ್ಸನ್ ಬರ ನಿವಾರಣಾ ಸಂಸ್ಥೆಯ ಕಾರ್ಯದರ್ಶಿಯಾಗಿ (೧೯೩೮) ಹಲವಾರು ವರುಷಗಳವರೆಗೆ ಹಗಲಿರುಳು ಶ್ರಮಿಸಿದರು. ನೇರವಾಗಿ ರಾಜಕೀಯದಲ್ಲಿ ಪಾಲ್ಗೊಳ್ಳದೇ ರಾಜಕೀಯ ಸೌಲಭ್ಯಗಳನ್ನು ಪ್ರಜೆಗಳ ಉದ್ಧಾರಕ್ಕಾಗಿ ಸಾಮಾಜಿಕ, ಆರ್ಥಿಕ ಸುಧಾರಣೆಗಾಗಿ ಹಳಕಟ್ಟಿಯವರು ಶ್ರಮಿಸಿದುದನ್ನು ಕಾಣುತ್ತೇವೆ.

ಶಿವಾನುಭವ ಸಂಘಗಳ ಸ್ಥಾಪನೆ : ಮನೆಯಲ್ಲಿ ಮಾಹಾಮನೆ :

ವಚನವಾಙ್ಮಯ ಪ್ರಕಟವಾಗಿ ನಾಡಿನಾದ್ಯಂತ ವಚನ ಗ್ರಂಥಗಳು, ಶಿವಾನುಭವ ಪತ್ರಿಕೆ ಪ್ರಸಾರಗೊಂಡಂತೆಲ್ಲ ಜನ ಜಾಗೃತಿ ನಡೆಯಿತು. ಲಿಂಗಾಯತರು ಹಾಗೂ ಲಿಂಗಾಯತೇತರರೂ ಕೂಡ ವಚನಗಳ ಕಡೆಗೆ ಗಮನಹರಿಸಿದರು. ಆಗ ಹಳಕಟ್ಟಿಯವರು 'ಶಿವಾನುಭವ ಸಂಘ ಸ್ಥಾಪಿಸಿದರು. ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶಗಳಲ್ಲಿ ಶಿವಾನುಭವ ಸಂಘಗಳು ಪ್ರಾರಂಭವಾದವು. ಮನೆ ಮನೆಗಳಲ್ಲಿ ವಚನಗಳ ಚಿಂತನೆ-ಅನುಭಾವ ಪ್ರಾರಂಭವಾಯಿತು. 'ಮನೆಯಲ್ಲಿ ಮಹಾಮನೆ' ಪ್ರಾರಂಭಿಸಿದರು. ವಚನಗಳ ಅನುಭಾವ ಎಲ್ಲೆಡೆ ಪಸರಿಸತೊಡಗಿತು.

ಶಿವಾನುಭವ ಪತ್ರಿಕೆಯಲ್ಲಿ 'ಶಿವಾನುಭವ ಸಂಘ' ದ ಧ್ಯೇಯ-ಧೋರಣೆಗಳು, ಕಾರ್ಯ-ವಿಧಾನಗಳ ಬಗ್ಗೆ ವಿವರವಾಗಿ ವಿವರಿಸಿರವುದನ್ನು ಕಾಣುತ್ತೇವೆ.

ಸಂಗೀತದಲ್ಲಿ ಶಿವಶರಣರ ವಚನಗಳು :

ಬಸವಾದಿ ಶರಣರ ವಚನಗಳು ಸಂಗೀತಕ್ಕೆ ಅಳವಡುತ್ತವೆ ಎಂಬುದನ್ನು ಮನಗಂಡ ಹಳಕಟ್ಟಿ ಶರಣರು ತಮ್ಮ ಶ್ರೀ ಸಿದ್ಧೇಶ್ವರ ಪ್ರೌಢಶಾಲೆಯಲ್ಲಿ ಶ್ರೀ ಪಿ.ವ್ಹಿ.ಪಾಟೀಲ ಎಂಬ ಸಂಗೀತ ಶಿಕ್ಷಕರನ್ನು ನೇಮಿಸಿದರು. ಅವರಿಂದ ಕೆಲವು ವಚನಗಳಿಗೆ ರಾಗ-ತಾಳ ಕೂಡಿಸಿ ಸಂಗೀತಸಭೆ ಜರುಗಿಸಿದರು. ಹೈದ್ರಾಬಾದನ ರೇಡಿಯೋ ಕೇಂದ್ರದ ತಬಲಾವಾದಕರನ್ನು ಕರೆಯಿಸಿ ಕಾರ್ಯಕ್ರಮ ಮಾಡಿಸಿದ ನಂತರ 'ಹೀಜ್ ಮಾಸ್ಟರ್ಸ ವ್ಹಾಯಿಸ್' ಕಂಪನಿಯವರಿಂದ ವಚನಗಳನ್ನು ರಿಕಾರ್ಡ ಮಾಡಿಸಿದರು. ೭೫ ವಚನಗಳನ್ನು ಸಂಗೀತಕ್ಕಾಗಿಯೇ ಆಯ್ಕೆ ಮಾಡಿ 'ಸಂಗೀತದಲ್ಲಿ ಶಿವಶರಣರ ವಚನಗಳು' ಎಂಬ ಗ್ರಂಥವನ್ನು ಪ್ರಕಟಿಸಿದರು.

ಶರಣ ಹರ್ಡೇಕರ ಮಂಜಪ್ಪನವರಿಗೆ ಮಾರ್ಗದರ್ಶನ :

೧೮೮೬ರಲ್ಲಿ ಜನಿಸಿದ್ದ ಶರಣ ಹರ್ಡೇಕರ ಮಂಜಪ್ಪನವರು ಬನವಾಸಿಯಲ್ಲಿ ಮುಲ್ಕಿ ಪರೀಕ್ಷೆ ಪಾಸಾಗಿ, ೧೯೦೫ರಲ್ಲಿ ಶಿಕ್ಷಕ ವೃತ್ತಿಗೆ ರಾಜೀನಾಮೆ ಇತ್ತು. ದಾವಣಗೆರೆಯಲ್ಲಿ ನೆಲೆಸಿ, 'ಧನುರ್ಧಾರಿ' ಮತ್ತು 'ಖಾದಿ ವಿಜಯ' ಪತ್ರಿಕೆಗಳನ್ನು ನಡೆಸುತ್ತಾ. ೧೯೧೩ರಲ್ಲಿ **'ಬಸವಜಯಂತಿ'** ಪ್ರಪ್ರಥಮವಾಗಿ ಪ್ರಾರಂಭಿಸಿ ಅಲ್ಲಿಯ ಶ್ರೀ ಮೃತ್ಯುಂಜಯ ಸ್ವಾಮಿಗಳವರ ವಿರಕ್ತಮಠದಿಂದ ಆಚರಣೆ ಮಾಡಿದರು. ಮುಂದೆ ಅಥಣಿ ಶಿವಯೋಗಿಗಳಿಂದ ಇಷ್ಟಲಿಂಗ ಸಂಸ್ಕಾರ ಪಡೆದರು. ಬಸವಾದಿ ಶರಣರ ಬಗ್ಗೆ ಗ್ರಂಥಗಳನ್ನು ಪ್ರಕಟಿಸುತ್ತಾ ಮುಂದೆ ತಾಯಿಯು ಲಿಂಗೈಕ್ಯರಾಗಲು ದಾವಣಗೆರೆ ತೊರೆದು ವಿಜಾಪುರಕ್ಕೆ ಬಂದರು. ಶರಣ ಫ. ಗು. ಹಳಕಟ್ಟಿಯವರನ್ನು ಕಂಡರು. ಶರಣರ ವಚನಗಳ ಬಗ್ಗೆ ೧೯೨೫ರಲ್ಲಿ ಚರ್ಚಿಸಿದರು. ಹಳಕಟ್ಟಿ ಶರಣರ ಸಲಹೆಯಂತೆ ಆಗ ತರುಣ ಶಿವಯೋಗಿಯಾಗಿದ್ದ ಬಂಥನಾಳದ ಶ್ರೀ ಸಂಗನಬಸವಸ್ವಾಮಿಗಳವರಲ್ಲಿ ಆಗಮಿಸಿ, ಪೂಜ್ಯರಿಗೆ **'ರಾಷ್ಟ್ರಸೇವಾ ದೀಕ್ಷೆ'** ನೀಡಿದರು. ಪೂಜ್ಯರಿಂದ ಬಸವತತ್ತ್ವ ಪ್ರಸಾರದ **'ಜಂಗಮ ದೀಕ್ಷೆ'** ಹೊಂದಿ ಬಂಥನಾಳದಲ್ಲಿ ೧೯೨೫ರ ಶ್ರಾವಣಮಾಸದಲ್ಲಿ **ಬಸವಣ್ಣನವರ ವಚನ ಪ್ರವಚನ** ಮಾಡಿದರು. ಪ್ರವಚನದ ಮಂಗಲ ಸಮಯಕ್ಕೆ ೨೦೦ ಜನ ಸ್ತ್ರೀ-ಪುರಷರಿಗೆ ಲಿಂಗದೀಕ್ಷೆ ಜರುಗಿಸಿದರು. ವಿಜಾಪುರ ಜಿಲ್ಲೆಯ ಬಹುತೇಕ ಎಲ್ಲ ಹಳ್ಳಿಗಳ ಸಂಚಾರ ಕೈಕೊಂಡು ಬಸವ ತತ್ತ್ವೋಪದೇಶ ಹಾಗೂ ಜನರಿಗೆ ದುಶ್ಚಟಗಳ ಬಿಡಿಸುವಿಕೆ ಕಾರ್ಯಕೈಕೊಂಡರು. 'ಚಾಂದಕವಠೆಯಷ್ಟು ಸ್ವಚ್ಛ ಹಳ್ಳಿ ನನಗೆ ಎಲ್ಲಿಯೂ ತೋರಲಿಲ್ಲ' ಎಂದು ತಮ್ಮ 'ಹಳ್ಳಿಗಳ ಸಂಚಾರ' ಗ್ರಂಥದಲ್ಲಿ ಬರೆದಿದ್ದಾರೆ.

ಅನಂತರ ಶರಣ ಮಂಜಪ್ಪನವರು ಹಾಗೂ ಬಂಥನಾಳದ ತರುಣ ಶಿವಯೋಗಿಗಳು ೦೫-೧೨-೧೯೨೬ ರಲ್ಲಿ ರಾ॥ ಸಾ॥ ಫ. ಗು. ಹಳಕಟ್ಟಿ ಅವರಲ್ಲಿಗೆ ಬಂದರು. ತಾವು ಸ್ಥಾಪಿಸಬೇಕೆಂದಿರುವ 'ವೀರಶೈವ ವಿದ್ಯಾಲಯ' ದ ಬಗ್ಗೆ ಚರ್ಚಿಸಿದರು. ಹಳಕಟ್ಟಿಯವರ ಮಾರ್ಗದರ್ಶನದಂತೆ ಬಂಥನಾಳ ಶಿವಯೋಗಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಚರ್ಚಿಸಿದರು.

ವೀರಶೈವ ವಿದ್ಯಾಲಯದ ಉಪಾಧಿಪತಿಗಳಾದದ್ದು :

ದಿನಾಂಕ : ೧೩-೦೫-೧೯೨೭ ರಂದು ಅಲಮಟ್ಟಿಯಲ್ಲಿ 'ವೀರಶೈವ ವಿದ್ಯಾಲಯ'ವು ಸ್ಥಾಪನೆಯಾಯಿತು. ಪೂಜ್ಯ ಬಂಥನಾಳ ಶಿವಯೋಗಿಗಳು ಅಧಿಪತಿ (Chancellor) ಆದರು. ಶರಣ ಫ. ಗು. ಹಳಕಟ್ಟಿಯವರು (Vice-Chancellor) ಉಪಾಧಿಪತಿಗಳಾದರು. ಮಂಜಪ್ಪನವರು ಸಹಾಯಾಧಿಪತಿಗಳು ಮತ್ತು ಕಾರ್ಯ-ನಿರ್ವಾಹಕರಾದರು. ೦೪-೦೫-೧೯೩೩ರಂದು ರಜಿಸ್ಟ್ರೇಶನ್ ಮಾಡಿಸಿದರು. ಇನ್ನಿತರ ಟ್ರಸ್ಟಿಗಳಾಗಿ ಶ್ರೀ ಮೋಟಗಿ ಚೆನ್ನವೀರಪ್ಪನವರು, ಶ್ರೀ ಶಿವಮೂರ್ತಿ ಹಿರೇಮಠ ಹಾವೇರಿ, ಶ್ರೀ ಎಸ್. ನಿಜಲಿಂಗಪ್ಪ ಚಿತ್ರದುರ್ಗ, ಶ್ರೀ ಬಸನಗೌಡ ಪಾಟೀಲ ನೈಜಾಮ ರಾಜ್ಯ ಇವರು ಕಾರ್ಯನಿರ್ವಹಿಸಿದರು. ಹರ್ಡೇಕರ ಮಂಜಪ್ಪನವರು **ಶರಣ-ಸಂದೇಶ ಪತ್ರಿಕೆ** ಪ್ರಾರಂಭಿಸಿದರು.

ವಚನ ಗ್ರಂಥಗಳ ಪ್ರಕಟನೆಗೆ ಸಹಾಯ :

ಶರಣ ಫ. ಗು. ಹಳಕಟ್ಟಿಯವರು ತುಂಬಾ ಪರಿಶ್ರಮದಿಂದ ಶಿವಾನುಭವ, ನವಕರ್ನಾಟಕ ಪತ್ರಿಕೆ ನಡೆಸುತ್ತಾ, 'ಹಿತಚಿಂತಕ ಪ್ರಿಂಟಿಂಗ್ ಪ್ರೇಸ್' ದ ನೌಕರರಿಗೆ ಪಗಾರ (ಸಂಬಳ) ಕೊಡುತ್ತಾ, ತಮ್ಮ ಕುಟುಂಬ ಜೀವನ ಸಾಗಿಸುವದು ಕಠಿಣವೆನಿಸಿದರೂ ಹಿಡಿದ ಕಾರ್ಯದಿಂದ ಹಿಂದೆ ಸರಿಯಲಿಲ್ಲ.

ವಚನಶಾಸ್ತ್ರಸಾರ ಭಾಗ-೨ ಬೃಹತ್ ಗ್ರಂಥ ಮುದ್ರಣಕ್ಕೆ ಸಿದ್ಧವಾಯಿತು. ಹಣದ ಅಡಚಣಿ, ಶರಣ ಮಂಜಪ್ಪನವರು ವಿಜಾಪುರ ಜಿಲ್ಲೆಯಾದ್ಯಂತ ಸಂಚರಿಸಿ ಈ ಗ್ರಂಥ ಮುದ್ರಣಕ್ಕಾಗಿ ೭೭೬ ರೂಪಾಯಿ ಶೇಖರಿಸಿದರು. ೨೬-೦೮-೧೯೩೫ ರಂದು ಬಾಗಲಕೋಟೆಯಲ್ಲಿ ಸಭೆ ಜರುಗಿಸಿ, ಸಾರ್ವಜನಿಕವಾಗಿ ಹಳಕಟ್ಟಿ ಶರಣರಿಗೆ ಅರ್ಪಿಸಿದರು. ಈ ಗ್ರಂಥವು ೧೯೩೮ರಲ್ಲಿ ಪ್ರಕಟವಾಗಿ, ಶರಣ ಸಿದ್ಧಾಂತದ ಮಾಹಿತಿಯು ನಾಡಿನ ಜನತೆಗೆ ತಿಳಿಯುವಂತಾಯಿತು.

ಇದಲ್ಲದೇ ಹಾನಗಲ್ಲ ಶ್ರೀ ಕುಮಾರಸ್ವಾಮಿಗಳು ಭಕ್ತರಿಂದ ೫೦೦ರೂಪಾಯಿಗಳನ್ನು ಕೊಡಿಸಿದರು. ದಾವಣಗೆರೆಯ ಮಸಗಿ ಮರಿಶಾಂತಪ್ಪನವರು 'ಉಯಿಲು' ಬರೆದ ಪ್ರಕಾರ ಅವರ ಮಕ್ಕಳು ದೇಣಿಗೆ ಕಳಿಸಿದುದು ಶಿವಾನುಭವಕ್ಕೆ ಸಹಾಯವಾಯ್ತು. ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು, ಶ್ರೀ ಗುರುಸಿದ್ಧ

ಮಹಾಸ್ವಾಮಿಗಳು, ಶ್ರೀ ವೀರಭದ್ರಪ್ಪ ಹಾಲಭಾವಿ, ಶ್ರೀ ಮೂರುಸಾವಿರಪ್ಪ ಸಾದರಳ್ಳಿ, ಶ್ರೀ ಬಂಥನಾಳ ಶಿವಯೋಗಿಗಳು, ಶ್ರೀ ನಾಗಪ್ಪಣ್ಣ ಕಾಡಾದಿ ಮುಂತಾದವರು ಒಂದೊಂದು ವಚನ ಗ್ರಂಥ ಪ್ರಕಟನೆಗೆ ಸಹಾಯ ಮಾಡಿದರು. ಕೆಲವರಿಂದ ಚಿಕ್ಕ ಚಿಕ್ಕ ದೇಣಿಗೆಗಳು ಬಂದದ್ದನ್ನು (ಒಂದು ರೂಪಾಯಿಂದ ಐದು ರೂಪಾಯಿ...ಇತ್ಯಾದಿ) ಹಳಕಟ್ಟಿಯವರು ಕೃತಜ್ಞತೆಯಿಂದ ಸ್ಮರಿಸಿ ಶಿವಾನುಭವದಲ್ಲಿ ಪ್ರಕಟಿಸಿದ್ದಾರೆ. ಇದೆಲ್ಲವೂ ಸಹ 'ಹಸಿದವನಿಗೆ ಅಗಳು ಅನ್ನದೊರೆತಂತೆ, ನೀರಡಿಸಿದವನಿಗೆ ಹನಿ ನೀರು ದೊರೆತಂತೆ' ಆಯಿತೇ ವಿನಃ ನಾಡಿನ ಶ್ರೀಮಂತರಿಂದ, ಮಠಾಧಿಪತಿಗಳಿಂದ ಬೃಹತ್ ಪ್ರಮಾಣದ ಸಹಾಯ ದೊರೆಯಲಿಲ್ಲವೆಂಬುದು ತುಂಬಾ ಖೇದಕರ ಸಂಗತಿಯಾಗಿದೆ.

ಹಳಕಟ್ಟಿ ಶರಣರ ಕೌಟುಂಬಿಕ ಸ್ಥಿತಿ–ಗತಿಯು :

> ಸಂಸಾರವೆಂಬ ಅಡವಿಯಲ್ಲಿ ಹುಲಿಯುಂಟು, ಕರಡಿಯುಂಟು
> ಶರಣನಂಜ ! ಮಹಾಧೀರ ಶರಣನಂಜ !
> ಕೂಡಲಸಂಗನ ಶರಣ ನಿರ್ಭಯ !

ಎಂಬ ಬಸವಗುರುವಿನ ವಾಣಿಯಂತೆ ೮೪ ವರ್ಷಗಳ ಆಯುಷ್ಯದಲ್ಲಿ ೬೪ ವರ್ಷ ಧೀರ ಶರಣರಾಗಿ ಬಾಳನ್ನು ನಡೆಸಿದರು. ಶರಣರ ವಚನ ವಾಙ್ಮಯಕ್ಕಾಗಿ ಸಿರಿವಂತಿಕೆಯ ದುರಾಶೆಗೊಳಗಾಗದೇ, ಬಡತನವನ್ನು ಸ್ವಯಂ ಪ್ರೇರಣೆಯಿಂದ ಬರಮಾಡಿಕೊಂಡರು. ವಚನಗ್ರಂಥಗಳಿಗಾಗಿ ಮನೆಯನ್ನೇ ಮಾರಿದರು. ಹಿತ ಚಿಂತಕ ಪ್ರಿಂಟಿಂಗ್ ಪ್ರೇಸ್ ಹಾಕಿದರು. ಬಾಳಿನುದ್ದಕ್ಕೂ ಬಾಡಿಗೆ ಮನೆಯಲ್ಲಿ ಗಂಜಿ ಕುಡಿಯುತ್ತಾ ಬದುಕಿದರು.

ಶರಣ ಹಳಕಟ್ಟಿಯವರ **ಧರ್ಮಪತ್ನಿ ಭಾಗೀರಥಿಬಾಯಿಯು** ನಿಜಕ್ಕೂ ಶರಣೆಯೇ ಆಗಿದ್ದರು. ಆಯ್ದಕ್ಕಿ ಲಕ್ಕಮ್ಮರಂತೆ ಆಸೆಯನ್ನು ಗೆದ್ದುನಿಂತವರಾಗಿದ್ದರು. ಈ ದಂಪತಿಗಳಿಗೆ ಒಟ್ಟು ಏಳು ಜನ ಮಕ್ಕಳು ಹುಟ್ಟಿದರು. ೧) ಮಹಾಲಿಂಗ (೧೯೦೩) ೨) ಚಂದ್ರಶೇಖರ (೧೯೦೬) ೩) ಸರಸ್ವತಿ (೧೯೦೯) ೪) ಗುರುಪುತ್ರ (೧೯೧೩) ೫) ಪಾರ್ವತಿ (೧೯೧೫) ೬) ಸಾವಿತ್ರಿ (೧೯೧೭) ೭) ಶಿವಶಂಕರ (೧೯೧೯) ಇಂತಹ ತುಂಬು ಸಂಸಾರದ ಜವಾಬ್ದಾರಿ ನಿಭಾಯಿಸುತ್ತಲೇ, ಮಕ್ಕಳನ್ನು ಓದಿಸುತ್ತಾ, ಬೆಳೆಸಿದರು. ನೀರ ತಾವರೆಯಂತೆ ಶರಣ ಜೀವನ ನಡೆಸಿದರು.

ಶಿವನ ಸೊಮ್ಮು ಶಿವನಿಗೆ ಅರ್ಪಣ :

ತುಂಬಾ ಜಾಣನಾಗಿದ್ದ ಮಗ ಚಂದ್ರಶೇಖರ ತಾಂತ್ರಿಕ ಶಿಕ್ಷಣ ಪಡೆದು ಇಂಗ್ಲೆಂಡಿನ ಮೆಂಚೆಸ್ಟರದಲಿ ಬಿ.ಟೆಕ್ ಡಿಗ್ರಿ ಪಡೆದು ಕಲಕತ್ತಾದಲ್ಲಿ ಉನ್ನತ ಹುದ್ದೆಯ ನೌಕರಿಗೆ ಸೇರಿದ. ಬೆಂಗಳೂರಿನ ಎಂ.ಬಸವಲಿಂಗಯ್ಯನವರ ಮಗಳು ಗಿರಿಜಮ್ಮ-ಳೊಂದಿಗೆ ಮದುವೆಯಾಯಿತು. ಹರಿಹರ, ಗೀತಾ, ಚಿತ್ರಾ ಎಂಬ ಮೂರು ಮಕ್ಕಳು ಜನಿಸಿದ್ದರು. ಚಂದ್ರಶೇಖರನು ಕಲಕತ್ತಾ, ಮುಂಬೈ, ದಿಲ್ಲಿಗಳಲ್ಲಿ ನೌಕರಿ ಮಾಡಿದ,

ದಿಲ್ಲಿಯಲ್ಲಿ ನೌಕರಿಯಲ್ಲಿರುವಾಗಲೇ ನಡುಹರೆಯದಲ್ಲಿ ಆಕಸ್ಮಿಕವಾಗಿ ಲಿಂಗೈಕ್ಯನಾದ. ಈ ಸುದ್ಧಿ ತಂತಿ ಮೂಲಕ ವಿಜಾಪುರಕ್ಕೆ ಹಳಕಟ್ಟಿ ಶರಣರಿಗೆ ಮುಟ್ಟಿತು. ಶಿವಾನುಭವ ಪತ್ರಿಕೆಯ ಕಾರ್ಯದಲ್ಲಿ ಮಗ್ನರಾಗಿದ್ದರು. ತಂತಿ ಓದಿದರು, ಪಕ್ಕದಲ್ಲಿಟ್ಟರು. ಹಿಡಿದಿರ್ದ ಕಾಯಕ ಮುಗಿಸಿದರು. ಅಲ್ಲಿಯೇ ಇದ್ದವರೊಬ್ಬರು ತಂತಿ ಬಗ್ಗೆ ಕೇಳಿದಾಗ ಹೇಳಿದರು– 'ಶಿವನ ಸೊಮ್ಮು ಶಿವನಿಗೆ ಅರ್ಪಣ' ವಾಗಿದೆ.

ಅನಂತರ, ದಿಲ್ಲಿಗೆ ಹೋಗಿ ಸಂಸ್ಕಾರ ಮುಗಿಸಿ ಬಂದರು. ಅಂದಿನ ಕಾಲದಲ್ಲಿ ತಿಂಗಳಿಗೆ ೧೨೦೦ ರೂಪಾಯಿಗಳಿಸುತ್ತಿದ್ದ ಮಗ ಅಕಾಲ ಮರಣ ಹೊಂದಿದ. ಹಳಕಟ್ಟಿ ಶರಣರು ಸ್ಥಿತಪ್ರಜ್ಞರಾಗಿ ಉಳಿಯದೇ ಸ್ಥಿತಿಪ್ರಜ್ಞರಾಗಿ ಶರಣರ ಸೇವೆಯಲ್ಲಿ ನಿರತರಾದರು.

ನಂಬಿದೆನೆದರೆ ನಚ್ಚಿದೆನೆಂದರೆ.......

ಹಳಕಟ್ಟಿ ಶರಣರಿಗೆ ಕಷ್ಟಗಳ ಮೇಲೆ ಕಷ್ಟಗಳು ಬಂದವು. ಅವರು ಎದೆಗುಂದಲಿಲ್ಲ. ಧೃತಿಗೆಡಲಿಲ್ಲ, ಶಿವನಲ್ಲಿ ಪ್ರಾರ್ಥಿಸಲಿಲ್ಲ, ಮಾನವರಲ್ಲಿ ಬೇಡಲಿಲ್ಲ, 'ಯದ್‌ಭಾವಂ ತದ್‌ಭವತಿ' ಎಂದು ಕಾಯಕನಿಷ್ಠೆ ಮೆರೆದರು. ಬಸವಣ್ಣನವರು ಹೇಳಿರುವಂತೆ–

ನಚ್ಚಿದೆನೆಂದರೆ ಮಚ್ಚಿದೆನೆಂದರೆ ಸಲೆ ಮಾರುವೋದೆನೆಂದರೆ
ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು.
ಧನವನಲ್ಲಾಡಿಸಿ ನೋಡುವೆ ನೀನು, ಇವೆಲ್ಲಕ್ಕಂಜದಿದ್ದಡೆ
ಭಕ್ತಿ ಕಂಪಿತ ನಮ್ಮ ಕೂಡಲಸಂಗಮದೇವಾ.

ಹಳಕಟ್ಟಿ ಶರಣರನ್ನು ದೇವರು ಸರ್ವರೀತಿಯಿಂದಲೂ ಪರೀಕ್ಷಿಸಿದನೆಂದು ಕಾಣುತ್ತದೆ. ಹಗಲಿರುಳು ತಾಡೋಲೆಗಳ ಪರಿಷ್ಕರಣೆ–ಬರವಣಿಗೆಗಳಿಂದ ಕಿಡ್ನಿ ತೊಂದರೆಯಾಗಿ ೧೯೩೦ರಲ್ಲಿ ಶಸ್ತ್ರ ಚಿಕಿತ್ಸೆಗೊಳಗಾದರು. ಮತ್ತೊಂದು ಸಲ ೧೯೪೯ರಲ್ಲಿ ರೈಲಿನಲ್ಲಿ ಬರುವಾಗ ಬೋಗಿಯಲ್ಲಿ ಬರ್ಥದಿಂದ ಬಿದ್ದು ಕಾಲಿನ ಮೂಳೆ ಮುರಿದು ಆರು ತಿಂಗಳವರೆಗೆ ಪ್ಲಾಸ್ಟರ್ ಹಾಕಿಕೊಂಡು ಹಾಸಿಗೆ ಮೇಲೆಯೇ ಮಲಗಬೇಕಾಯ್ತು. ಆದರೂ ನೋವಿಗೆ ತಲೆಬಾಗಲಿಲ್ಲ. ಮಲಗಿಕೊಂಡೇ ಎದೆಯ ಮೇಲೆ ರಟ್ಟು ಇಟ್ಟುಕೊಂಡು ಪ್ರೂಫ್–ದೋಷಗಳನ್ನು ತಿದ್ದಿದರು. ದೇವರು ಶರೀರಕ್ಕೆ ತೊಂದರೆ ಕೊಟ್ಟ, ಮಗನನ್ನು ೧೯೫೦ರಲ್ಲಿ ಕಿತ್ತುಕೊಂಡು ಮನಸ್ಸನ್ನು ಅಲ್ಲಾಡಿಸಿ ನೋಡಿದ, ಬಡತನ ತಂದೊಡ್ಡಿ ಧನವನಲ್ಲಾಡಿಸಿಯೂ ನೋಡಿದ ! ಶರಣರು ಅಂಜಲಿಲ್ಲ ! ಕಾಯದ ಕಳವಳಕ್ಕಂಜಿ ಕಾಯಯ್ಯಾ ಎನ್ನಲಿಲ್ಲ ! ಜೀವನೋಪಾಯಕ್ಕಂಜಿ ಈಯಯ್ಯಾ ಎನ್ನಲಿಲ್ಲ !!

ಕಾಯಕದ ಸಂಗಾತಿ ಬೈಸಿಕಲ್ :

ಹಳಕಟ್ಟಿ ಶರಣರ ಕಾಯಕ ಸಂಗಾತಿ ಅವರ ಬೈಸಿಕಲ್, ಯೌವನದಲ್ಲಿ ಅದರ ಮೇಲೆ ಹತ್ತಿ ಪ್ರೆಸ್ಸಿಗೆ ಬರುತ್ತಿದ್ದರು. ಮುಪ್ಪಿನಲ್ಲಿ ಕೈಯಲ್ಲಿ ಹಿಡಿದುಕೊಂಡು ಗ್ರಂಥಗಳ ಕೈಚೀಲ ಹ್ಯಾಂಡಲ್‌ಗೆ ಹಾಕಿ, ಊರುಗೋಲಿನಂತೆ ನಡೆದುಬರುತ್ತಿದ್ದರು. ಯಾರೋ ಪರಿಚಿತರೊಬ್ಬರು ಕೇಳಿದರಂತೆ– 'ಶರಣರೆ, ಸೈಕಲ್ ಹಳೆಯದಾಗಿದೆ, ಹೊಸದನ್ನು ಖರೀದಿಸಿರಿ' ಎಂದರು.

ಆಗ ಹಳಕಟ್ಟಿ ಶರಣರು ಉತ್ತರಿಸಿದರು– 'ನೋಡ್ರೆಪ್ಪಾ, ಅವ್ವ ಮುದುಕಿ ಆಗ್ಯಾಳಂತ, ಅವಳನ್ನ ಮಾರಿ ಹೊಸ ಅವ್ವನನ್ನು ತರಲಿಕ್ಕಾಗತೈತೇನ್ರೆಪಾ' ಎಂದರಂತೆ, ತಮ್ಮ ಕಾಯಕದ ಸಂಗಾತಿಯ ಬಗ್ಗೆ ಅಷ್ಟೊಂದು ಪ್ರೀತಿ, ಅಭಿಮಾನವಿತ್ತು.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗೌ ॥ ಡಾಕ್ಟರೇಟ್ ಪದವಿ ಪ್ರಸಂಗ :

ಹಳಕಟ್ಟಿ ಶರಣರ ಸೇವೆಯನ್ನು ಮನಗಂಡು ೧೯೫೬ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಡಿ.ಲಿಟ್ ಪದವಿ ನೀಡಿ ಗೌರವಿಸಿತು. ಆಗ ನಡೆದ ಭೋಜನಕೂಟದ ವೇಳೆಯಲ್ಲಿ ಶ್ರೀ ಎಸ್. ಎಸ್. ಒಡೆಯರ್ ಅವರನ್ನು ಕರೆದು ಚೌಡದಾನಪುರದ ಶಾಸನ, ಅಂಬಿಗರ ಚೌಡಯ್ಯನ ವಚನಗಳ ಬಗ್ಗೆ ವಿಚಾರ–ವಿನಿಮಯಕ್ಕೆ ಇಳಿದರಂತೆ ! ರಾಜ್ಯಪಾಲರು ಉನ್ನತ ಅಧಿಕಾರಿಗಳು ಇವರ ಪರಿಚಯಕ್ಕೆ ಕಾತರಿಸುತ್ತಿದ್ದರೆ, ಇವರಿಗೆ ಮಾತ್ರ ಶರಣ ಸಾಹಿತ್ಯದ ಚಿಂತೆ!

ಸನ್ಮಾನದ ಶಾಲುಗಳ – ಪ್ರಸಂಗ :

ಹಳಕಟ್ಟಿ ಶರಣರ ಮುಪ್ಪಿನ ಕಾಲಕ್ಕೆ ಅವರ ಸಾಧನೆಯನ್ನು ಅಲ್ಪ ಸ್ವಲ್ಪ ಅರಿತು ಕೆಲವರಾದರೂ ತಮ್ಮೂರಿಗೆ ಕರೆಯಿಸಿಕೊಂಡು, ಹೊಗಳಿ ಮಾನಪತ್ರ ಅರ್ಪಿಸಿ, ಶಾಲು ಹೊದಿಸಿ ಕಳಿಸುತ್ತಿದ್ದರು. ಒಂದೂರಿನ ಸನ್ಮಾನ ಸಮಾರಂಭಕ್ಕೆ ಹೋದಾಗ ಅಲ್ಲಲ್ಲಿ ಹರಿದ ಅಂಗಿ, ಕೋಟು, ರುಮಾಲು, ಧೋತರ ಧರಿಸಿ ಹೋಗಿದ್ದರು. ಆಗ ಒಬ್ಬ ಮಹಾಶಯರು 'ಸಾಹೇಬ್ರ, ಇವತ್ತಾದರೂ ಹೊಸ ಕೋಟು, ರುಮಾಲು ಧರಿಸಿ ಬರಬಾದೇನ್ರಿ ? ಎಂದು ಕೇಳಿದರಂತೆ, ಆಗ ಹಳಕಟ್ಟಿಯವರು–ನೋಡ್ರೆಪ್ಪಾ, ಸನ್ಮಾನ ಮಾಡುವವರು ಶಾಲು ಅಷ್ಟೇ ಕೊಡ್ತಾರೆಪ್ಪಾ, ಎಂದು ಉತ್ತರಿಸಿದರಂತೆ !

ಸಮಾಜ ತಪ್ಪಿದರೆ, ಸಮಾಜದ ಗುರುಗಳೂ ತಪ್ಪು ಮಾಡಬಹುದೇ ?

ಒಂದು ವರ್ಷ ವಿಜಾಪುರ ಜಿಲ್ಲೆಯಲ್ಲಿ ಬರಗಾಲ ಹೆಚ್ಚಾಯ್ತು. ದವಸ ಧಾನ್ಯಗಳ ಅಭಾವ. ಮೊದಲೇ ಆರ್ಥಿಕ ಮುಗ್ಗಟ್ಟಿನಲ್ಲಿದ್ದ ಹಳಕಟ್ಟಿ ಶರಣರಿಗೆ ಆರ್ಥಿಕ ಸ್ಥಿತಿ ತೀರ ಹದಗೆಟ್ಟಿತು. ಈ ಸುದ್ದಿ **ಬಬಲೇಶ್ವರದ ಶ್ರೀ ಶಾಂತವೀರ ಮಹಾಸ್ವಾಮಿಗಳವರಿಗೆ** ಮುಟ್ಟಿತು. ಕೂಡಲೇ ಆ ಪೂಜ್ಯರು ತಮ್ಮ ಮಠದ ಗಾಡಿಕೊಟ್ಟು ಅದರಲ್ಲಿ ೫ ಚೀಲ

ಜೋಳ, ೧ ಚೀಲ ಗೋದಿ, ೩೫೦ ರೂಪಾಯಿ ಕೊಟ್ಟು ಕಳಿಸಿದರು. 'ಒಳ್ಳೆಯ ಸಮಾಜ ಸೇವಕನ ಹಾಗೂ ಸಾಹಿತ್ಯ ಸಂಶೋಧಕನ ಜೀವನ ಯಾವಾಗಲೂ ಕರುಣೆಯ ಕಥೆಯೇ. ಸಮಾಜ ತಪ್ಪು ಮಾಡಬಹುದು, ಸಮಾಜದ ಗುರುಗಳಾದ ನಾವು ತಪ್ಪು ಮಾಡಬಹುದೇ?' ಎಂದು ಕಳಕಳಿಯಿಂದ ಶರಣರಿಗೆ ಸಹಾಯಸಲ್ಲಿಸಿದರು. ಪೂಜ್ಯ ಬಬಲೇಶ್ವರದ ಶಾಂತವೀರ ಪಟ್ಟದ್ದೇವರಿಗೆ 'ಬಸವ' ಮಂತ್ರ ಉಸಿರಾಗಿತ್ತು. ಬಸವಭಕ್ತಿ ಸಂಪನ್ನರಾಗಿದ್ದರು. ಅಂತೆಯೇ ಶರಣರ ಕಾರ್ಯ ಮಾಡುವವರಿಗೆ ಸಹಾಯ ಮಾಡಿದರು.

ಪುರಾಣ ಕಥೆಗಳಿಗಿಂತ ಶರಣರ ಜೀವನ ಕಥೆ ಹೇಳಿರಿ :

ಒಮ್ಮೆ ತೆಲಸಂಗದ ಬಸವಲಿಂಗ ಪಟ್ಟದ್ದೇವರು ಕೆಲವು ಜನ ಸ್ವಾಮಿಗಳೊಂದಿಗೆ ಹಳಕಟ್ಟಿ ಶರಣರ ಭೆಟ್ಟಿಗೆ ಬಂದರು. ತಾವೆಲ್ಲ ಪುರಾಣ-ಕೀರ್ತನ ಹೇಳುವವರೆಂದು ಪರಿಚಯ ಮಾಡಿಕೊಂಡರು. ಆಗ ಹಳಕಟ್ಟಿ ಶರಣರು ಹೇಳಿದರು-'ನೋಡ್ರೆಪಾ, ನೀವೆಲ್ಲ ಹಳೆ ಪುರಾಣಗಳ ಕಟ್ಟು ಕಥೆ ನಿಲ್ಲಿಸಬೇಕು. ಪ್ರವಚನ-ಕೀರ್ತನೆಗಳಲ್ಲಿ ಬಸವಾದಿ ಶರಣರ ಕಥೆಗಳನ್ನು ಹೇಳಿರಿ, ವಚನಗಳ ಸಂದೇಶ ತಿಳಿಸಿರಿ' ಎಂದು ವಿನಂತಿಸಿದರು. (ಈ ಪ್ರಸಂಗವನ್ನು ನಮ್ಮ ಶರಣಸಿದ್ಧಾಂತ ವಿದ್ಯಾಪೀಠದ ಶಿಬಿರಗಳಿಗೆ ಬಂದಾಗ್ಗೆ ತೆಲಸಂಗ ಶ್ರೀಗಳು ನನಗೆ ಹೇಳಿದ್ದು)

ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದದ್ದು :

ಶರಣ ಹಳಕಟ್ಟಿಯವರ ವಚನವಾಙ್ಮಯ ಸಾಧನೆಯನ್ನು ಮನಗಂಡ ವೀರಶೈವ ಮುಖಂಡರು, ಧಾರವಾಡದಲ್ಲಿ ೧೮-೦೫-೧೯೩೩ರಂದು ಜರುಗಿದ ೧೧ನೆಯ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರನ್ನಾಗಿ ಗೌರವಿಸಿತು. ಆಗ ಶ್ರೀಯುತರು 'ಮಹಾಸಭೆಯ ಪ್ರಯೋಜನಗಳು, ಅದರ ಭಾವೀ ಕಾರ್ಯಪದ್ಧತಿ, ಶಿಕ್ಷಣ ಸುಧಾರಣೆ, ಪ್ರಾಥಮಿಕ, ಮಾಧ್ಯಮಿಕ, ಉಚ್ಚಶಿಕ್ಷಣ, ಔದ್ಯೋಗಿಕ ಶಿಕ್ಷಣ, ಗೃಹ ಕೈಗಾರಿಕೆಗಳು, ಔದ್ಯೋಗಿಕ ವಿದ್ಯಾರ್ಥಿವೇತನಗಳು, ಕರ್ನಾಟಕ ಏಕೀಕರಣ, ವೀರಶೈವ ವಾಙ್ಮಯ ಗ್ರಂಥಾಲಗಳ ಸ್ಥಾಪನೆ, ಗ್ರಾಮಸುಧಾರಣೆಗಳು, ಸ್ತ್ರೀ ಶಿಕ್ಷಣ, ಧಾರ್ಮಿಕ ಸುಧಾರಣೆ, ಗುರು-ವಿರಕ್ತವರ್ಗಕ್ಕೆ ಬುದ್ಧಿವಾದ, ಸಹಕಾರ ಯೋಜನೆ, ಸೈನ್ಯದಲ್ಲಿ ವೀರಶೈವ ರೆಜಿಮೆಂಟ್ ಮಾಡಲು ಸೂಚನೆ, ಇತ್ಯಾದಿ ವಿಷಯಗಳ ಬಗ್ಗೆ ಸುದೀರ್ಘ ಭಾಷಣ ಮಾಡಿ ಸಮಾಜ ಜಾಗೃತಿ ಮಾಡಿದರು.

ವಚನಗುಮ್ಮಟ ನೋಡಬೇಕು :

'ಕನ್ನಡದ ಕಣ್ವ' ರೆಂದೇ ಖ್ಯಾತರಾಗಿದ್ದ ಕವಿ ಬಿ.ಎಂ.ಶ್ರೀ ಅವರು ಒಮ್ಮೆ ವಿಜಾಪುರಕ್ಕೆ ಮಹಾನವಮಿ-ದಸರಾ ಕಾಲಕ್ಕೆ 'ನಾಡಹಬ್ಬ'ದ ಉತ್ಸವದ ಅತಿಥಿಯಾಗಿ ಬಂದಾಗ, ಕನ್ನಡ ಅಭಿಮಾನಿಗಳು ಅವರನ್ನು 'ಗೋಲಗುಮ್ಮಟ' ತೋರಿಸುವದಾಗಿ ಹೇಳಿದರು. ಆಗ ಬಿ.ಎಂ.ಶ್ರೀಕಂಠಯ್ಯನವರು- 'ಮೊದಲು ನನ್ನನ್ನು 'ವಚನ ಗುಮ್ಮಟ'

ಕ್ಕೆ ಕರೆದೊಯ್ಯಿರಿ ಎಂದರು. ಎಲ್ಲರಿಗೂ ಆಶ್ಚರ್ಯ ! ವಿಸ್ಮಿತರಾದರು. ಆಗ 'ಶ್ರೀ' ಹೇಳಿದರು– 'ನಿಮ್ಮ ನಗರದಲ್ಲಿ ಅದ್ಭುತವಾದ ವಚನಗುಮ್ಮಟವೊಂದಿದೆ. ಅದರಲ್ಲಿ ಹಳಕಟ್ಟಿ ಶರಣರಿದ್ದಾರೆ. ಅವರ ದರ್ಶನ ಮೊದಲು' ಎಂದರು. ಅದೇ ಪ್ರಕಾರ ಉಪಲಿಬುರಜಿನ ಹತ್ತಿರದ ಚಿಕ್ಕದಾದ ಬಾಡಿಗೆ ಮನೆಯಲ್ಲಿದ್ದ ಹಳಕಟ್ಟಿಯವರಲ್ಲಿಗೆ ಹೋಗಿ ದರ್ಶನ ಪಡೆದರು. ಇಬ್ಬರೂ ಅಪ್ಪಿಕೊಂಡರು. ವಚನಗುಮ್ಮಟ–ಕಾವ್ಯ ಗುಮ್ಮಟ ಒಂದಾದವು. ಹಳಕಟ್ಟಿಯವರ ಮಹತ್ವ ಬಿ. ಎಂ. ಶ್ರೀ ಅವರಿಂದ ಕಾರ್ಯಕರ್ತರ ಅರಿವಿಗೆ ಬಂದಿತು.

೭೭೦ ಅಮರಗಣಾಧೀಶ್ವರರು :

೧೯೫೪ರಲ್ಲಿ ಬಂಥನಾಳದ ಶ್ರೀ ಸಂಗನಬಸವ ಶಿವಯೋಗಿಗಳವರು ೭೭೦ ಅಮರಗಣಂಗಳ ಮಂಟಪ ಪೂಜಾ ಮಹೋತ್ಸವ ಜರುಗಿಸಲು ನಿರ್ಧರಿಸಿದಾಗ, ಹಳಕಟ್ಟಿ ಶರಣರು '೭೭೦ ಅಮರಗಣಾಧೀಶ್ವರರು' ಎಂಬ ಚಾರಿತ್ರಿಕ ಗ್ರಂಥ ರಚಿಸಿ, ಪ್ರಕಟಿಸಿ, ಆಯಾ ಶರಣರ ಹೆಸರು, ಚರಿತ್ರೆ ಎಲ್ಲರಿಗೂ ತಿಳಿಯುವಂತೆ ಮಾಡಿದರು. ಈ ಮಹೋತ್ಸವವು ಅದ್ದೂರಿಯಾಗಿ ಜರುಗಿ ೧, ೦೨, ೨೭೫ರೂಪಾಯಿಗಳು ಉಳಿದದ್ದನ್ನು ಶ್ರೀಗಳವರು ಬಿ.ಎಲ್.ಡಿ.ಇ. ಸಂಸ್ಥೆಯ ಕಾಲೇಜುಗಳ ವಿಸ್ತರಣಾ ಕಾರ್ಯಕ್ಕೆ ಸಮರ್ಪಿಸಿದರು.

ಬಿರುದು–ಗೌರವ–ಪ್ರಶಸ್ತಿಗಳು :

ಹಳಕಟ್ಟಿ ಶರಣರ ಸಾಮಾಜಿಕ, ಶೈಕ್ಷಣಿಕ ಆರ್ಥಿಕ, ಸಹಕಾರ, ಸಾಹಿತ್ಯಿಕ ಮುಂತಾದ ಸೇವೆ ಕಂಡು–ಬ್ರಿಟಿಷ್ ಸರ್ಕಾರವು 'ರಾವಸಾಹೇಬ', 'ರಾವ ಬಹಾದ್ದೂರ' ಎಂದು ಪದವಿ ನೀಡಿ ಗೌರವಿಸಿದರೆ, ನಾಡ ಜನತೆ, ವಿದ್ವಾಂಸರು, ಬಸವ ಭಕ್ತರು– 'ನೂತನ ಶೃಣ, ೭೭೧ನೆಯ ಅಮರಗಣಾಧೀಶ್ವರ, ಕರ್ನಾಟಕದ ಮ್ಯಾಕ್ಸ್ ಮುಲ್ಲರ್, ಡಾಕ್ಟರ್ ಆಫ್ ಲಿಟರೇಚರ್, ವಚನ ಗುಮ್ಮಟ, ಅಂಜನ ಸಿದ್ಧ, ವಚನಪಿತಾಮಹ, ವಚನ ಸಂಶೋಧನ ಪಿತಾಮಹ' ಎಂದು ಮುಂತಾಗಿ ಹೃದಯ ತುಂಬಿ ನುಡಿದು ಗೌರವಿಸಿದ್ದಾರೆ.

ಮಹಾಲಿಂಗದೊಳು ಬಯಲಾದ ಶರಣ :

ಜಗಜ್ಯೋತಿ ಬಸವಣ್ಣನವರ ವಚನಸಂದೇಶದಂತೆ– 'ಭಕ್ತಿಯೆಂಬ ಪೃಥ್ವಿಯ ಮೇಲೆ......ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ' ಎಂಬ ಹಾಗೆಯೇ ತಮ್ಮ ೮೪ನೆಯ ವಯಸ್ಸಿನಲ್ಲಿ 'ಬಸವಾ ಬಸವಾ' ಎನ್ನುತ್ತಲೇ **೧೯೬೪ ಜೂನ್ ೨೯** ರಂದು ಮಹಾಲಿಂಗದೊಳು ಬಯಲಾದರು. ಶರಣರ ಅಂತ್ಯಸಂಸ್ಕಾರಕ್ಕೂ ಹಣವಿಲ್ಲದ ಪರಿಸ್ಥಿತಿ. ಈ ಸುದ್ದಿ ತಿಳಿದ ಭಕ್ತರು ಅಭಿಮಾನಿಗಳು ಪಟ್ಟಿ ಹಾಕಿ. ೭೭೦ ಲಿಂಗಸ್ಥಾಪನೆಯ ಎದುರಿಗೆ 'ಕ್ರಿಯಾಸಮಾದಿ' ನೆರವೇರಸಿದರು. ೨೦ನೆಯ ಶತಮಾನದಲ್ಲಿ ಶರಣರನ್ನು ವಚನ ರೂಪದಲ್ಲಿ

ಬದುಕಿಸಿಕೊಟ್ಟು ೭೭೧ನೆಯ ಶರಣರಾಗಿ ಅಮರಣಂಗಳಲ್ಲೊಬ್ಬರಾಗಿದ್ದಾರೆ. ಹಳಕಟ್ಟಿ ಶರಣ. (ಈ ಸ್ಥಳ ಹಳಕಟ್ಟಿ ನಗರವಾಗಬೇಕು, ಅಲ್ಲಿ ವಚನಗುಮ್ಮಟ, ವಚನ ಸಂಶೋಧನಾ ಕೇಂದ್ರ, ವಚನ ವಾಙ್ಮಯ ಮ್ಯುಜಿಯಂ, ಹಳಕಟ್ಟಿ ಶರಣರ ಜೀವನ-ಸಾಧನೆ ಪ್ರತಿಬಿಂಬಿಸಲ್ಪಡಬೇಕಿದೆ) ಇದನ್ನು ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ. ಬಿ. ಪಾಟೀಲರು ಹಾಗೂ ಆಡಳಿತ ಮಂಡಳಿಯವರು ಮಾಡಿದ್ದು ಸಾರ್ಥಕವಾಗಿದೆ. ಅವರಿಗೆ ಅನಂತ ಧನ್ಯವಾದಗಳು.

ಶರಣ ಫ. ಗು. ಹಳಕಟ್ಟಿಯವರ ಅಂತಿಮ ಸಂದೇಶ :

'ವಚನ ಸಾಹಿತ್ಯ ನಿಮ್ಮ ಮನೆ-ಮನಗಳನ್ನು ಬೆಳಗಲಿ, ವಚನಕಾರರ ಭಾವಚಿತ್ರ ಮತ್ತು ಅನುಭಾವ ವಾಣಿಗಳಿಂದ ಮನೆಮನೆಗಳೂ ತೊಳಗಿ ಬೆಳಗಲಿ, ಸಭೆ-ಸಮಾರಂಭಗಳ ಆರಂಭ, ಮುಕ್ತಾಯಗಳಲ್ಲಿ ವಚನಗಳ ಪ್ರಾರ್ಥನೆ ಕೇಳಿಬರಲಿ. ಸಂಗೀತಕ್ಕೆ ಸುಂದರವಾಗಿ ಅಳವಡಿಸಿ ವಚನಗಾಯನ ಗೋಷ್ಠಿಗಳನ್ನು ನಡೆಸಿ, ಎಳೆಯ ಮಕ್ಕಳ ಮನಕ್ಕೆ ಸಂಸ್ಕಾರ ನೀಡುವ ವಚನಗಳ ಕಂಠಪಾಠ ಸ್ಪರ್ಧೆಗಳನ್ನೇರ್ಪಡಿಸಿರಿ.

ವಚನ ಸಾಹಿತ್ಯದಲ್ಲಿ ಧರ್ಮಾಂಧತೆಯಿಲ್ಲ, ಇದು ವಿಶ್ವಧರ್ಮವಾಗಿದೆ. ಶರಣರು ಜಾತಿಯನ್ನು ಮನ್ನಿಸುವದಿಲ್ಲ. ಪ್ರತಿಯೊಬ್ಬರೂ ಕಠಿಣ ಪರಿಶ್ರಮ ಮಾಡಬೇಕು. ಭಿಕ್ಷೆ ಬೇಡಬಾರದು, ಶರಣರ ದೃಷ್ಟಿಯಲ್ಲಿ ಕಾಯಕವೇ ಪೂಜೆ'.

೧೭-೦೧-೧೯೬೦ರಂದು ಧಾರವಾಡದಲ್ಲಿ ಡಾ॥ ಡಿ.ಸಿ.ಪಾವಟೆಯವರ ಸಮ್ಮುಖದಲ್ಲಿ ಸತ್ಕರಿಸಿ ಹಮ್ಮಿಣಿ ಅರ್ಪಿಸಿದಾಗ ನೀಡಿದ ಸಂದೇಶ-

'ನಮ್ಮ ಉಳಿದ ಸಂಪತ್ತನ್ನು ಸಂರಕ್ಷಿಸುವಂತೆ ಶಿವಶರಣರ ಪುಸ್ತಕ ಪ್ರಕಟನೆಗಳನ್ನು ಕೊಂಡು ಶೇಖರಿಸಿ ರಕ್ಷಿಸಿರಿ. ಅವು ನಿಮ್ಮ ನಿತ್ಯ ಅಭ್ಯಾಸಕ್ಕೆ ಕಾರಣವಾಗಲಿ, ಓದುವುದನ್ನು ರೂಢಿಮಾಡಿಕೊಳ್ಳಿರಿ. ಶಿವಶರಣರ ಚಿತ್ರಗಳಿಂದ ನಿಮ್ಮ ಮನೆಯನ್ನು ಮನವನ್ನು ಅಲಂಕಾರಗೊಳಿಸಿರಿ. ವಚನ ಸಂಗೀತವು ನಿಮ್ಮ ಕಿವಿಗೆ ಇನಿದಾದ ಆಭರಣವಾಗಲಿ. ವಿಶ್ವದ ವಿವಿಧ ಭಾಷೆಗಳಲ್ಲಿ ವಚನ ವಾಙ್ಮಯವು ಪರಿವರ್ತನೆಗೊಳ್ಳಲಿ, ವಚನ ಗ್ರಂಥಗಳನ್ನು ಪ್ರಕಟಿಸುವವರಿಗೆ ಪ್ರೋತ್ಸಾಹಿಸಿರಿ. ವಚನಗಳು ದಿನಂಪ್ರತಿ ವೃತ್ತ ಪತ್ರಿಕೆಗಳ ಮೂಲಕ ಕಣ್ಣಿಗೆ ಹೊಸ ಬೆಳಕನ್ನೀಯಲಿ.

ಸತತೋತ್ಸಾಹಿಗಳಾದ ತರುಣರು ವಚನ ಸಾಹಿತ್ಯಸೇವೆ ಮಾಡಲಿ. ಹಿಂದಿನ ಕಾಲದ ಶಿವಶರಣೆಯರಂತೆ ಇಂದಿನ ಮಹಿಳೆಯರು ಮುನ್ನಡೆಯಲಿ, ಸಮಾಜದ ಶ್ರೀಮಂತರೂ, ಹಿತಚಿಂತಕರೂ, ಮಹಾಸ್ವಾಮಿಗಳೂ ಶರಣ ಸಂಸ್ಕೃತಿಯನ್ನು ಕಾಪಾಡಲು ಆಧಾರಸ್ವರೂಪರಾಗಲಿ, **ನನ್ನನ್ನು ಹೊಗಳುವದಕ್ಕಿಂತ ಶಿವಶರಣರ ಕಾರ್ಯಕ್ಕೆ ನೆರವಾದರೆ ನನಗೆ ಹೆಚ್ಚಿನ ಸಂತೋಷವಾಗುವುದು'** (ಶ್ರೀ ಎಸ್. ಬಿ. ಹಳಕಟ್ಟಿ ಅವರ ಲೇಖನ-'ಇಳೆಗಿಳಿದ ಶರಣ' ಪು.-೫೧)

ಈ ಸಂದೇಶವನ್ನು ಅರಿತು ಪ್ರತಿಯೊಬ್ಬ ಲಿಂಗಾಯತರು ಬಸವಾದಿ ಶರಣರ ವಿಶ್ವಮಾನ್ಯ ಧರ್ಮ-ಸಂಸ್ಕೃತಿಯ ಜೀವಂತ ಶರಣರಾಗಬೇಕಿದೆ. ತನ್ಮೂಲಕ ಪ್ರಪಂಚಕ್ಕೆ ಮಾರ್ಗದರ್ಶಕರಾಗಬೇಕಿದೆ.

ವಚನ ಸಂಶೋಧನ ಪಿತಾಮಹ ಶರಣ ಫ. ಗು. ಹಳಕಟ್ಟಿ ಅವರ ಕುರಿತು.

ಪೂಜ್ಯರ, ವಿದ್ವಾಂಸರ ಅಭಿಪ್ರಾಯಗಳು :

'ಡಾ॥ ಫ. ಗು. ಹಳಕಟ್ಟಿಯವರು ಕನ್ನಡ ಸಾಹಿತ್ಯಕ್ಕೆ ಹಾಗೂ ಕನ್ನಡ ಕುಲಕೋಟಿಗೆ ಸಲ್ಲಿಸಿದ ಸೇವೆಯು ಅಪಾರವಾದುದು, ಅದ್ವಿತೀಯವಾದುದು, ಅಂದಿನ ಆ ದಿನಗಳಲ್ಲಿ ಅವರು ಮನಸ್ಸು ಮಾಡಿದ್ದರೆ ಸಿರಿಯ ಸುಪ್ಪತ್ತಿಗೆಯಲ್ಲಿ ತಮ್ಮ ಜೀವನ ಕಳೆಯಬಹುದಿತ್ತು. 'ಮನೆ ನೋಡಾ ಬಡವರು, ಮನ ನೋಡಾ ಘನ' ಎಂಬ ಭಗವಾನ್ ಬಸವೇಶ್ವರರ ನುಡಿಗಡಣಕ್ಕೆ ನಿದರ್ಶನವಾದ ಜೀವನ ಡಾ॥ ಹಳಕಟ್ಟಿಯವರದು. ಅವರ ಉತ್ಸವವು ಶ್ರೀಮಾನ್ ಹಳಕಟ್ಟಿಯವರೆಂಬ ವ್ಯಕ್ತಿಯದಾಗಿರದೆ ಇಡೀ ವಚನ ವಾಙ್ಮಯದ ವರ್ಧಂತ್ಯುತ್ಸವವಾಗಿರುತ್ತದೆ'.

– ಶ್ರೀ. ಮ. ನಿ. ಪ್ರ. ಸಂಗನಬಸವ ಶಿವಯೋಗಿಗಳು, ಬಂಥನಾಳ.

'ಶರಣ ಫ. ಗು. ಹಳಕಟ್ಟಿಯವರ ಬಾಳಿನ ಜ್ಯೋತಿಯು 'ಬಸವಣ್ಣ'. ಅವರು ತೋರಿದ ದಾರಿಯಲ್ಲಿ ನಡೆದರು. ಅವರ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟರು. ಅವರ ಮಾತು ಅವರಿಗೆ ವೇದವಾಯಿತು. ಅವರ ವಚನಗಳು ಅವರಿಗೆ ಮಂತ್ರವಾದವು. ಹೆಚ್ಚೇನು? ಅವರ ಮಹಾಜ್ಯೋತಿಯನ್ನೇ ನಂಬಿ ಅದರಲ್ಲಿಯೆ ಬೆರೆದು ಮಹಾಜ್ಯೋತಿಯಾದರು. ಬಾಳಿರುವವರೆಗೆ ತೇಜಃಪುಂಜರಾಗಿ ಹೊಳೆದರು. ಹಾಗೆ ಹೊಳೆದ ಜ್ಯೋತಿ ಮರೆಯಾದರೂ ಅವರ ಅವ್ಯಕ್ತಬೆಳಗು ನಾಡಜನರ ಹೃದಯದಲ್ಲೆಲ್ಲ ನೆಲೆಸಿದೆ! ಅದಕ್ಕೆ ನಾಡೆಲ್ಲ ಋಣಿಯಾಗಿದೆ !!'

– ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ವಿಜಾಪುರ.

'ಕಲ್ಯಾಣ ನಾಡಿನ ನಿಜಾಂ ಪ್ರಾಂತದ ಬೀದರ ಜಿಲ್ಲೆಯ ಭಾಲ್ಕಿ ಹಿರೇಮಠ ಸಂಸ್ಥಾನದ ಉತ್ತಾರಾಧಿಕಾರಿಯಾಗಿ ಶಿವಯೋಗ ಮಂದಿರಕ್ಕೆ ಸಾಧಕನಾಗಿ ಬಂದು, ಮರಳಿ ಭಾಲ್ಕಿಗೆ ಹೋಗುವಾಗ ವಿಜಾಪುರಕ್ಕೆ ಪೂಜ್ಯ ಹಳಕಟ್ಟಿ ಶರಣರ ದರ್ಶನಕ್ಕೆ ಹೋದೆ, ಆ ಶರಣರ ದರ್ಶನ-ಆಶೀರ್ವಾದ ಲಭಿಸಿತು. ಸದುವಿನಯದ ಸಾಕಾರಮೂರ್ತಿ ಅವರು. ಅಪ್ಪ ಜಗಜ್ಯೋತಿ ಬಸವೇಶ್ವರನ ವಚನಗಳು, ವಚನಶಾಸ್ತ್ರಸಾರ ಭಾಗ-೧ ಮುಂತಾದ ಧರ್ಮಗ್ರಂಥಗಳನ್ನು ಉಡಿಯಲ್ಲಿ ಹಾಕಿದರು. ಇದು ಸ್ವಾಮಿಗಳ ನಿಜವಾದ ಸಂಪತ್ತು ಎಂದು ಹೇಳಿದರು. ಅವರ ಉಪದೇಶದಂತೆ ಶರಣರ ನುಡಿ-ನಡೆ ಆಚರಿಸಿದೆ. ಶರಣರ ಕಿಂಕರ ನಾನು, ಸೇವಕ ನಾನು.'

– ಶ್ರೀ. ಮ. ಘ. ಚ. ಚೆನ್ನಬಸವಪಟ್ಟದ್ದೇವರು
ಹಿರೇಮಠ ಸಂಸ್ಥಾನ, ಭಾಲ್ಕಿ

'ಶರಣ ಫ. ಗು. ಹಳಕಟ್ಟಿಯವರ ಜೀವನವು ಓರ್ವ ಆದರ್ಶ ಸಾಧಕನ ಉಗ್ರ ತಪಸ್ಸಾಧನೆಯಂತಿರುವದು. ನಿರಾಡಂಬರದ ವೃತ್ತಿ, ಸತತಕಾರ್ಯಾಸಕ್ತಿ, ಶುದ್ಧ ಸತ್ವಸಂಪನ್ನ ತ್ಯಾಗಬುದ್ಧಿ ಅಂತಃಕರಣಶುದ್ಧಿ ಮುಂತಾದ ಆದರ್ಶಗುಣಗಳು ಮನೆಮಾಡಿಕೊಂಡಿದ್ದವು. ಶರಣರ ವಚನ, ಶರಣರ ಕಥೆಗಳನ್ನು ಕೀರ್ತನ-ಪ್ರವಚನ ಮಾಡಲು ಹೇಳಿದರು.

– ಶ್ರೀ. ಷ. ಬ್ರ. ಬಸವಲಿಂಗಪಟ್ಟಾಧ್ಯಕ್ಷರು ಹಿರೇಮಠ ತೆಲಸಂಗ

'ಹಳಕಟ್ಟಿ ಶರಣರು ನಮ್ಮ ಗುರುಗಳಿಗೆ-ನಮಗೆ ಶಿವಾನುಭವ, ಶರಣರ ವಚನಶಾಸ್ತ್ರ ದಯಪಾಲಿಸಿ, ಶಿವಶರಣರ ಸಂದೇಶ ಪ್ರಸಾರ ಮಾಡಲು ಹೇಳಿದ್ದರು. ಅವರು ಮಾಡಿದ ಸಾಧನೆ ಅಪಾರವಾದುದು. ಅವರ ನೆನಹು ನಮಗೆಲ್ಲ ಲಿಂಗಯ್ಯನ ದರ್ಶನ'.

– ಶ್ರೀ. ಮ. ನಿ. ಪ್ರ. ಚೆನ್ನಬಸವ ಶಿವಯೋಗಿಗಳು, ವಿರಕ್ತಮಠ ಪಾಂಡೋಮಟ್ಟಿ ಶಿವಮೊಗ್ಗ

'ವೀರಶೈವ ಸಾಹಿತ್ಯದ, ಅದರಲ್ಲಿಯೂ ಶರಣಸಾಹಿತ್ಯದ ಉದ್ಧಾರ ಪರಂಪರೆಯಲ್ಲಿಯಂತೂ ಫಕೀರಪ್ಪನವರ ಹೆಸರು ಪ್ರಣವ ಪಂಚಾಕ್ಷರಿ, ಜನತೆಯ ವಿಸ್ಮೃತಿಯಲ್ಲಿ ಮರೆಯಾಗಿದ್ದ ಒಂದು ಸಾಹಿತ್ಯ ಪ್ರಕಾರವನ್ನೇ ಸಂಶೋಧಿಸಿದ ಕೂರ್ಮಸಾಹಸದಿಂದಾಗಿ ಶ್ರೀಯುತರು ವೀರಶೈವ ಪುಣ್ಯ ಪುರುಷರು ಹೌದು, ಕನ್ನಡದ ಪುಣ್ಯ ಪುರುಷರು ಹೌದು'.

– ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಡಂಬಳ-ಗದಗ.

'ಶರಣ ಹಳಕಟ್ಟಿಯವರ ದರ್ಶನ ನಮಗೆ ಕಲ್ಯಾಣದಪ್ಪಗಳ ದರ್ಶನ ವಾದಂತೆನಿಸಿತು. ಆ ಪೂಜ್ಯರು ನೀಡಿದ ವಚನಶಾಸ್ತ್ರ, ಶಿವಾನುಭವ ನಮ್ಮ ಬಾಳಿಗೆ ಬೆಳಕಾದವು. ಬಸವ ಭಕ್ತಿ ಬಸವತತ್ವನಿಷ್ಠೆ ನಮ್ಮಲ್ಲಿ ಆಳವಡಲು ಕಾರಣಕರ್ತರು ಶರಣರು. ಬಸವಾದಿ ಶರಣರ ಹೆಸರಿನೊಂದಿಗೆ ಹಳಕಟ್ಟಿ ಶರಣರೂ ಅವಿನಾಭಾವವಾಗಿ ಅಜರಾಮವಾಗಿದ್ದಾರೆ.

– ಶ್ರೀ ಮ. ನಿ. ಪ್ರ. ಮಹಾಂತ ಶಿವಯೋಗಿಗಳು ಚಿತ್ತರಗಿ ಸಂಸ್ಥಾನಮಠ, ಇಳಕಲ್ಲ.

ಬಸವಾದಿ ಶರಣರ ವೈಚಾರಿಕ ಕ್ರಾಂತಿಯ ಕಿಡಿಗಳು ಅಕಾಲ ಗರ್ಭದ ಒಡಲೊಳಗೆ ನಿಷ್ಕ್ರಿಯೆಗೊಂಡು ನಿರಾತಂಕವಾಗಿ ಪವಡಿಸಿದ್ದವು. ಗಂಧ-ಪುಷ್ಪಗಳ ಹೊರೆಹೊತ್ತುಗದ್ದುಗೆಗಳ ಮೇಲೆ ಪೂಜೆಗೊಳ್ಳುತ್ತಿದ್ದ ಆ ವಚನ ವಾಙ್ಮಯದ ಕಿಡಿಗಳನ್ನು ಕಂಡು ಹಿಡಿದು ಅವುಗಳ ಬೆಳಕನ್ನು ಕಾಣದೇ ತೊಳಲುತ್ತಿರುವ ಪಥಿಕರಿಗೆ ದಾರಿತೋರಿಸಬೇಕೆಂದು ಕಳೆದ ಶತಮಾನದಲ್ಲಿ ಇಳಿಗಿಳಿದು ಬಂದನೊಬ್ಬ ಶಿವಶರಣ ಅವರೇ ಡಾ॥ ಫ. ಗು. ಹಳಕಟ್ಟಿಯವರು'.

– ಶ್ರೀ ಎಸ್. ಬಿ. ಹಳಕಟ್ಟಿ ಗೌ॥ ಸಂಪಾದಕರು ಶರಣ ಪತ್ರಿಕೆ ಸೊಲ್ಲಾಪೂರ

'ನನ್ನ ಆಧ್ಯಾತ್ಮಬಾಳಿನ ಗುರು, ಜಗದ್ಗುರು, ಜಂಗಮ ಶರಣ ಫ. ಗು. ಹಳಕಟ್ಟಿಯವರು, ನಾನು ಹಳಕಟ್ಟಿ ಶರಣರ ಮಾನಸ ಪುತ್ರ, ಅವರ ಶಿವಾನುಭವ

ಸಂಘ' ದ ಸಂಚಾಲಕ, ಶಿವಾನುಭವದ ಪ್ರಸಾರಕ, ಚರಜಂಗಮನಾನು, ಶರಣ ಹಳಕಟ್ಟಿಯವರಿಂದಲೇ ಸಂಸ್ಕಾರ ಹೊಂದಿದವ ನಾನು, ೧೯೨೬ ರಿಂದಲೂ ಇಂದಿನವರೆಗೆ ಹಳಕಟ್ಟಿ ಶರಣರು ತೋರಿದ ಶಿವಾನುಭವ ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇನೆ'.

– ಶ್ರೀ ಬಸವಯ್ಯ ಮಠದ, ಪುಣ್ಯದಕಟ್ಟೆ ಜಿ.ಬಳ್ಳಾರಿ (೯೦ ವರ್ಷ)

'ವೈದಿಕ ಸಂಸ್ಕೃತಿಯೇ ವೀರಶೈವ ಸಂಸ್ಕೃತಿ ಎಂದು ಭಾವಿಸಿ ನಮ್ಮ ಮಠಾಧಿಪತಿಗಳು ವ್ಯವಹಾರ ನಡೆಸಿದ ಕಾಲದಲ್ಲಿ, ಸಂಸ್ಕೃತವೇ ಕನ್ನಡವೆಂದು ನಂಬಿ ಸಂಸ್ಕೃತ ಪಾಠಶಾಲೆಗಳನ್ನು ತೆರೆದ ಸಂದರ್ಭದಲ್ಲಿ, ವೀರಶೈವ ಸಾಹಿತ್ಯವನ್ನು ಅದರ ಧರ್ಮಗುರುಗಳೇ ಮರೆತಿದ್ದ ಕಾಲದಲ್ಲಿ ವಚನಶಾಸ್ತ್ರ–ಷಟ್‌ಸ್ಥಲ ದರ್ಶನ ಮಾಡಿಸಿದವರು ಫ. ಗು. ಹಳಕಟ್ಟಿ ಅಣ್ಣನವರು'.

– ಡಾ ॥ ಹಿರೇಮಲ್ಲೂರ ಈಶ್ವರನ್ ಟೊರಂಟೋ ವಿಶ್ವವಿದ್ಯಾಲಯ, ಕೆನಡಾ.

'ಬಸವಣ್ಣನವರು ಹೇಳಿದ ಕರ್ತಾರನ ಕಮ್ಮಟದಲ್ಲಿ ಹಳಕಟ್ಟಿಯರು ಕಾಯಿಸಿಕೊಂಡರು. ಬಡೆಯಿಸಿಕೊಂಡರು, ಕತ್ತರಿಸಿಕೊಂಡರು, ಕೆಂಬಚ್ಚಿನ ಇಕ್ಕಟ್ಟಿನಲ್ಲಿ ಹಾಯ್ದು ಹೋದರು. ಇಕ್ಕುಳದಲ್ಲಿ ಸಿಲುಕಿಕೊಂಡರು. ಕಡೆಗೊಮ್ಮೆ ಸುಂದರ ಆಭರಣವಾಗಿ ನಡೆ ಮಾಡು ಏರಿ ತೆರಳಿದರು'.

– ಶ್ರೀ ಸಿಂಪಿ ಲಿಂಗಣ್ಣನವರು, ಚಡಚಣ.

'ಹಳಕಟ್ಟಿಯವರು ಸಂಗ್ರಹಿಸಿದ ವಚನಗಳು ಜನಸಾಮಾನ್ಯರ ಹೃದಯವನ್ನು ಮುಟ್ಟಿವೆ. ಇಂದು ನಾವು ಡಾ॥ ಹಳಕಟ್ಟಿಯವರಿಗೆ ಸಲ್ಲಿಸುತ್ತಿರುವ ಗೌರವ ಶಾರದಾದೇವಿಗೆ ಸಲ್ಲಿಸುವ ಗೌರವಾಗಿದೆ'.

– ಡಾ॥ ಡಿ. ಸಿ. ಪಾವಟೆ ಕುಲಪತಿಗಳು, ಕ.ವಿ.ವಿ. ಧಾರವಾಡ.

ಯಾವುದೋ ಅಮೃತಗಳಿಗೆ : ನಿಮ್ಮ ದೃಷ್ಟಿಗೆ ಬಿತ್ತು
ಹೂತಿಟ್ಟ ಹೊನ್ನಗಣಿ !

– ಶ್ರೀ ಚೆನ್ನವೀರ ಕಣವಿ, ಧಾರವಾಡ

ಏನೂ ಎನೂ ಇಲ್ಲದಿಹ ಘನಫಕೀರಾ
ಸೂರೆಗೈದೆಯೋ ಜಗಕೆ ವಚನ ಭಂಡಾರಾ

– ಶ್ರೀ ಈಶ್ವರ ಸಣಕಲ್ಲ, ಧಾರವಾಡ

ಕವನಕಟ್ಟಿದರೇನು ? ಹಾಡ ಹಾಡಿದರೇನು ?
ತೀರಿಸಲು ಸಾಧ್ಯವೇ ಅವನ ಋಣಭಾರ !

– ಶ್ರೀ ಸಿದ್ಧಣ್ಣ ಕನಮಡಿ, ಧಾರವಾಡ

ಶರಣ ಫ. ಗು. ಹಳಕಟ್ಟಿವರ ಗ್ರಂಥಗಳು

(ಸಂಪಾದಿತ, ರಚಿತ, ಪ್ರಕಾಶಿತ, ಮುದ್ರಿತ, 'ಶಿವಾನುಭವ' ದಲ್ಲಿ ಹಾಗೂ ಶಿವಾನುಭವ ಗ್ರಂಥಮಾಲೆಯ ಹೆಸರಿನಲ್ಲಿ ಪ್ರಕಟವಾದ ಕೃತಿಗಳು)

೧. ವಚನಶಾಸ್ತ್ರಸಾರ ಭಾಗ–೧ (ಪೂರ್ವಾರ್ಧ) (೧೯೨೩)
೨. ಬಸವೇಶ್ವರನ ವಚನಗಳು (೧೯೨೬)
೩. ಮಹಿಮ್ನ ಸ್ತೋತ್ರ (೧೯೩೬)
೪. ಮಹಾದೇವಿಯಕ್ಕನ ವಚನಗಳು (೧೯೨೬)
೫. ಲಿಂಗಪೂಜೆಯ ತತ್ವಗಳು (೧೯೨೬)
೬. ವೀರಶೈವ ರಗಳೆ (ಶಂಕರದೇವ ಕೃತಿ) (೧೯೨೬)
೭. ವರದಾನಿ ಗುಡ್ಡಮ್ಮೆಯ ಚರಿತ್ರೆಯ (೧೯೨೬)
೮. ಗಣದಾಸಿ ವೀರಣ್ಣನ ವಚನಗಳು (೧೯೨೬)
೯. ತೋಂಟದಾರ್ಯರ ರಗಳೆ (೧೯೨೬)
೧೦. ಏಕೋತ್ತರ ಶತಸ್ಥಲ (೧೯೨೬)
೧೧. ಶಿವಯೋಗಾಚರಣೆ (೧೯೨೬)
೧೨. ಸಂಗನಬಸವೇಶ್ವರನ ವಚನಗಳು (೧೯೨೭)
೧೩. ಘನಲಿಂಗನ ವಚನಗಳು (೧೯೨೭)
೧೪. ನೈತಿಕ ಮತ್ತು ಭಕ್ತಿಯ ವಚನಗಳು (೧೯೨೭)
೧೫. ದೇವರದಾಸಿಮಯ್ಯನ ವಚನಗಳು (೧೯೨೮)
೧೬. ಲಿಂಗಾಯತ ಮತ ತತ್ವ (೧೯೨೮)
೧೭. ಸಂಗೀತದಲ್ಲಿ ಶಿವಶರಣರ ವಚನಗಳು (೧೯೨೮)
೧೮. ಮೈಲಾರ ಬಸಪ್ಪನವರ ಶಿವಾನುಭವ ದರ್ಪಣ (೧೯೨೯)
೧೯. ಹಡಪದ ಅಪ್ಪಣ್ಣನ ವಚನಗಳು (೧೯೨೯)
೨೦. ಲಿಂಗಮ್ಮನ ವಚನಗಳು (೧೯೨೯)
೨೧. ಕೈ.ವಾ. ಚೆನ್ನಬಸಪ್ಪ ಬಸಲಿಂಗಪ್ಪ ಧಾರವಾಡ ಇವರ ಚರಿತ್ರೆ (೧೯೩೦)
೨೨. ಸಕಲೇಶ ಮಾದರಸನ ವಚನಗಳು (೧೯೩೦)
೨೩. ಶಿವಾನುಭವ ಸೂತ್ರ (೧೯೩೦)
೨೪. ಶೂನ್ಯ ಸಂಪಾದನೆ (ಭಾಗ–೧) (೧೯೩೦)
೨೫. ಪ್ರಭುದೇವರ ವಚನಗಳು (೧೯೩೧)
೨೬. ಹರಿಹರನ ರಗಳೆಗಳು ಭಾಗ–೧ (೧೯೩೧)
೨೭. ಆದಯ್ಯನ ವಚನಗಳು (೧೯೩೧)
೨೮. ಆದಿಶೆಟ್ಟಿ ಪುರಾಣ (ರಾಘವಾಂಕ ವಿರಚಿತ) (೧೯೩೧)
೨೯. ತ್ರಿಮೂರ್ತಿಗಳು (೧೯೩೨)
೩೦. ಷಟ್‌ಸ್ಥಲ (೧೯೩೨)

೩೧. ಸಿದ್ಧರಾಮೇಶ್ವರರ ವಚನಗಳು (೧೯೩೨)
೩೨. ಕೊಡಗಿನ ಸಂಸ್ಥಾನದ ರಾಜೇಂದ್ರನಾಮೆ (೧೯೩೨)
೩೩. ಚೆನ್ನಬಸವೇಶ್ವರನ ವಚನಗಳು (೧೯೩೨)
೩೪. ನಿರಂಜನ ವಂಶ ರತ್ನಾಕರ (೧೯೩೨)
೩೫. ಅಂಬಿಗರ ಚೌಡಯ್ಯನ ವಚನಗಳು (೧೯೩೩)
೩೬. ಕಾಲಜ್ಞಾನದ ವಚನಗಳು (೧೯೩೩)
೩೭. ಸಟೀಕಾ ಷಟ್‌ಸ್ಥಲ ಬ್ರಹ್ಮದೀಪಿಕಾ (೧೯೩೩)
೩೮. ಹರಿಹರನ ರಗಳೆಗಳು ಭಾಗ–೨ (೧೯೩೩)
೩೯. ಹರಿಹರನ ರಗಳೆಗಳು ಭಾಗ–೩ (೧೯೩೩)
೪೦. ಹರಿಹರನ ರಗಳೆಗಳು ಭಾಗ–೪ (೧೯೩೩)
೪೧. ಬೀಳಗಿಯ ಅರಸರುಗಳ ವಂಶಾವಳಿ (೧೯೩೩)
೪೨. ಸೋಮೇಕಟ್ಟಿ ಕವಿ ವೃಷಭೇಂದ್ರನ ಕೈವಲ್ಯ ಪದ್ಯಗಳು (೧೯೩೩)
೪೩. ವಚನಶಾಸ್ತ್ರಸಾರ ಭಾಗ–೧ (ಉತ್ತರಾರ್ಧ) (೧೯೩೪)
೪೪. ಬಸವೇಶ್ವರನ ಷಟ್‌ಸ್ಥಲ ವಚನಗಳ ಕಥಾಸಾರ (೧೯೩೪)
೪೫. ಹರಿಹರನ ರಗಳೆಗಳು ಭಾಗ–೫ (೧೯೩೪)
೪೬. ಹಾಗಲವಾಡಿ ಸಿದ್ಧರಾಮಪ್ಪ ಕೃತ ಮಹಾನುಭವ ಪ್ರಕಾಶಿನಿ (೧೯೩೪)
೪೭. ಉರಿಲಿಂಗಪೆದ್ದಿಯ ವಚನಗಳು (೧೯೩೪)
೪೮. ಹರಿಹರನ ರಗಳೆಗಳು ಭಾಗ–೬ (೧೯೩೫)
೪೯. ಮೋಳಿಗೆಯ ಮಾರಯ್ಯನ ವಚನಗಳು (೧೯೩೬)
೫೦. ಶ್ರೀ ನಾಗಭೂಷಣ ಘನಮಠದಾರ್ಯರ ಕೃಷಿಜ್ಞಾನ ಪ್ರದೀಪಿಕೆ (೧೯೩೬)
೫೧. ಶಿವಾನುಭವ ಸತ್ಯಮಾರ್ಗ (೧೯೩೭)
೫೨. ಶಿವಶರಣರ ಸಂಕೀರ್ಣ ವಚನಗಳು ಭಾಗ–೧ (೧೯೩೮)
೫೩. ಶಿವಶರಣರ ಸಂಗೀತ ವಚನಗಳು (೧೯೩೮)
೫೪. ಹರಿಹರನ ರಗಳೆಗಳು ಭಾಗ–೭ (೧೯೩೮)
೫೫. ಮಡಿವಾಳ ಮಾಚಿದೇವನ ವಚನಗಳು (೧೯೩೮)
೫೬. ವಚನಶಾಸ್ತ್ರಸಾರ ಭಾಗ–೨ (೧೯೩೮)
೫೭ ವಚನಶಾಸ್ತ್ರಸಾರ ಭಾಗ–೩ ಪೂರ್ವಾರ್ಧ (೧೯೩೯)
೫೮. ಶಿವಶರಣರ ಸಂಕೀರ್ಣ ವಚನಗಳು ಭಾಗ–೨ (೧೯೩೯)
೫೯. ಪದಮಂತ್ರಗೋಪ್ಯ (ಚೆನ್ನಬಸವ) (೧೯೩೯)
೬೦. ಭೈರವೇಶ್ವರನ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ (೧೯೩೯)
೬೧. ಹಾವಿನಹಾಳ ಕಲ್ಲಿದೇವನ ವಚನಗಳು (೧೯೩೯)
೬೨. ಸತ್ಯಕ್ಕನ ವಚನಗಳು (೧೯೩೯)
೬೩. ಮಧುವರಸನ ವಚನಗಳು (೧೯೩೯)

೬೪. ಶಿವಶರಣರ ಸಂಕೀರ್ಣ ವಚನಗಳು ಭಾಗ-೩ (೧೯೪೦)
೬೫. ಶಿವಾನುಭವ ಸೃಷ್ಟಿಯ ವಚನಗಳು (೧೯೪೦)
೬೬. ಶಿವಾನುಭವ ಶಬ್ದಕೋಶ (೧೯೪೦)
೬೭. ಹರಿಹರನ ರಗಳೆಗಳು ಭಾಗ-೮ (೧೯೪೦)
೬೮. ಬಾಹೂರ ಬೊಮ್ಮಯ್ಯನ ವಚನಗಳು (೧೯೪೦)
೬೯. ಶಿವಲೆಂಕ ಮಂಚಣ್ಣನ ವಚನಗಳು (೧೯೪೦)
೭೦. ಕವಿ ಗುರುಬಸವ ಕೃತ ಅವಧೂತಗೀತೆ (೧೯೪೧)
೭೧. ಸಟೀಕ ಏಕೋತ್ತರ ಶತಸ್ಥಲ (೧೯೪೧)
೭೨. ಹರಳಯ್ಯನ ಚರಿತ್ರೆಯು (೧೯೪೧)
೭೩. ಹರಳಯ್ಯನ ತ್ರಿಪದಿಗಳು (೧೯೪೧)
೭೪. ಏಲೇಶ ಕೇತಯ್ಯನ ವಚನಗಳು (೧೯೪೧)
೭೫. ಸೊಡ್ಡಳ ಬಾಚರಸನ ವಚನಗಳು (೧೯೪೧)
೭೬. ಹೊಸಪದ್ಧತಿಯ ಬಸವೇಶ್ವರನ ವಚನಗಳು (೧೯೪೨)
೭೭. ಕೆಳದಿ ಸಂಸ್ಥಾನದ ರಾಜ ವಂಶಾವಳಿ (೧೯೪೩)
೭೮. ಶಿವಶರಣರ ಪದಗಳು ಭಾಗ-೧ (೧೯೪೩)
೭೯. ಶಿವಶರಣರ ಚರಿತ್ರೆಗಳು ಭಾಗ-೧ (೧೯೪೩)
೮೦. ೫೦ ತರದ ಆಚಾರಗಳು (ಚೆನ್ನಬಸವಣ್ಣ) (೧೯೪೩)
೮೧. ಭಕ್ತಿಯ ವಚನಗಳು (೧೯೪೩)
೮೨. ಗುಮ್ಮಳಾಪುರದ ಸಿದ್ಧಲಿಂಗದೇವರ ವಚನಗಳು (೧೯೪೩)
೮೩. ಶಿವಶರಣರ ಚರಿತ್ರೆಗಳು ಭಾಗ-೧ (೧೯೪೪)
೮೪. ಶಿವಶರಣರ ಚರಿತ್ರೆಗಳು ಭಾಗ-೨ (೧೯೪೪)
೮೫. ಕಾಲಜ್ಞಾನದ ವಚನಗಳು (೧೯೪೪)
೮೬. ೬೩ ಶಿವಶರಣರ ಚರಿತ್ರೆಗಳು (೧೯೪೫)
೮೭. ಮೆರೆಮಿಂಡದೇವನ ವಚನಗಳು (೧೯೪೫)
೮೮. ಕಂಪನಿಯ ಸರಕಾರದ ದಂಡಕ (೧೯೪೬)
೮೯. ವಚನಶಾಸ್ತ್ರ ಸಾರ ಭಾಗ-೩ (ಉತ್ತರಾರ್ಧ) (೧೯೪೭)
೯೦. ಶಿವಶರಣರ ಚರಿತ್ರೆಗಳು ಭಾಗ-೩ (೧೯೪೭)
೯೧. ಪರಮಾತ್ಮನ ಸ್ವರೂಪ (೧೯೪೮)
೯೨. ಶ್ರೀ ಬಸವೇಶ್ವರನ ತತ್ವಗಳು (೧೯೫೦)
೯೩. ವೇಮಣ್ಣಯೋಗಿಯ ಜ್ಞಾನಮಾರ್ಗದ ಪದ್ಯಗಳು (೧೯೫೦)
೯೪. ಅರಿವಿನ ಮಾರಿತಂದೆ ವಚನಗಳು (೧೯೫೧)
೯೫. ಪ್ರಾಣಲಿಂಗ ಜ್ಞಾನದರ್ಪಣ ಚಾರಿತ್ರ್ಯ (೧೯೫೧)
೯೬. ಶಿವಶರಣರ ಚರಿತ್ರೆಗಳು ಭಾಗ-೪) (೧೯೫೨)

೯೭. ಸಟೀಕ ಬಸವೇಶ್ವರ ವಚನಗಳು (೧೯೫೩)
೯೮. ಸಟೀಕ ಶೂನ್ಯಸಂಪಾದನೆ ಪ್ರಥಮೋಪದೇಶ (೧೯೫೩)
೯೯. ಸಟೀಕ ಶೂನ್ಯಸಂಪಾದನೆ ದ್ವಿತೀಯೋಪದೇಶ (೧೯೫೪)
೧೦೦. ಸಟೀಕ ಶೂನ್ಯಸಂಪಾದನೆ ತೃತೀಯೋಪದೇಶ (೧೯೫೪)
೧೦೧. ಸಟೀಕ ಶೂನ್ಯ ಸಂಪಾದನೆ ಭಾಗ–೪ (೧೯೫೪)
೧೦೨. ಸಟೀಕ ಶೂನ್ಯ ಸಂಪಾದನೆ (ಭಕ್ತ ಜಂಗಮದ ಸ್ಥಲ) ಭಾಗ–೫ (೧೯೫೪)
೧೦೩. ಸಕಲಾಗಮ ಶಿಖಾಮಣಿ ವಚನ (೧೯೫೪)
೧೦೪. ೭೭೦ ಅಮರಗಣಾಧೀಶ್ವರರು (೧೯೫೪)
೧೦೫. ನೂರೊಂದರ ಹಾಡುಗಳು (೧೯೫೫)
೧೦೬. ನಿಜದ ಅರಿವು (೧೯೫೬)
೧೦೭. ಶಿವಶರಣರ ಅಹಿಂಸಾಧರ್ಮ (೧೯೫೬)
೧೦೮. ಶೂನ್ಯಸಂಪಾದನೆ (೩ಮತ್ತು ೧೦ನೇ ಉಪದೇಶಗಳು) (೧೯೫೬)
೧೦೯. ಸಾರಂಗಮಠಾಧೀಶ್ವರರು (೧೯೫೬)
೧೧೦. ಗಣಾಷ್ಟೋತ್ತರ–ಘನಮಠೇಶ (೧೯೫೭)
೧೧೧. ಶರಣಸತಿಯರ ನೂರೆಂಟು ನಾಮಗಳು (೧೯೫೭)
೧೧೨. ಶಿವಶರಣೆಯರ ಚರಿತ್ರೆಗಳು (೧೯೫೮)
೧೧೩. ಬ್ರಾಹ್ಮಣ ಶಿವಶರಣರ ಚರಿತ್ರೆಗಳು (೧೯೫೯)
೧೧೪. ದೇವರ ದಾಸಿಮಾರ್ಯರ ಕಥೆ (ಯಕ್ಷಗಾನ) (೧೯೬೦)
೧೧೫. ಸದಾ ಆನಂದಪ್ಪನ ವಚನಗಳು (೧೯೬೦)

(ಇನ್ನೂ ನಾಲ್ಕಾರು ಗ್ರಂಥಗಳು ಪ್ರಕಾಶನಗೊಂಡಿರಬಹುದು. ನನಗೆ ಗ್ರಂಥದ ಹೆಸರುಗಳು ಲಭ್ಯವಾಗಿಲ್ಲ. ಮೇಲಿನ ಗ್ರಂಥಸೂಚಿ ಸಿದ್ಧಪಡಿಸಲು ಈಗಾಗಲೇ ಪ್ರಕಟವಾದ ಅನೇಕ ಲೇಖಕರ ಗ್ರಂಥಗಳನ್ನು, ಶ್ರೀ ಹಳಕಟ್ಟಿ ಶರಣರ ಶಿವಾನುಭವ ಪತ್ರಿಕೆಗಳನ್ನು ಬಳಸಿಕೊಳ್ಳಲಾಗಿದೆ. ಆ ಎಲ್ಲ ಗ್ರಂಥಕರ್ತೃಗಳಿಗೆ ಅನಂತ ಶರಣುಗಳು –ಸಿಲಂ)

ಈ ಗ್ರಂಥಗಳಲ್ಲದೇ ಶರಣ ಫ. ಗು. ಹಳಕಟ್ಟಿಯವರು ತಮ್ಮ **'ಶಿವಾನುಭವ'** ಪತ್ರಿಕೆಯಲ್ಲಿ ೨೦೦ ಮೇಲ್ಪಟ್ಟು ಸಂಶೋಧಿತ, ಲೇಖನಗಳನ್ನು ಬರೆದಿದ್ದಾರೆ. ಅವೆಲ್ಲವುಗಳನ್ನು ಕ್ರೋಢೀಕರಿಸಿ ಪ್ರಕಟಿಸಿದರೆ ೧೫,೦೦೦ ಪುಟಗಳ ಬೃಹತ್ ಸಂಪುಟಗಳಾಗಬಹುದು. ನಾಡಿನ ಬೇರೆ ಬೇರೆ ಪತ್ರಿಕೆಗಳಲ್ಲಿಯೂ ಲೇಖನ–ಗಳನ್ನು ಬರೆದು ಪ್ರಕಟಿಸಿದ್ದಾರೆ. ಕನ್ನಡ ಏಕೀಕರಣದ ರೂವಾರಿಗಳಲ್ಲೊಬ್ಬರಾದ ಹಳಕಟ್ಟಿಯವರು ತಮ್ಮ **'ನವ ಕರ್ನಾಟಕ'** ವಾರ ಪತ್ರಿಕೆಯಲ್ಲಿಯೂ ಕನ್ನಡ ಭಾಷೆ, ನಾಡು–ನುಡಿ ಬಗ್ಗೆ, ಕರ್ನಾಟಕ ಏಕೀಕರಣ ಬಗ್ಗೆ, ಕನ್ನಡ ಆಡಳಿತ, ವ್ಯವಹಾರ ಭಾಷೆ ಆಗುವ ಬಗ್ಗೆ, ಬಳಸುವ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ. ಒಟ್ಟಿನಲ್ಲಿ ಹೇಳುವದಾದರೆ ಶರಣ ಶ್ರೀ ಹಳಕಟ್ಟಿಯವರು ಮಾತನಾಡುವ ದೇವರು, ನಡೆದಾಡುವ ವಿಶ್ವಕೋಶವಾಗಿದ್ದರು.

(ಡಾ. ಹಳಕಟ್ಟಿಯವರ ಸಮಗ್ರ ಸಾಹಿತ್ಯದ ೧೫ ಸಂಪುಟಗಳನ್ನು ಪ್ರಕಟಿಸಿದ ಬಿ.ಎಲ್.ಡಿ.ಇ. ಸಂಸ್ಥೆಯು ಅಭಿನಂದನಾರ್ಹವಾಗಿದೆ) –**ಸಿದ್ಧಣ್ಣ ಲಂಗೋಟಿ**

ಗ್ರಂಥ ಋಣ

೧.	ಹಳಕಟ್ಟ ಗುರುಬಸವಪ್ಪನವರು	–ಶ್ರೀ ಎಸ್. ಬಿ. ಹಳಕಟ್ಟಿ
೨.	ವಚನಪಿತಾಮಹ (ಸ್ಮಾರಕ ಸಂಪುಟ)	–ಸಂ॥ ಎಸ್. ಜಿ. ಹಂಡಿ
೩.	೩೫ ವರುಷಗಳ ಶಿವಾನುಭವ ಪತ್ರಿಕೆಗಳು	–ಸಂ॥ ಫ.ಗು. ಹಳಕಟ್ಟಿ
೪.	ವಚನಶಾಸ್ತ್ರಸಾರ ಭಾಗ–೧,೨,೩	–ಸಂ॥ ಫ.ಗು. ಹಳಕಟ್ಟಿ
೫.	ಹಳಕಟ್ಟಿ ಶರಣರಿಂದ ಸಂಪಾದಿತವಾಗಿರುವ ಲಭ್ಯವಿರುವ ಬಹತೇಕ ಗ್ರಂಥಗಳು	–ಸಂ. ಫ.ಗು. ಹಳಕಟ್ಟಿ
೬	ರಾಷ್ಟ್ರಧರ್ಮ ದೃಷ್ಟಾರ ಹರ್ಡೇಕರ ಮಂಜಪ್ಪ	–ಗ.ಸ. ಹಾಲಪ್ಪ
೭	ಹರ್ಡೇಕರ ಮಂಜಪ್ಪನವರ ಸ್ಮಾರಕ ಗ್ರಂಥ	–ಡಾ॥ ಶಿ. ಚೆ. ನಂದಿಮಠ ಡಾ॥ ಕುವೆಂಪು ಹಾಗೂ ಇತರರು
೮.	ಅ.ಭಾ.ವೀ. ಮಹಾಸಭೆಯ ಅಧ್ಯಕ್ಷರುಗಳ ಭಾಷಣ ಸಂಗ್ರಹ ಗ್ರಂಥ	–ಸಂ॥ ಕೆ. ಎಂ. ಶಿವಲಿಂಗಯ್ಯ
೯.	ಬಂಥನಾಳ ಶಿವಯೋಗಿಗಳು	–ಈಶ್ವರಚಂದ್ರ ಚಿಂತಾಮಣಿ
೧೦.	ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು ಸಂಪುಟ– ೧	– ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
೧೧.	ಶಿವಾನುಭವ ಪತ್ರಿಕೆ (ಫ.ಗು. ಹಳಕಟ್ಟಿ)	–ಸಂ॥ ಎಂ. ಎಂ. ಕಲಬುರ್ಗಿ
೧೨.	ವಚನಗುಮ್ಮಟ ಫ.ಗು. ಹಳಕಟ್ಟಿ	–ಜಿ. ಎಸ್. ಸಿದ್ಧಲಿಂಗಯ್ಯ
೧೩.	ಹರ್ಡೇಕರ ಮಂಜಪ್ಪನವರು	–ಪ್ರೊ. ಸಿದ್ಧಣ್ಣ ಲಂಗೋಟಿ
೧೪.	ವೀರಶೈವ ಸಾಹಿತ್ಯ ಸಮೀಕ್ಷೆ	–ಸಂ. ಸದಾನಂದ ಕನವಳ್ಳಿ –ಚೆನ್ನಪ್ಪ ಕೆರಿಮನಿ
೧೫.	ಹಳಕಟ್ಟಿ ಫಕೀರಪ್ಪನವರು	–ಸಂಗಮನಾಥ ಜಿ. ಹಂಡಿ
೧೬	ಶರಣರು ಕಂಡ ಬಸವಣ್ಣ	–ಹ.ದೇ. ಚಂದನಗೌಡರ
೧೭	ಧಾರವಾಡದ ಬಸವತತ್ತ್ವ ಪ್ರಸಾರ ಸಂಸ್ಥೆಯ ಶಿವಾನುಭವ ಸಂಚಿಕೆಗಳು	

ಪ್ರೊ. ಸಿದ್ಧಣ್ಣ ಲಂಗೋಟಿ ಅವರ ಕೃತಿಗಳು

೧. ಅಲ್ಲಮಪ್ರಭುದೇವರ ಜೀವನ ಸಂದೇಶ ೧೯೭೯
೨. ಅಕ್ಕಮಹಾದೇವಿಯ ಜೀವನ ದರ್ಶನ ೧೯೭೯
೩. ಲಿಂಗಾಯತ ಧರ್ಮ ಸಮಾಜ ತತ್ವಜ್ಞಾನ ೧೯೭೯
೪. ಲಿಂಗಾಯತ ಧರ್ಮದ ಮೂಲತತ್ವಗಳು ೧೯೭೯
೫. ಶಿವಯೋಗಿಣಿ ಅಕ್ಕನಾಗಮ್ಮ (ಸಂಪಾದಿತ) ೧೯೭೯
೬. ಗಣನಾಯಕ ಮಡಿವಾಳ ಮಾಚಿದೇವರು ೧೯೭೯
೭. ಮರಣವೇ ಮಹಾನವಮಿ ೧೯೮೦
೮. ಷಟಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರು ೧೯೮೦
೯. ಬಸವಬೆಳಗು (ಸಂಪಾದಿತ) ೧೯೮೦
೧೦. ಪ್ರಭುವಿನ ವಾಣಿಯಲ್ಲಿ ಬಸವಣ್ಣನವರು ೧೯೮೦
೧೧. ಲಿಂಗವಂತ ಧರ್ಮ ಪರಿಚಯ (ಸಂಪಾದಿತ) ೧೯೮೧
೧೨. ವಚನ ಸಂಶೋಧನ ಪಿತಾಮಹ ಫ.ಗು. ಹಳಕಟ್ಟಿಯವರು ೧೯೮೧
೧೩. ಬಸವಣ್ಣನವರ ಬಯ್ಗುಳಗಳು ೧೯೮೧
೧೪. ಅಕ್ಕ ಕಂಡ ಅಣ್ಣ ೧೯೮೧
೧೫. ಅಂಬಿಗರ ಚೌಡಯ್ಯ ೧೯೮೧
೧೬. ಶರಣರ ಶಿವರಾತ್ರಿ ೧೯೮೨
೧೭. ಸ್ವಾಮಿ ವಿವೇಕಾನಂದರ ದೇಶಭಕ್ತಿ ಕಲ್ಪನೆ ೧೯೮೨
೧೮. ಬಸವಾದಿ ಶರಣರ ವಚನಾಮೃತ (ಸಂಪಾದಿತ) ೧೯೮೩
೧೯. ವಿಭೂತಿ ನಿರ್ಮಾಣ ವಿಧಾನ ೧೯೮೪
೨೦. ಬಾಚಿಕಾಯಕದ ಬಸವಪ್ಪ ಕಾಳವ್ವೆ ೧೯೮೪
೨೧. ಶರಣರು ಹಾಗೂ ಮೂಢನಂಬಿಕೆಗಳು ೧೯೮೪
೨೨. ಇಷ್ಟಲಿಂಗ ನಿರ್ಮಾಣ ವಿಧಾನ ೧೯೮೫
೨೩. ಹಡಪದ ಅಪ್ಪಣ್ಣ ಲಿಂಗಮ್ಮ ೧೯೮೫
೨೪. ಶ್ರೀ ಗುರುಸಿದ್ಧ ಪ್ರಭುದೇವರು ೧೯೮೫
೨೫. ಇಷ್ಟಲಿಂಗ ಪೂಜಾ ವಿಧಾನ ೧೯೮೫
೨೬. ಫಕ್ಕೀರಪ್ಪ ಮುರಗೋಡ ಮಾಸ್ತರು ೧೯೮೫
೨೭. ಶಿವಶರಣರ ಕ್ರಾಂತಿ (ಕ.ವಿ.ವಿ. ಪ್ರಕಟಣೆ) ೧೯೮೬
೨೮. ವಿಶ್ವಗುರು ಬಸವಣ್ಣನವರ ವಚನಗಳು (ಸಂಪಾದಿತ) ೧೯೮೬
೨೯. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರು ೧೯೮೬
೩೦. ಯುಗ ಪುರುಷ ಚೆನ್ನಬಸವ ಪಟ್ಟಾಧ್ಯಕ್ಷರು ೧೯೮೭
೩೧. ಬಸವದರ್ಶನ (ಸಂಪಾದಿತ) ೧೯೮೭
೩೨. ವಚನಸಾಹಿತ್ಯ : ತಾತ್ವಿಕ ವಿವೇಚನೆ ೧೯೮೭
೩೩. ವಿಶ್ವವಿಖ್ಯಾತ ತತ್ವಜ್ಞಾನಿ ಡಾ. ರಾಧಾಕೃಷ್ಣನ್‌ರು ೧೯೮೮
೩೪. ಧರ್ಮಗುರು ಜಗಜ್ಯೋತಿ ಬಸವಣ್ಣನವರು ೧೯೮೮
೩೫. ಅಲ್ಲಮ ಪ್ರಭುದೇವರ ವಚನಗಳು (ಸಂಪಾದಿತ) ೧೯೮೯
೩೬. ಬಸವಣ್ಣನವರು ಮತ್ತು ಜಾಗತಿಕ ಶಾಂತಿ ೧೯೮೯
೩೭. ಬಸವಭಕ್ತ ಘನಮಠ ಶಿವಯೋಗಿಗಳು ೧೯೮೯
೩೮. ಚೆನ್ನಬಸವಣ್ಣನವರ ವಚನಗಳು (ಸಂಪಾದಿತ) ೧೯೮೯
೩೯. ಬಸವಭಕ್ತ ಅಥಣಿ ಶಿವಯೋಗಿಗಳು ೧೯೮೯
೪೦. ದೇವದಾಸಿ ಪದ್ಧತಿ ವಿಮೋಚನೆ ಹಾಗೂ ಬಸವಣ್ಣನವರು ೧೯೮೯
೪೧. ಸಿದ್ಧರಾಮೇಶ್ವರ ವಚನಗಳು (ಸಂಪಾದಿತ) ೧೯೯೦
೪೨. ಡಾ. ಜಚನಿ ಅಂದು-ಇಂದು : ಒಂದು ವಿಮರ್ಶೆ ೧೯೯೦
೪೩. ಶ್ರೀ ಗುರುಬಸವ ಮಂಟಪ ನಡೆದು ಬಂದ ದಾರಿ ೧೯೯೧

೪೪. ಮುರಗೋಡ ಮಹಾಂತಜ್ಜನವರು ೧೯೯೨
೪೫. ಬಸವಕಲ್ಯಾಣ ದರ್ಶನ ೧೯೯೪
೪೬. ಮಹಾಚೈತ್ರ (ವಿಮರ್ಶೆ) ೧೯೯೪
೪೭. ಬಸವಾದಿ ಶರಣರ ವಚನಜ್ಯೋತಿ (ಸಂಪಾದಿತ) ೧೯೯೬
೪೮. ಬಸವ ವಚನ ದೀಪ್ತಿ : ಒಂದು ವಿಮರ್ಶೆ ೧೯೯೬
೪೯. ಕುಮಾರ ಕಕ್ಕಯ್ಯನ ವಚನಗಳು (ಸಂಪಾದಿತ) ೧೯೯೭
೫೦. ಕುಮಾರ ಕಕ್ಕಯ್ಯ ಪೋಳ ೧೯೯೮
೫೧. ಬೀಳೂರು ಗುರುಬಸವ ಮಹಾಸ್ವಾಮಿಗಳು ೧೯೯೮
೫೨. ಜೇಡರ ದಾಸಿಮಯ್ಯ ದುಗ್ಗಳೆಯರ ವಚನಗಳು (ಸಂ) ೧೯೯೮
೫೩. ಬಸವಾದಿ ಶರಣರ ಶಿವಯೋಗದ ವಚನಗಳು (ಸಂ) ೧೯೯೯
೫೪. ಜಗಜ್ಯೋತಿ ಬಸವೇಶ್ವರ ಅಂಕಿತದ ಸಿಲಂ ವಚನಗಳು ೨೦೦೦
೫೫. ಬಂಥನಾಳ ಸಂಗನಬಸವ ಶಿವಯೋಗಿಗಳು ೨೦೦೦
೫೬. ಬಸವಗುರು ದರ್ಶನ ವಚನಗಳು (ಸಂಪಾದಿತ) ೨೦೦೧
೫೭. ಕಲ್ಯಾಣ ನಾಡಿನ ಶರಣಪರಿಷತ್ತು ನಡೆದು ಬಂದ ದಾರಿ ೨೦೦೧
೫೮. ಶರಣ ಕುಮಾರ ಕಕ್ಕಯ್ಯ ೨೦೦೧
೫೯. ಬಸವ ಬೆಳೆ ೨೦೦೨
೬೦. ಶಿವಯೋಗಿ ವೇಮನರ ವಚನಗಳು (ಸಂ.) ೨೦೦೩
೬೧. ಕನ್ನಡ ಕವಿಕಾವ್ಯ ಪರಂಪರೆ (ಸಂ.) ೨೦೦೪
೬೨. ದರ್ಪಣ – ಸ್ಮರಣ ಸಂಪುಟ (ಸಂ.) ೨೦೦೪
೬೩. ಲಿಂಗಾಯತ ಧರ್ಮ ದರ್ಶನ ೨೦೦೫
೬೪. ಕಾಯಕ ಸಂಜೀವನಿ (ಸಂ.) ೨೦೦೬
೬೫. ಬಸವಣ್ಣನವರು ೨೦೦೭
೬೬. ನೆನಹು–ಡಾ. ಕರ್ಕಿ ಹಾಗೂ ಸಣಕಲ್ಲರ ಸ್ಮರಣ ಗ್ರಂಥ (ಸಂ.) ೨೦೦೭
೬೭. ಡಾ. ಡಿ. ಎಸ್. ಕರ್ಕಿ ಜೀವನ ಸಾಧನೆ ೨೦೦೮
೬೮. ಬಸವ ಜ್ಯೋತಿ ಮಹಾಂತ ಶಿವಯೋಗಿಗಳು ೨೦೧೧
೬೯. ವಿಜಯ ಮಹಾಂತ ಶಿವಯೋಗಿಗಳು ೨೦೧೨
೭೦. ಶಿವ–ಸುಮ (ಸಂಪಾದಿತ) ೨೦೧೨
೭೧. ವಚನ ಶ್ರಾವಣ ೨೦೧೩
೭೨. ಬಸವಾನುಭಾವಿ (ಸಂಪಾದಿತ) ೨೦೧೩
೭೩. ಬಸವಾದಿ ಶಿವಶರಣರ ವಚನಗಳು (ಸಂ.) ೨೦೧೪
೭೪. ಬಸವಯೋಗಿ ಗುರುಮಹಾಂತ ಸ್ವಾಮಿಗಳು ೨೦೧೫
೭೫. ಮಹಾಂತ ಜೋಳಿಗೆ ಶಿಲ್ಪಿ ಮಹಾಂತ ಶಿವಯೋಗಿಗಳು ೨೦೧೫
೭೬. ಡಾ. ಎಂ. ಎಂ. ಕಲಬುರ್ಗಿಯವರು ೨೦೧೫
೭೭. ವಚನ ಸಂಗಮ (ಸಂಪಾದಿತ) ೨೦೧೬
೭೮. ಅಮೃತ ಬೆಳಸು (ಸಂಪಾದಿತ) ೨೦೧೬
೭೯. ಬಸವತತ್ವದ ಮಹಾದಂಡನಾಯಕ ೨೦೧೬
೮೦. ಧರ್ಮಪಿತ ವಿಶ್ವಗುರು ಬಸವಣ್ಣನವರು ೨೦೧೬
೮೧. ಶಿವಾನಂದ ಗುರೂಜಿಯವರು ೨೦೧೭
೮೨. ಬಸವಾದಿ ಶರಣರ ವಚನಗಳಲ್ಲಿ ಲಿಂಗಾಯತ–ಲಿಂಗವಂತ (ಸಂ.) ೨೦೧೭
೮೩. ವಿ. ಸಿದ್ಧರಾಮಣ್ಣ ಶರಣರು ೨೦೧೮
೮೪. ಸುಜ್ಞಾನ ಸಂಪತ್ತು (ಸಂ) ೨೦೧೮
೮೫. ಯುಗಪುರುಷ ಮಹಾಂತ ಶಿವಯೋಗಿಗಳು ೨೦೧೮
೮೬. ವೀರ ವಿರಾಗಿಣಿ ಶರಣೆ ಅಕ್ಕಮಹಾದೇವಿಯವರು ೨೦೧೮
೮೭. ಕ್ರಾಂತಿ ಗಂಗೋತ್ರಿ ಶರಣೆ ಅಕ್ಕನಾಗಮ್ಮನವರು ೨೦೧೯
೮೮. ವಚನ ಸಾಹಿತ್ಯ ಮತ್ತು ತತ್ತ್ವಜ್ಞಾನ ೨೦೨೨
೮೯. ಮಹಾಂತ ಜೋಳಿಗೆ – ವ್ಯಸನಮುಕ್ತ ಆಂದೋಲನ ೨೦೨೨

ವಚನ ಸಂಶೋಧನ ಪಿತಾಮಹ

ಕಲ್ಯಾಣ ಶರಣರ ವಚನ ತಾಡೋಲೆಗಳ
ಹುಡುಕಿ, ಸಂಶೋಧಿಸಿ, ಸಂಗ್ರಹಿಸಿ,
ವಚನಂಗಳ ಸಂಪಾದಿಸಿ ಮುದ್ರಿಸಿ
ನಾಡಿನ ಜನತೆಯ ಕರಸ್ಥಲ, ಮನಸ್ಥಲ
ಭಾವಸ್ಥಲಕೆ ತಂದಿತ್ತ ಮಹಾಮಹಿಮ
ವಚನ ಸಂಶೋಧನ ಪಿತಾಮಹ
ಡಾ. ಫ. ಗು. ಹಳಕಟ್ಟಿ ಶರಣರಿಗೆ
ನಮೋ ನಮೋ ಎಂಬೆನಯ್ಯಾ
ಜಗಜ್ಯೋತಿ ಬಸವೇಶ್ವರ

– ಸಿದ್ಧಣ್ಣ ಲಂಗೋಟಿ

ಪ್ರೊ. ಸಿದ್ಧಣ್ಣ ಲಂಗೋಟಿ ಅವರು ಬಸವಭೂಮಿಯಾದ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಚಾಂದಕವಠೆ ಗ್ರಾಮದ ಲಿಂಗಾಯತ ಕೃಷಿ ಕುಟುಂಬದಲ್ಲಿ ಜನಿಸಿ (೧೯೫೦). ಚಾಂದಕವಠೆ, ಕನ್ನೊಳ್ಳಿ ಗ್ರಾಮಗಳಲ್ಲಿ ಪ್ರಾಥಮಿಕ ಶಿಕ್ಷಣ, ಸಿಂದಗಿಯ ಹೆಚ್. ಜಿ. ಹೈಸ್ಕೂಲದಲ್ಲಿ ಮಾಧ್ಯಮಿಕ ಶಿಕ್ಷಣ, ವಿಜಯಪುರ ಬಿ.ಎಲ್.ಡಿ.ಇ. ಸಂಸ್ಥೆಯಲ್ಲಿ ಬಿ.ಎಸ್‌ಸಿ. ಪದವಿ ಶಿಕ್ಷಣ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ತತ್ತ್ವಜ್ಞಾನ, ಎಂ.ಎ. ಹಿಂದಿ, ಎಂ.ಎ. ಕನ್ನಡ, ಎಲ್‌ಎಲ್.ಬಿ. ಕಾನೂನು ಶಿಕ್ಷಣ, ಸಿ.ವಾಯ್.ಇಡಿ. ಯೋಗ ಶಿಕ್ಷಣ ಪಡೆದವರಾಗಿದ್ದಾರೆ.

ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದು ಸಾಹಿತ್ಯ ಕೃಷಿ ಕೈಕೊಂಡಿದ್ದಾರೆ. ಭಾರತೀಯ ಹಾಗೂ ಪಾಶ್ಚಿಮಾತ್ಯ ತತ್ತ್ವಜ್ಞಾನ ಚಿಂತಕರೂ, ಬಸವತತ್ತ್ವಜ್ಞಾನದ ಅನುಭಾವಿ ಲೇಖಕರೂ ಆಗಿರುವ ಸಿದ್ಧಣ್ಣ ಲಂಗೋಟಿಯವರು ೪೯ಕ್ಕೂ ಮಿಕ್ಕಿ ಗ್ರಂಥಗಳ ರಚನೆ ಹಾಗೂ ಸಂಪಾದನೆ ಮಾಡಿದ್ದಾರೆ.

ಕ್ರಿ.ಶ. ೧೯೯೦ ರಲ್ಲಿ ಹಾಗೂ ಕ್ರಿ.ಶ. ೨೦೦೦ ಇಸ್ವಿಯಲ್ಲಿ ಪಾಶ್ಚಿಮಾತ್ಯ ಹಾಗೂ ಪ್ರಪಂಚದ ಪ್ರಮುಖ ದೇಶಗಳಾದ ಇಂಗ್ಲೆಂಡ, ಅಮೇರಿಕಾ, ಫ್ರಾನ್ಸ್, ಇಟಲಿ, ವೆಟಿಕನ್, ಜರ್ಮನಿ, ಕೆನಡಾ, ಆಸ್ಟ್ರಿಯಾ, ಹಾಲಂಡ, ಸಿಂಗಾಪೂರ, ಅರಬ ರಾಷ್ಟ್ರಗಳ ಪ್ರವಾಸ ಕೈಕೊಂಡು ಬಸವತತ್ತ್ವಜ್ಞಾನ ಕುರಿತು ಉಪನ್ಯಾಸ ನೀಡಿ, ಬಸವ ತತ್ತ್ವ ಪ್ರಸಾರಗೈದು ಬಂದಿದ್ದಾರೆ.

೧೯೮೮ ರಲ್ಲಿ ಬಸವತತ್ತ್ವ ಪ್ರಸಾರ ಸಂಸ್ಥೆ ಸ್ಥಾಪಿಸಿ ಶರಣ ಫ. ಗು. ಹಳಕಟ್ಟಿಯವರ ಶಿವಾನುಭವ ಪತ್ರಿಕೆಗೆ ಮರುಜನ್ಮ ನೀಡಿದ್ದಾರೆ. ೧೯೮೬ ರಲ್ಲಿ ಹರ್ಡೇಕರ ಮಂಜಪ್ಪನವರ ಶತಮಾನೋತ್ಸವ ಆಚರಿಸಿ 'ಶರಣಸಂದೇಶ'ವನ್ನು 'ಬಸವ ಬೆಳಗು' ಹೆಸರಿನಲ್ಲಿ ಮರುಹುಟ್ಟಿಗೆ ಕಾರಣೀಕರ್ತರಾಗಿದ್ದಾರೆ. ೧೯೯೦ ರಲ್ಲಿ ಇಂಗ್ಲೆಂಡಿನಲ್ಲಿ 'ಬಸವ ಇಂಟರನ್ಯಾಶನಲ್ ಫೌಂಡೇಶನ್' ಪ್ರಾರಂಭಿಸಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಚಿತ್ತರಗಿಯಲ್ಲಿ ೧೯೯೬ರಲ್ಲಿ ಬಸವಕೇಂದ್ರ ಸ್ಥಾಪಿಸಿದ್ದಾರೆ. ಇಳಕಲ್ಲ ಶರಣ ಸಿದ್ಧಾಂತ ವಿದ್ಯಾಪೀಠದ ಸಂಚಾಲಕರಾಗಿ ೪೫ ವರುಷಗಳಿಂದ ಶಿವಾನುಭವ ಶಿಬಿರ, ಮಹಾಂತ ಜೋಳಿಗೆ ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ. 'ಜಗಜ್ಯೋತಿ ಬಸವೇಶ್ವರ' ವಚನಾಂಕಿತದಲ್ಲಿ ಸಾವಿರಾರು ವಚನಗಳನ್ನು ಬರೆದು ಆಧುನಿಕ ವಚನಕಾರರಲ್ಲಿ ಒಬ್ಬರಾಗಿದ್ದಾರೆ.

ಗದಗ-ಬೆಟಗೇರಿ

–ಅಂಬಿಗರ ಕುಮಾರಚೌಡಯ್ಯ
ಆಧುನಿಕ ವಚನಕಾರರು